

ಸಂಕ್ರಮಣ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ಸಂಚಿಕೆ
೬೮







సంవేదన
గ్యాలరి

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ದ್ವೈಮಾಸಿಕ ■ ಸಂಪುಟ : ೨೦
■ ಸಂಚಿಕೆ : ೯೧
ಮಾರ್ಚ್-ಏಪ್ರಿಲ್ ೨೦೧೧

ಕಾಲಲಿ ಕಟ್ಟಿದ ಗುಂಡು, ಕೊರಳಲಿ ಕಟ್ಟಿದ ಬೆಂಡು
ತೇಲಲೀಯದು ಗುಂಡು, ಮುಳುಗಲೀಯದು ಬೆಂಡು
ಇಂತಪ್ಪ ಸಂಸಾರ ಶರಧಿಯ ದಾಂಟಿಸಿ
ಕಾಲಾಂತಕನೇ ಕಾಯೋ ಕೂಡಲಸಂಗಯ್ಯ

ಬಸವಣ್ಣ

ಸಂಪಾದಕ: ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ, ೬ನೇ ಬ್ಲಾಕ್, ೩ನೇ ಹಂತ,
೩ನೇ ಘಟ್ಟ, ಬನಶಂಕರಿ, ಬೆಂಗಳೂರು - ೫೬೦ ೦೮೫
ಫೋನ್ ನಂ.:೦೮೦-೨೬೭೯೧೯೨೫
ಮೊಬೈಲ್: ೯೮೪೪೦ ೬೩೫೧೪

email: sanchaya.sahityapatrike@gmail.com

ಒಳಪುಟದ ಚಿತ್ರಗಳು:
ಆಫ್ರಿಕಾದ ಚಿತ್ರಗಳು

ಮುಖಪುಟ ಮತ್ತು
ಪುಟ ವಿನ್ಯಾಸ:
ಎಂ. ಆರ್. ಗುರುಪ್ರಸಾದ್

ಚಂದಾವಿವರ | ● ವಾರ್ಷಿಕ ಚಂದಾ : ರೂ. ೨೫೦/- ● ಎರಡು ವರ್ಷಕ್ಕೆ : ರೂ. ೫೦೦/-

ಚೆಕ್/ ಡಿ. ಡಿ. ಮೂಲಕ ಚಂದಾ ಕಳಿಸುವವರು 'ಸಂಚಯ', ಬೆಂಗಳೂರು ಎಂಬ ಹೆಸರಿಗೆ ಕಳುಹಿಸಿ ಅಥವಾ ಕೆನರಾಬ್ಯಾಕ್, ಬೆಂಗಳೂರಿನ ಗಿರಿನಗರ ಶಾಖೆ ಉಳಿತಾಯ ಖಾತೆ ಸಂ.: ೧೮೨೧೧೦೧೦೦೪೬೮೨ಗೆ ಜಮಾ ಮಾಡಬಹುದು.

ಈ ಸಂಚಿಕೆಯಲ್ಲಿ...

ಹೊಳೆದದ್ದು ತಾರೆ ಉಳಿದದ್ದು ಆಕಾಶ!

ಪ್ರಿಯ ಓದುಗರೆ,

ಅವರು ತಮ್ಮ ಅಮಾಯಕ ಮುಖದಿಂದ, 'ನೋಡಿದ್ರಾ ಹೇಗೆ ಅಣ್ಣ ಹಜಾರೆ ಅವರ ಬೆಂಬಲಕ್ಕೆ ಒಂದು ಕ್ರಾಂತಿಯೇ ನಡೆಯಿತು' ಅಂತ ತುಂಬಾ ಅಭಿಮಾನಪೂರ್ವಕವಾಗಿ ನುಡಿದರು. ವಿಶ್ವಕಪ್ ಜ್ವರದ ನಂತರ ನಮ್ಮ ದೃಶ್ಯ ಮಾಧ್ಯಮಗಳಿಗೆ ಹಜಾರೆ ಜ್ವರ ಆವರಿಸಿಕೊಂಡಿತ್ತು. ಭ್ರಷ್ಟತೆಯ ವಿರುದ್ಧ ಬಡಿದಾಡಬೇಕು ಅಂತ ನಮ್ಮ ಮಧ್ಯಮ ವರ್ಗದ ಮನಸ್ಸುಗಳಿಗೆ ಅನ್ನಿಸಿದ್ದೂ ನಿಜ. ಅಷ್ಟರಮಟ್ಟಿಗೆ ಅದು ಪ್ರಾಮಾಣಿಕವಾದದ್ದೆ. ೯೭ ಗಂಟೆಗಳ ಉಪವಾಸ ಹಾಗೂ ಅದರ ಪರಿಣಾಮವಾಗಿ ಸರ್ಕಾರ ತನ್ನ ಮುಖ ಉಳಿಸಿಕೊಳ್ಳಲು ಲೋಕಪಾಲ್ ಮಸೂದೆಗೆ ಕರಡು ರಚಿಸುವ ಸಮಿತಿ ನಿರ್ಮಿಸಿ ಕೈತೊಳೆದುಕೊಂಡಿತು. ಇನ್ನು ಚೆಂಡು ಮತ್ತೊಂದು ಅಂಗಳಕ್ಕೆ ಬಿತ್ತು. ಹಾಗೆ ನೋಡಿದರೆ ನಮ್ಮ ದೇಶದ ಯಾವ ಸಂಗತಿಯೂ ಏಕ ಅಭಿಪ್ರಾಯದಿಂದ ರೂಪುಗೊಳ್ಳುವುದೇ ಇಲ್ಲ. ಅಭಿಪ್ರಾಯಕ್ಕೊಂದು ಭಿನ್ನಾಭಿಪ್ರಾಯ, ತರ್ಕ-ಕುತರ್ಕ ನೂರಾ ಎಂಟು, ಅಕ್ಷರಶಃ ಸಂತೆಯಲ್ಲಿ ಮಾರಲು ಇಟ್ಟ ಸೌತೇಕಾಯಿ, ಒಬ್ಬರಿಗೆ ಬಲಿತ ಹಾಗೆ ಕಂಡರೆ ಮತ್ತೊಬ್ಬರಿಗೆ ಎಳಸು, ಮಗದೊಬ್ಬರಿಗೆ ಕೊಳೆತ ಹಾಗೆ. ಇನ್ನೂ ಒಬ್ಬರಿಗೆ ಅದರ ತಳಿಯೇ ಸರಿಯಿಲ್ಲದ ಹಾಗೆ. ಭ್ರಷ್ಟತೆಯ ವಿರುದ್ಧ ಅತಿ ಭ್ರಷ್ಟರೇ ಹೇಳಿಕೆ ಕೊಟ್ಟರು. ನಮ್ಮದೂ ಒಂದು ಗೋವಿಂದ! ಸರತಿ ಸಾಲಿನಲ್ಲಿ ನಿಂತು ಟಿಕೇಟು ಕೊಳ್ಳದ ನಾವು ಅವಕಾಶ ಸಿಕ್ಕಲ್ಲೆಲ್ಲ ನಿಯಮಗಳು ನಮಗಲ್ಲ ಅಂತ ಭಾವಿಸುವವರು. ಗಾಂಧಿ ಹೇಳಿದ್ದು ನಿಜ; ಬ್ರಿಟಿಷರು ಭಾರತ ಆಕ್ರಮಿಸಿಕೊಂಡಿದ್ದು ಅವರ ಶಕ್ತಿಯಿಂದಲ್ಲ, ಅದು ನಮ್ಮ ಲಾಲಸೆಯ ದೌರ್ಬಲ್ಯದಿಂದ. ಭ್ರಷ್ಟತೆಗೆಲ್ಲಾ ರಾಜಕಾರಣಿಗಳೇ ಕಾರಣ, ಅಧಿಕಾರಶಾಹಿ ನೇರ ಹೊಣೆ ಅನ್ನುವ ಮಾತು ಒಂದು ಬದಿಯ ಸತ್ಯವಾದರೆ, ನಮ್ಮ ಜನಸಮುದಾಯ ರೂಢಿಸಿಕೊಂಡಿರುವ ಭ್ರಷ್ಟತೆ ಕಡಿಮೆಯದ್ದಾ? ತಮಿಳುನಾಡಿನ ಮತದಾರರು ಕಲರ್ ಟೀವಿ, ಅಕ್ಕಿ ಇತ್ಯಾದಿ ಕೊಟ್ಟಿರಿ, ಮುಂದೆ? ಅನ್ನುವ ಪ್ರಶ್ನೆ ಇಟ್ಟಿದ್ದಾರೆ. ಚುನಾವಣೆಯ ಮತಗಳು ಇಷ್ಟಿಷ್ಟಕ್ಕೆ ಅಂತ ಬಿಕರಿಯಾಗೋದು ಈ ಸಂದರ್ಭಗಳಲ್ಲಿ ಸಹಜ ಸಂಗತಿ ಎಂಬಂತಾಗಿದೆ.


ಈ ಹೋರಾಟಕ್ಕೆ ಎದುರಾಳಿಗಳು ಯಾರು ಎನ್ನುವುದು ಅಸ್ಪಷ್ಟ. ಒಂದರ ವಿರುದ್ಧ ಹೋರಾಡುತ್ತಾ, ನಾವೂ ಅದೇ ಆಗಿಬಿಡುವುದು ವೈರುಧ್ಯಮಯ ಅನ್ನಿಸಿದುದು ನಿಜ.

ಮತ್ತೊಂದು ಗಮನಿಸಿ, ಸಾಮಾಜಿಕ ಸ್ವಾಸ್ಥ್ಯ ಹಾಗೂ ಕೋಮುವಾದದ ಬಗ್ಗೆ ಕಿಡಿಕಾರುವ ನಮ್ಮ ಲೇಖಕ ಲೋಕ ಅದೇ ಜಾತೀಯತೆಯ ಬಗ್ಗೆ ತನ್ನ ದನಿ ತಗ್ಗಿಸುತ್ತದೆ. ಒಂದು ಸಣ್ಣ ಪ್ರಶಸ್ತಿಗೂ, ಸೆಮಿನಾರಿಗೂ ನಡೆಯುವ ಜಾತಿಯ ಲೆಕ್ಕಾಚಾರ ಅದಕ್ಕೆ ಕೆಟ್ಟದ್ದು ಅಂತ ಅನ್ನಿಸುವುದೇ ಇಲ್ಲ. ವಶೀಲಿಬಾಜಿ ತನಗೆ ಬೇಕಾದವರಿಗೆ ಬೇಕಾದ್ದು ಕೊಡಿಸುವುದು ಇವೆಲ್ಲಾ ತಪ್ಪು ಅಂತಲೇ ಅನ್ನಿಸುವುದಿಲ್ಲ. ತನ್ನ ಕುಲದ, ಸಮುದಾಯದ ಮಠಮಾನ್ಯಗಳ ಜೊತೆ ಗುರುತಿಸಿಕೊಳ್ಳುವುದು, ಅವುಗಳು ಕೊಡಮಾಡುವ ಪ್ರಶಸ್ತಿ ಗೌರವಗಳನ್ನು ಸ್ವೀಕರಿಸುವುದು ಕೊಂಚವೂ ಕಸಿವಿಸಿ ಹುಟ್ಟಿಸಲಾರದು. ವಿಶ್ವಮಾನವತ್ವದ ವಿಚಾರಗಳನ್ನು ಬಾಯಲ್ಲಿ ಹೇಳುತ್ತಲೇ ಅಪ್ಪಟ ಗೌಡಿಕೆ ನಡೆಸುವ ನಡೆಗಳು ವೈರುಧ್ಯಮಯ ಅನ್ನಿಸುವುದಿಲ್ಲ. ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ಸಂದರ್ಭ ಬಂದಾಗ 'ಬೇಡ'ಗಳು ಮಾಯವಾಗಿ ಬೇಕುಗಳಾಗಿ ಆಚರಿಸಲ್ಪಡುತ್ತಿವೆ. ಯಾವ ವಿದ್ಯಾರ್ಥಿಗಳನ್ನು ನಾಚಿಸುವ ಹಾಗೆ ಮೂಲ ಪುಸ್ತಕದಿಂದ ಸಾರಂಶ ಸಂಗ್ರಹಿಸಿ ಬರೆದ 'ತೇಜಸ್ವಿ ಬದುಕು-ಬರಹ' ಎಂಬ ಬಯಾಗ್ರಫಿ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಮುದ್ರಣಗೊಂಡು ಮರುಮುದ್ರಣಕ್ಕೂ ಸಿದ್ಧಗೊಳ್ಳುತ್ತದೆ. ಅನಕೃ ಮತ್ತು ಕನ್ನಡ ಸಂಸ್ಕೃತಿ ಅಂತ ಬರೆದ ಪ್ರತಿಷ್ಠಿತರ ಪುಸ್ತಕದ್ದೂ ಇದೇ ಪಾಡು. ಅನಕೃ ಬಯಾಗ್ರಫಿಯ ಉಲ್ಲೇಖ ಕೆಲವು ಕಡೆ, ತಮ್ಮ ಮಾತುಗಳಲ್ಲಿ ಕೆಲವು ಕಡೆ ಬರೆದ ಪುಸ್ತಕ. ಸಂಸ್ಕೃತಿ ಇಲಾಖೆಯಿಂದ ಮರುಮುದ್ರಣದ ಭಾಗ್ಯ ಪಡೆಯುತ್ತದೆ. ದೊಡ್ಡ ಪತ್ರಿಕೆಗಳು ಹೊಗಳಿ ಬರೆಯುತ್ತವೆ, ಸಣ್ಣಪತ್ರಿಕೆಗಳು ಎಷ್ಟೇ ಚೀರಿಕೊಂಡರೂ ಜಾಣ ಕಿವುಡು. ಇಂಥವು ಕೆಲವು ಉದಾಹರಣೆ. ಕೋಡಿನ ತುದಿ ಮಾತ್ರ ಕಾಣುತ್ತಿದೆ. ನೀರಿನೊಳಗಿನ ಕೋಣ ಇನ್ನೂ ಬೃಹತ್ತಾಗಿದೆ. ನಾವು ತುಂಬಾ ಪವಿತ್ರ ಅಂತ ಭಾವಿಸಿಕೊಳ್ಳುವ ಪುಸ್ತಕೋದ್ಯಮ, ವಿಶ್ವವಿದ್ಯಾಲಯಗಳು, ಶಿಕ್ಷಣ ಕೇಂದ್ರಗಳು, ಸಾಂಸ್ಕೃತಿಕ ಸಂಸ್ಥೆಗಳು, ಭ್ರಷ್ಟತೆಯನ್ನು ಸಹಜ ಅಂತ ಭಾವಿಸಿ ಬದುಕುತ್ತಿವೆ.

ಜನಪ್ರಿಯ ದೊಡ್ಡ ಪತ್ರಿಕೆಯೊಂದು ಸಾಹಿತ್ಯ ಸಮ್ಮೇಳನದ ಸಲುವಾಗಿ ಲೇಖಕರ ಸಂವಾದ ಏರ್ಪಡಿಸಿತ್ತು. ಅದರಲ್ಲೂ ಎಲ್ಲಾ ಬಣದ ಜನಪ್ರಿಯ ಲೇಖಕರಿಗೆ ಪ್ರಾತಿನಿಧ್ಯ. ಅಲ್ಲೊಂದು ಮಾತು ಬಂತು. ಲೇಖಕನಾದವನಿಗೆ ತಾನು ಬರೆಯುವ ಮಾತಿಗೆ ಶಕ್ತಿ ಇರಬೇಕಾದರೆ ಅದು ಜನಗಳನ್ನು ತಲುಪಬೇಕಾದರೆ,(ಲಿಂಗ ಮೆಚ್ಚಿ ಅಹುದಹುದೆನ್ನಬೇಕಾದರೆ) ಅವನ ಇಂಟಿಗ್ರಿಟಿ ಬಹಳ ಮುಖ್ಯವಾದ್ದು. ನುಡಿದಂತೆ ನಡೆಯಬೇಕು. ಆಗ ನನಗೆ ಸಿಕ್ಕ ಅವಕಾಶದಲ್ಲಿ ಪ್ರಶ್ನೆ ಕೇಳಿದೆ – ನೀವುಗಳು (ಆ ಸಂವಾದದಲ್ಲಿದ್ದ ಲೇಖಕರು) ಅಧಿಕಾರ ಕೇಂದ್ರಕ್ಕೆ ಬಹಳ ಹತ್ತಿರದಲ್ಲಿದ್ದವರು, ಮಿನಿಸ್ಟರ್‌ಗಳ ಮಟ್ಟದಲ್ಲಿ ಪ್ರಾಧಿಕಾರ, ಪರಿಷತ್ತು ಅಧ್ಯಕ್ಷಗಿರಿಗಳನ್ನು ಕಂಡವರು. ಇದನ್ನು ಹ್ಯಾಗೆ ನಿರ್ವಚಿಸುತ್ತೀರಿ (ಅದರಲ್ಲಿ ದುಡ್ಡು ಮತ್ತು ಇತರ ಲಾಭಕಾರಿ ವರ್ಚಸ್ಸುಗಳೆಲ್ಲಾ ಇದ್ದವು ಅನ್ನುವುದು ಬಿಡಿಸಿ ಹೇಳಬೇಕಾಗಿಲ್ಲ). ಅದಕ್ಕೆ ಉತ್ತರಿಸಿದ ಒಬ್ಬರು ಕೆರಳಿ ಕೆಂಡವಾಗಿ 'ಬೆಂಕಿ' ಹಾಗೆ ಉರಿದರು. ನೀವು ಕೇಳುವ ಪ್ರಶ್ನೆಯೇ ಸರಿಯಾಗಿಲ್ಲ ಅಂದುಬಿಟ್ಟರು. ಹೌದು. ರಾಜನ ಮೈಮೇಲೆ ಬಟ್ಟೆ ಇಲ್ಲ ಅನ್ನುವುದೆಲ್ಲ ಪಾಪಿಗಳಿಗಲ್ಲದೆ, ಪುಣ್ಯಾತ್ಮರಿಗೆ ಕಾಣುವುದಾದರೂ ಹೇಗೆ?

ಈ ಸಂಚಿಕೆ ಸಿದ್ಧಗೊಳ್ಳುವಲ್ಲಿ ಮೂರು ವಾರಗಳು ತಡವಾಗಿದೆ ಮನ್ನಿಸಿ.

ನಿಮ್ಮ
ಸಂಪಾದಕ



ಕವಿತೆ ಎಂಬ ಗಾರುಡಿವಿದ್ಯೆಯ ಹುಡುಕಾಟ

ಮೂಲ : **ಸೀತಾಕಾಂತ ಮಹಾಪಾತ್ರ**

ಅನುವಾದ : **ಜ.ನಾ.ತೇಜಶ್ರೀ**

ಕೇವಲ ಇಪ್ಪತ್ತು ವರ್ಷ ವಯಸ್ಸಿನವನಿರುವಾಗಲೆ ಅರ್ಥರ್ ರಿಮ್‌ಬಾಡ್ ಕವನ ಬರೆಯುವುದನ್ನು ನಿಲ್ಲಿಸಿದ. ತನ್ನ ಗೆಳೆಯನೊಂದಿಗೆ ಹೇಳಿಕೊಂಡಿರುವ ''ಬಹಳ ಹಿಂದೆಯೇ ನಾನು ಆ ಹುಚ್ಚಾಟಿಕೆಯನ್ನು ಬಿಟ್ಟುಬಿಟ್ಟೆ'' ಎಂಬ ಅವನ ಅಂತರಂಗದ ಮಾತುಗಳು ಆಧುನಿಕ ಕಾವ್ಯದ ಮೇಲೆ ಬರೆಹಾಕುವ ಪ್ರಭಾವ ಬೀರುವಂಥದ್ದು. ಪ್ರಪಂಚದಾದ್ಯಂತ ಆಧುನಿಕ ಕವಿಗಳ ಸಾಮಾನ್ಯ ಹೇಳಿಕೆಯೆಂದರೆ, ಈಗ ಸಾಹಿತ್ಯದಲ್ಲಿ ಮತ್ತು ಮನುಷ್ಯ ವಿಧಿಯನ್ನು ಅರ್ಥೈಸಿಕೊಳ್ಳುವಲ್ಲಿ ಕಾವ್ಯದ ಕೇಂದ್ರಸ್ಥಾನವು ಕೊನೆಗೊಂಡಿದೆ ಎಂಬುದು.

ಹಿಂದಿನ ಕಾಲದ ಸಂದರ್ಭಕ್ಕೆ ಹೋಲಿಸಿದರೆ ಕಾವ್ಯದ ಅವಕಾಶ(space)ವು ನಿಜವಾಗಿ ಕುಗ್ಗಿದೆಯೆ? ಅದು ಯಾತಕ್ಕಾಗಿ ಕುಗ್ಗಿದೆ ಹಾಗೂ ನಾವು ಇನ್ನೂ ಮುಂದೆ ಮುಂದೆ ಹೋದಂತೆ ಅದು ಇನ್ನಷ್ಟು ಮತ್ತಷ್ಟು ಕುಗ್ಗುತ್ತಿದೆಯೆ? ನಾವು ಮಾತನಾಡುವ ಕುಗ್ಗುವಿಕೆ ಸಾರ್ವಜನಿಕ ಅವಕಾಶ(space)ದ ಕುಗ್ಗುವಿಕೆ, ಅದಕ್ಕಾಗಿ ಹೆಚ್ಚೆಚ್ಚು ಶಕ್ತಿಗಳು ಅತ್ಯುತ್ಕೃಷ್ಟ ಶಕ್ತ ಮನಗಾಣಿಕೆಯ ಮಾರ್ಗಗಳ ಮೂಲಕ ಸ್ಪರ್ಧಿಸುತ್ತಿವೆ, ಅವುಗಳಲ್ಲಿ ಕೆಲವು ಸ್ಪಷ್ಟವಾಗಿ ಕಣ್ಣಿಗೆ ಕಾಣವಂತಹವು, ಉಳಿದವು ಗುಟ್ಟಾಗಿ ಮರೆಮಾಚಿದಂತಹವು. ಅಂತಹ ಶಕ್ತಿಗಳು ನಮಗೆ ಚೆನ್ನಾಗಿಯೆ ಪರಿಚಿತವಾದಂತಹವು. ಅವು ಮನುಷ್ಯ ಕಲ್ಪನೆಯನ್ನು ನಿದ್ರಿಸುವಂತೆ ಮಾಡಲು ನಿಧಾನಕ್ಕೆ ಪ್ರಯತ್ನಿಸುತ್ತಿವೆ. ನಮ್ಮ ರಾಜಕೀಯ-ಆರ್ಥಿಕ ವ್ಯವಸ್ಥೆಯನ್ನು ವಿಬದ್ಧಗೊಳಿಸಬೇಕಾದ ಬಗೆಯಿಂದ ತೃಪ್ತಗೊಳ್ಳದ ಅವು ನಮ್ಮ ಕನಸುಗಳನ್ನು ವಿಬದ್ಧಗೊಳಿಸಲು ಇಚ್ಛಿಸುತ್ತಿವೆ. ಸಂಗ್ರಹದಲ್ಲಿ ಹೇಳುವುದಾದರೆ, ಕಾವ್ಯಕ್ಕೆ ಇದು ಕಷ್ಟಕರ ಕಾಲ. ''ಇಂತಹ ಚೈತನ್ಯರಹಿತ ಕಾಲಘಟ್ಟದಲ್ಲಿ ಯಾಕೆ ಕವಿಯಾಗಿರಬೇಕು?'' ಎಂದು ಹೇಳಿರುವುದು ಹೋಲ್ಡರ್‌ಲಿನ್‌ನ ಅಂತರಂಗದ ಸಂಕಟವೆ ಆಗಿದೆ. ಹೌದು, ಯಾಕೆ ಕವಿಯಾಗಿರಬೇಕು? ಹಾಗಾದರೆ ಇದು, ನಮ್ಮ ಕನಸುಗಳು ಘೋರಸ್ವಪ್ನಗಳಾಗದಂತೆ

ತಡೆಯುವುದು, ಅಥವಾ ನಮ್ಮ ಕಲ್ಪನೆ ಸಾಯದಂತೆ ನೋಡಿಕೊಳ್ಳುವಲ್ಲಿ ಕವಿಯ ಮತ್ತು ಅವನ ಕಾವ್ಯದ ಫಲವಾಗಬೇಕೆ? ''ಔಶ್‌ವಿಟ್ಜ್‌ನ★[೧] ನಂತರ ಕಾವ್ಯ ಸಾಧ್ಯವೆ?'' ಎಂಬ ಉದ್ವೇಗದ ಕೂಗಿಗೆ ಯಾಕೆ ಧನಾತ್ಮಕ ಪ್ರತಿಕ್ರಿಯೆ ಬಂದಿತು ಎಂಬುದನ್ನು ಇದು ವಿವರಿಸುತ್ತದೆ.

ಕಾವ್ಯವು ಯಾವಾಗಲೂ ಸ್ವಯಂ ಮತ್ತು ಪರದ ನಡುವಿನ ನಿರಂತರ ತುಯ್ತವಾಗಿದೆ, ಎರಡೂ ಅತ್ಯಂತ ಸಂಕೀರ್ಣ ವಾಸ್ತವಗಳೂ ಹೌದು. ತತ್ವಜಿಜ್ಞಾಸೆಯ ಕ್ರಮದಲ್ಲಿ ಸ್ವಯಂನ್ನು ವಿವಿಧ ರೀತಿಯಲ್ಲಿ ಚರ್ಚಿಸಲಾಗಿದೆ. ಕವಿಯು ತನ್ನ ಮನಸ್ಸನ್ನು ಬಗೆಯುವಾಗ, ಅದರ ಹಲವು ಪದರಗಳ-ಕಾಮ ಸಂಬಂಧಿತ ಮತ್ತು ಆಧ್ಯಾತ್ಮಿಕ-ಬಗೆಗೆ ಅವನು ಎಚ್ಚರಗೊಳ್ಳುತ್ತಾನೆ. ಋಷಿಗಳು ಪಾರಮಾರ್ಥಿಕದೆಡೆಗೆ ಕೇಂದ್ರೀಕೃತರಾದರೆ, ಅನ್ನಮಯ, ಪ್ರಾಣಮಯ, ಜ್ಞಾನಮಯ, ವಿಜ್ಞಾನಮಯದಿಂದ ಆನಂದಮಯ ದೆಡೆಗೆ, ಇದ್ಯಾವುದರಿಂದಲೂ ತಾನು ದೂರಹೋಗಲಾಗದ್ದನ್ನು ಕವಿ ಕಂಡುಕೊಳ್ಳುತ್ತಾನೆ ಹಾಗು ವಾಸ್ತವದಲ್ಲಿ ಅವೆಲ್ಲವೂ ಅವನ ಸ್ವಯಂನ ಮೂಸೆಯಲ್ಲಿ ಒಂದಾಗುವುದನ್ನು ಅರಿಯುತ್ತಾನೆ.

ಆದರೆ ಸ್ವಯಂ ಎಂಬುದು ಧ್ಯಾನಸ್ಥವಾಗಬಹುದಾದ ಮುಚ್ಚಿದ 'ಏಕ'ವಲ್ಲ, ಹೊರಜಗತ್ತು ನಿರಂತರವಾಗಿ ಎಡತಾಕುತ್ತಲೇ ಇರುತ್ತದೆ. ಕವಿಯೊಬ್ಬ ''ನಾನು ಹಲವು ವ್ಯಕ್ತಿ'' ಎಂದು ಹೇಳುವಾಗ, ಯಾವ ಉದ್ದೇಶಗಳೂ ಇಲ್ಲದೆಯೆ ಅವನು ಕಲೆ, ಸಾಹಿತ್ಯದಲ್ಲಿ ರಸತಂತ್ರದ ಪರಂಪರೆಯನ್ನು ಮತ್ತು ವೈಯಕ್ತಿಕ ಅಹಂಕಾರದಲ್ಲೇ ಮನಸ್ಸು ನೆಟ್ಟ ಅದರ ಬಗೆಯು ವಾಸ್ತವವನ್ನು ಮುಟ್ಟಲು ಇರುವ ಸೂಕ್ತ ಮಾರ್ಗವೆಂಬುದನ್ನು ವಿರೋಧಿಸುತ್ತಿರುತ್ತಾನೆ. ಇದರಲ್ಲಿನ ಎರಡನೆಯ ಭಾಗವು (ವೈಯಕ್ತಿಕ ಅಹಂಕಾರಕ್ಕೆ ಸಂಬಂಧಿಸಿದ್ದು)ವು ಸರಿಯಾಗಿ ಅರ್ಥೈಸಿಕೊಳ್ಳದ ಕಾರ್ಟಿಸಿಯನ್ ಸೂತ್ರವಾದ ಕೊಜಿಟೊ ಎರ್ಗೊ ಸಮ್ (cogito ergo sum★[೨])ನ್ನು ಆಧರಿಸಿದ್ದಾಗಿದೆ. ಯಾಕೆಂದರೆ ನಮ್ಮ ಆಲೋಚನಾ ಪ್ರಕ್ರಿಯೆಯು ಸ್ವಯಂ ಮತ್ತು ಅದರ ಇತರೆಗಳನ್ನು ಒಳಗೊಳ್ಳುತ್ತದೆಯೇ ಹೊರತು ಸ್ವಯಂ ಮತ್ತು ಇನ್ನೊಂದು ಮಾತ್ರವನ್ನಲ್ಲ ಎಂಬುದನ್ನು ಆಧುನಿಕ ಮನಃಶಾಸ್ತ್ರವು ತಿಳಿಸಿಕೊಟ್ಟಿದೆ.

'ಸ್ವಯಂ' ಅಂತರಂಗದ ಗುರುತಾಗಿ ವಸ್ತುಗಳು, ಇತರರು, ಘಟನೆಗಳು ಮತ್ತು ವಿಚಾರಗಳನ್ನು ಗ್ರಹಿಸುತ್ತದೆ ಎನ್ನುವ ಅಂಶವು ಡೆಕಾರ್ಟನ ದಿನಗಳಿಂದಲೂ ಪಾಶ್ಚಾತ್ಯ ತತ್ವಶಾಸ್ತ್ರ ಮತ್ತು ಸಾಹಿತ್ಯವನ್ನು ಆವರಿಸಿದೆ. ವೈಯಕ್ತಿಕ ಗ್ರಹಿಕೆ ಮತ್ತು ಹೊರಗಿನ ಸಂಗತಿಗೆ 'ಅಗೋ ಅಲ್ಲಿದೆ' ಎನ್ನುವ ವಾಸ್ತವದೆಡೆಗಿನ ಪ್ರತಿಕ್ರಿಯೆಯ ತೀವ್ರತೆಯು ಮಾನವಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಹಾಗೂ ಮಾಹಿತಿಯ ಸ್ಫೋಟನೆಗೆ ಕಡಿಮೆಯೆಂದರೂ ನಮಗೆ ಎರಡು ಶತಮಾನಗಳಷ್ಟು ತೀವ್ರ ಮುನ್ನಡೆಗೆ ಅವಕಾಶ ಮಾಡಿಕೊಟ್ಟಿತು.

ಆದರೆ ಮನುಷ್ಯಪ್ರಜ್ಞೆಯು ಸದಾ ಬೆಳೆಯುತ್ತಲೇ ಹೋಗುವ ವಾಸ್ತವತೆಯ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳುವಲ್ಲಿನ ತನ್ನ ಮಿತಿಗಳನ್ನು ಅರ್ಥಮಾಡಿಕೊಳ್ಳತೊಡಗಿತು. ಮನುಷ್ಯನ ಒಳರಿವಿನ ಬಗೆಗೆ ಆಪಾದನೆಯೂ, 'ಸ್ವಯಂ'ನ ಮೇಲೆ ಅಗತ್ಯಕ್ಕಿಂತ ಹೆಚ್ಚಿನ ಒತ್ತು ನೀಡುವುದನ್ನು ವಿಚಾರವಾದವು ಮಂಡಿಸಿತು. ಮನುಷ್ಯ ಮನಸ್ಸಿನ ಒಳ ಅರಿವು ಮತ್ತದರ ಕಲ್ಪನೆಯ ಅಂಶಗಳು ಹಾಗೂ ಕನಸು ಕಾಣಬಲ್ಲ ಅದರ ಸಾಮರ್ಥ್ಯವನ್ನು ನಿರ್ಲಕ್ಷದಿಂದ ಕಾಣಲು ಆರಂಭವಾಯಿತು. ವಾಸ್ತವವಾದಿ ತರ್ಕವನ್ನು ಅನ್ವಯಿಸಿ ನೋಡಬಲ್ಲದ್ದರಿಂದ ಮಾತ್ರ ಸತ್ಯ ಕಾಣಬಹುದೆಂದು ಭಾವಿಸಲಾಯಿತು.

ವಿಚಾರಹೀನ ತತ್ವಜ್ಞಾನಿಗಳು, ಸಂಕೇತಪದ್ಧತಿಯ ಹಿಂಬಾಲಕರು, ಇಂಪ್ರೆಶನಿಸ್ಟ್ ಚಿತ್ರಕಲಾವಿದರು ಹಾಗೂ ರಿಮ್‌ಬಾಡ್‌ನಂತಹ ಕವಿಗಳಿಂದ ಇದಕ್ಕೆ ಪ್ರತಿಕ್ರಿಯೆ ಕೇಳಿಬಂತು, ಇವರುಗಳ ಪ್ರಕಾರ

Availವೆಂಬುದು ಕೋಮಲ ಹೂವಿನಂತೆ, ಅದು ತರ್ಕದ ವಿವರಣೆಗಳನ್ನೂ ಗ್ರಹೀತ ಶಬ್ದಾರ್ಥವನ್ನೂ ತಡೆಯುವುದಿಲ್ಲ. ಅದನ್ನು ಹೃದಯದಲ್ಲಿ, ರಕ್ತದ ಹರಿವಿನಲ್ಲಿ, ಕಲ್ಪನೆ ಮತ್ತು ಕನಸುಗಳ ಬದುಕಿನಲ್ಲಿಯೇ ಅನುಭವಿಸಬೇಕು. ಸತ್ಯದ ಸೂಕ್ಷ್ಮಛಾಯೆಗಳನ್ನು ವಿಚಾರವಾದ ಮತ್ತು ನೀರಸ ತರ್ಕದ ತಂತಿಬಲೆಯಲ್ಲಿ ಹಿಡಿಯಲು ಸಾಧ್ಯವಿಲ್ಲ. ಇಲ್ಲಿಂದ ಇಂದ್ರಿಯಗಳ ಅಸ್ತವ್ಯಸ್ತತೆ, ಒಳರಿವು ಮತ್ತು ರಾಗೋದ್ರೇಕದ ಮೇಲೆ ಒತ್ತು ಉಪಪ್ರಜ್ಞೆ ಹಾಗೂ ಅಜಾಗೃತ ಸ್ಥಿತಿಯ ಅಜ್ಞಾತ ಶಕ್ತಿಗಳ ಬಗೆಗಿನ ಮಾತು ಆರಂಭವಾಯಿತು.

ಅಷ್ಟರಲ್ಲಿ, ಮನೋವಿಜ್ಞಾನ ಮತ್ತು ಮಾನವಶಾಸ್ತ್ರದ ಶಾಖೆಗಳಲ್ಲಾದ ಅತ್ಯುನ್ನತ ಕಲಿಕೆಯು ಮನುಷ್ಯನ ಮನಸ್ಸು, ವ್ಯಕ್ತಿತ್ವದ ರಚನೆ, ಸಾಮಾಜಿಕ ಪ್ರಕ್ರಿಯೆ ಮತ್ತು ಸಾಂಕೇತಿಕ ಕ್ರಿಯೆಗಳ ಸಂಸ್ಕಾರ ಸಂಬಂಧ ಸನ್ನಿವೇಶದಲ್ಲಿನ ಅವನ ಮಗ್ನತೆಯ ಬಗೆಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ನೀಡಿದವು. ವೈಯಕ್ತಿಕ 'ಅಹಂಕಾರ'ವನ್ನು ಸ್ವಯಂ ಮತ್ತು ಅದರಿಂದ ಹೊರತಾದ್ದೆಲ್ಲವನ್ನು ಬೆರೆತ ನಿಯೋಗಿಯಾಗಿ ನೋಡುವುದರ ನಿರಾಕರಣೆ ಉಂಟಾಯಿತು.

ಇವೆಲ್ಲವೂ ನಮ್ಮ ಕಾಲದ ಬೌದ್ಧಿಕ ಪರಿಸರದ ಭಾಗಗಳಾಗಿವೆ. ಆದರೆ ಕಲೆ ಮತ್ತು ಸಾಹಿತ್ಯದಲ್ಲಿನ ಮನುಷ್ಯನ ದರ್ಶನಕ್ಕೆ ಸಂಬಂಧಿಸಿದಂತೆ ಇವುಗಳ ಪೂರಕತೆಯ ಕುರಿತು ಚರ್ಚೆಗಳೇ ಆಗಿಲ್ಲ. ಸಾಂಪ್ರದಾಯಿಕ ಆಲೋಚನೆಯ ಪ್ರಕಾರ, ಬದುಕಿನ ಕಚ್ಚಾ ಅನುಭವ ಮತ್ತು ಸಾಮಾಜಿಕ ಕ್ರಿಯೆಯ ಕ್ಷೇತ್ರದಿಂದ ವ್ಯಕ್ತಿ ಸ್ವಲ್ಪ 'ಬೇರೆಸ್ಥಳ'ದಲ್ಲಿರಬೇಕು ಎಂಬುದಾಗಿತ್ತು. ಅವನ 'ಅಹಂಕಾರ'ವೆ ಅವನ ಸೃಜನಶೀಲತೆಯ ತಾಣವಾಗಿತ್ತು ಮತ್ತು ಅದರ ಕಿಟಕಿಯಿಂದಲೆ ಅವನು ಆಕಾಶ, ಮೋಡಗಳು, ಹೊರಗಿನ ವಸ್ತುಗಳು, ರಸ್ತೆಯಲ್ಲಿನ ವ್ಯಕ್ತಿಗಳನ್ನು ಗ್ರಹಿಸುತ್ತಿದ್ದ; ಸಂಗ್ರಹವಾಗಿ ಹೇಳುವುದಾದರೆ, ಹೊರಗಿನ ಬದುಕನ್ನು ಅವನು ಹೀಗೆ ಕಾಣುತ್ತಿದ್ದ.

ನಿಜ, ಕಾವ್ಯವು ಕಚ್ಚಾ ಆದದ್ದರ ಅನುಭವವಾಗಿಸಲು ಸಾಧ್ಯವಿಲ್ಲ; ಕಾವ್ಯ ಮಾಧ್ಯಮವೇ ಅದಕ್ಕೆ ನಿರ್ಬಂಧಗಳನ್ನೊಡ್ಡುತ್ತದೆ. ಸೌಂದರ್ಯಪ್ರಜ್ಞೆಯ ಅಂತರದ ಪರಿಕಲ್ಪನೆಯು ವಾಸ್ತವದ್ದು. ಕವಿಯಾದವನು ರಸ್ತೆಯಲ್ಲಿನ ಗುಂಪನ್ನು ಸೇರಿಕೊಳ್ಳಲು ಸಾಧ್ಯವಿಲ್ಲ, ಹಾಗೆ ಸೇರಿಕೊಂಡು ತನ್ನ ಗುಂಪು ಕೂಗನ್ನೆ ಸಾಹಿತ್ಯವೆಂದು ಪರಿಗಣಿಸಲಿ ಎಂದು ನಿರೀಕ್ಷಿಸಲೂ ಸಾಧ್ಯವಿಲ್ಲ.

ಕವಿಯ ಸ್ಥಾನವು ಅವನ ಸೃಜನಶೀಲ ಅಂಶದ ಕೋಣೆಯೊಳಗಿದೆಯೇ ಅಥವಾ ಸಾಮಾಜಿಕ ಕ್ರಿಯೆಯ ರಸ್ತೆಯಲ್ಲಿದೆಯೇ ಎಂಬುದು ಇಲ್ಲಿನ ಪರಿಗಣನೆಯ ಅಂಶವಲ್ಲ. ಅದು ಕೃತಕ ಮತ್ತು ಬಾಹ್ಯದ ನಡುವಿನ ವೈರುಧ್ಯವಾಗುತ್ತದೆ. ಒಬ್ಬ ನಿಜವಾದ ಕವಿಯು, ಎಲ್ಲ ಕಾಲಕ್ಕೂ, ಕೋಣೆಯಲ್ಲೂ ಇರುತ್ತಾನೆ ಅಂತೆ ರಸ್ತೆಯಲ್ಲೂ ಇರುತ್ತಾನೆ. ಇದು ಅದೋ/ಇದೋ ಎನ್ನುವ ಪ್ರಶ್ನೆಯಲ್ಲ. ತನ್ನ ತಣ್ಣನೆಯ ಏಕಾಂತದ ಸ್ಥಿತಿಯಿಂದ, ತನ್ನ 'ಸುರಕ್ಷ' ಸೌಂದರ್ಯೋಪಾಸನೆಯ ಅಂತರದಿಂದ, ತನ್ನ ಪ್ರಕ್ಷುಬ್ಧ ಬದುಕಿನೊಳಗಿಂದ ಅದನ್ನು ಗ್ರಹಿಸಲು ಸಾಧ್ಯವಿಲ್ಲ, ನೆಮ್ಮದಿಯ ಸ್ಥಿತಿಯಲ್ಲಿ ತನ್ನ ಭಾವನೆಯನ್ನು ಸಂಗ್ರಹಿಸುವುದು ಮತ್ತು ಆನಂತರ ತನ್ನ ಬದುಕು ಹಾಗೂ ಸಾವಿನ ದರ್ಶನವನ್ನು ಓದುಗ ಸಮುದಾಯಕ್ಕೆ ನೀಡುವುದು ಎಂಬುದಲ್ಲ, ಅಥವಾ ಕವಿಯಾದವನು ಮತ್ತೊಬ್ಬರಿಗೆ ದಾರಿತೋರಲಾಗಲಿ, ತನ್ನನ್ನು ತಾನು ಗಣ್ಯನೆಂದು ಬಿಂಬಿಸುತ್ತ ಪ್ರವಾದಿಯ ಪಾತ್ರವನ್ನು ತನ್ನ ಮೇಲೆ ಆರೋಪಿಸಿಕೊಳ್ಳುವುದಾಗಲಿ ಸಾಧ್ಯವಿಲ್ಲ, ಲೋರ್ಕಾ ಹೇಳಿದಂತೆ, ಕವಿಯಾದವನು ಬೆತ್ತಲಿನ ಮಸುಕು ಶಕ್ತಿಯ ಹಾಗೆ ಚೈತನ್ಯವನ್ನು ಹಿಡಿದಿಟ್ಟುಕೊಂಡವನ ಪಾತ್ರವನ್ನು ನಿರ್ವಹಿಸುವುದಾಗಲಿ, ಅಥವಾ ನಮ್ಮ ಹಿಂದಿನ ಕಾಲದ ಜನರು ಅಥವಾ ಜನಪದರು ಹೇಳುವ ಹಾಗೆ ಕಲಿಸಿ (kalisi*3)ಯೂ ಅಲ್ಲ.

ಸಂಚಯ

ಇನ್ನಾವ ಗೋಡೆಗಳೂ ಉಳಿದಿಲ್ಲ ಎಂಬುದು ಕವಿಗೆ ಗೊತ್ತು. ಅವನ 'ಅಹಂಕಾರ'ವು ಗೋಡೆ ಭಾವಣಿಗಳಿಲ್ಲದ ಕೋಣೆಯಾದ ರಸ್ತೆಯಲ್ಲಿ ತೆರೆದ ಬಾನಿನ ಕೆಳಗೆ ಜೀವಿಸುತ್ತದೆ. ಎಲ್ಲ ಕ್ರಿಯೆಗಳು ನಡೆಯುವುದು, ಬಿರುಗಾಳಿಯು ಕೋಪಗೊಂಡು ಏಳುವುದು, ಧ್ಯೇಯವಾಕ್ಯವನ್ನು ಕಿರುಚುವುದು, ಸಾಮಾಜಿಕ ಸಂಬಂಧಗಳ ಸೂಕ್ಷ್ಮ ಒಳಪದರುಗಳನ್ನು ಅದರ ಎಲ್ಲ ಬಣ್ಣ ಹೆಚ್ಚುಗಾರಿಕೆ, ಮತ್ತು ಒರಟುತನಗಳೊಂದಿಗೆ ಬದುಕುವುದು ಇಲ್ಲಿಯೆ. ಕನಸುಗಳನ್ನು ಕಾಣಬೇಕಾದ್ದು ಇಲ್ಲಿಯೆ. "ಬ್ರಹ್ಮ ಜ್ಞಾನವನ್ನು ಮಾರುಕಟ್ಟೆಯಲ್ಲಿ" ಗಳಿಸುವ ಸಾಧ್ಯತೆಯನ್ನು ಒಂದು ಜನಪದ ಮಾತು ಗೇಲಿ ಮಾಡುತ್ತದೆ. ಇಂದಿನ ಬರಹಗಾರನ ಸಂಕೀರ್ಣ ಸಮಸ್ಯೆ ಇದೇ, ಮಾರುಕಟ್ಟೆಯಲ್ಲಿ ಬ್ರಹ್ಮನನ್ನು ಧ್ಯಾನಿಸುವುದು!

ಆದಾಗ್ಯೂ, ಅನುಭವ ಮತ್ತು ಕಾವ್ಯದ ನಡುವೆ ಔಪಚಾರಿಕ ಅಂತರ ಯಾವಾಗಲೂ ಇದ್ದೇ ಇದೆಯೆಂದು ಹೇಳುವುದೇ ಸರಿಯಲ್ಲವೆ? ಮಾಧ್ಯಮವು ಹೇರುವ ನಿಬಂಧನೆಗಳ ಹೊರತಾಗಿಯೂ ತನ್ನ ಸುತ್ತಲು ಜರುಗುವ ಘಟನೆಗಳಿಗೆ ಕವಿಯ ಪ್ರತಿಕ್ರಿಯೆಯು ಸಮಾಜದಲ್ಲಿನ ಬದುಕು, ರಸ್ತೆಯಲ್ಲಿನ ಬದುಕು ಜೊತೆಗೂಡಿ ಒಂದು ಅನುಭವವನ್ನು ಅಂತರ್ಗತ ಭಾಗವಾಗಿ, ಬೇರ್ಪಡಿಸಲಾಗದ 'ಇಡಿ'ಯಾಗಿ ಗ್ರಹಿಸುವ ಸಾಮರ್ಥ್ಯ ಕವಿಗಿದೆ, ತತ್‌ಕ್ಷಣಕ್ಕೆ ಮೂರ್ತವಾಗಿ ಅನುಭವಿಸುವ ಚರ್ಮದ ಮೇಲಿನ ಕೊರೆತದಂತೆ ಅಥವಾ ಬಾಯೊಳಗಿನ ಸೇಬಿನಂತೆ ಅದನ್ನವನು ಗ್ರಹಿಸಬಲ್ಲ. ಧೂಳನ್ನು ಚಿನ್ನವಾಗಿ ಬದಲಾಯಿಸಬಲ್ಲ ಅವನ ಸಾಮರ್ಥ್ಯ ಇನ್ನೂ ಉಳಿದಿದೆ. ಪ್ರಯೋಜನವಾಗಿ ಸಾಮಾಜಿಕ ಸಮುದಾಯವು ಅಪರೂಪವಾಗಿ ಒಳಗೊಳ್ಳುವಂತಹ ಭಾಷೆಯನ್ನು ಅವನು ಈಗಲೂ ಮೋಡಿಗೊಳಪಡಿಸಿ ಬಳಸಬಲ್ಲ.

ಇದು 'ಪಾರದರ್ಶಕತೆ' ಅಥವಾ 'ಅಪಾರದರ್ಶಕತೆ'ಯ ಗುಣ. ಅಲಂಕಾರದ ಪಾರದರ್ಶಕ ಭಾಷೆಯು ಜನಾಂಗೀಯ ನೆನಪುಗಳ, ವ್ಯಂಗ್ಯಸೂಚಕಗಳ, ನೋವುಕಾರಕ ಸಲಹೆಗಳ, ಸೂಕ್ಷ್ಮ ಸಿಂಬಲಿಸಂಗಳ ಮತ್ತು ಅಪ್ರತ್ಯಕ್ಷ ಸೂಚನೆ — ಈ ಎಲ್ಲ ಕಹಿ ನೆರಳುಗಳಿಂದ ದೂರವಾದ ಭಾಷೆಯಾಗಿ ಗುಂಪುವಾಕ್ಯದ ಮುಖೇನ ಅತ್ಯಂತ ವೇಗವಾಗಿ ಇತರರನ್ನು ತಲುಪುತ್ತದೆ. ಇನ್ನೊಂದೆಡೆ, ಕಾವ್ಯದ ಭಾಷೆಯು ಸಾಮಾನ್ಯ ಜನರ ಭಾಷೆಯ ಗುಣಮಟ್ಟವನ್ನು ತೂಗುವ ಹೊತ್ತಿಗೇ 'ಅಪಾರದರ್ಶಕತೆ'ಯ ಹಲವು ಪದರಗಳ ಅರ್ಥ, ಸೂಕ್ಷ್ಮತೆ ಮತ್ತು ಹಲವು ಸಂಬಂಧಸೂಚಿ ಗುಣಗಳನ್ನು ಹೊಂದಿ ಮೋಡಿಯನ್ನುಳಿಸಿಕೊಳ್ಳಲು ಕೈಚಾಚುತ್ತದೆ.

ಒಬ್ಬ ವ್ಯಕ್ತಿ ರಸ್ತೆಯಲ್ಲಿದ್ದಾನೆ ಎನ್ನುವ ಸರಳ ಅರಿವಿನಿಂದ ಇದು ಹುಟ್ಟುತ್ತದೆ; ವರ್ತಮಾನದಲ್ಲಿ, ಐತಿಹಾಸಿಕ ಸಂಗತಿಗಳಲ್ಲಿ ಹಾಗೂ ದಿನನಿತ್ಯದ ಮೂರ್ತ ಘಟನೆಗಳೊಳಗೆ ಅವನು ಸಂಪೂರ್ಣ ಹುದುಗಿಹೋಗಿದ್ದಾನೆ ಎಂಬ ಜಾಗೃತತೆಯಿಂದ ಇದು ಆಗುವುದಲ್ಲ; ಯಾರ್‍ಯಾರು ಬೀದಿಯಲ್ಲಿದ್ದಾರೋ, ಕಚ್ಚಾ ಅನುಭವಗಳಲ್ಲಿ ಬದುಕುತ್ತ ಅದನ್ನನುಭವಿಸುತ್ತ, ಅದನ್ನು ಕಾಲದ ದೃಷ್ಟಿಕೋನದಲ್ಲಿ ಇಡಲಾಗಲಿ ಅಥವಾ ಕಲ್ಪನೆಯ ಬದುಕಿಗೆ ಎದುರಾಗಿ ನಿಲ್ಲಿಸಲಾಗಲಿ ಆಗದವರಲ್ಲೆಲ್ಲ ಈ ಜಾಗೃತಿಯಿರುತ್ತದೆ.

ಕವಿಯ ಜಾಗೃತಿಯು ಅವನನ್ನು ಅವನ ಕಸುಬಿನೆಡೆಗೆ ಕರೆಯುತ್ತದೆ; ಗುಜುಗುಜು ಸದ್ದಿನ ನಡುವೆಯೂ ಕನಸು ಕಾಣುವಂತಾಗಲು, ಕನಸಿನ ಗುಣಮಟ್ಟಕ್ಕೆ ಅನುಗುಣವಾಗಿ ಕ್ರಿಯೆಯ ಪ್ರಸ್ತುತತೆಯನ್ನು ಕಂಡುಕೊಳ್ಳಲು; 'ಮುನ್ನೋಟ' ನೋಡಲು ಇನ್ನೂ ಸಾಧ್ಯವಿರುವವನು, 'ದಾರ್ಶನಿಕ'ನಾಗುವ ಹೊತ್ತಿಗೆ ಪಕ್ಕದ ಮನೆಯವನಾಗಿಯೂ ಇರಲು; ಕನಸು ಕಾಣಬಲ್ಲವನೂ, ಹಾಗೆ ಕಾಣುವ ಹೊತ್ತಿಗೆ ಕನಸುಗಳು ಮೂಲಭೂತವಾಗಿ ಭ್ರಮೆಗಳು ಹಾಗಾಗಿ ಅವು ಕೊನೆಗೊಳ್ಳಲೇಬೇಕು ಎಂಬುದನ್ನು ಕವಿಯು ಬಲ್ಲವನಾಗಿರಬೇಕು.

ನಾರಾಯಣ

ಒಮ್ಮೆ ಕಾಫ್ಕಾ ಹೀಗೆ ಹೇಳಿದ: ''ಒಬ್ಬ ನಿಜವಾದ ಸೃಜನಶೀಲ ಬರಹಗಾರ ಭಾವಗೀತೆಯನ್ನು ನಾವು ಮಕ್ಕಳನ್ನು ಅನಾದರದಲ್ಲಿ ಕಂಡಂತೆ ಗದ್ಗದಿಸುತ್ತ ಹೇಳುವುದಿಲ್ಲ, ಅಥವಾ ಯಾವ ಮೂರ್ತಿ ಯೆದುರು ಭಾವೋದ್ರೇಕದಲ್ಲಿ ತಮ್ಮ ಮೂಳೆ ಮಾಂಸಗಳನ್ನು ದಣಿಸಿಕೊಂಡು ಕುಣಿಯುವರೋ ಅದರಲ್ಲಿ ನಂಬಿಕೆ ಕಳಕೊಂಡ ಮತಭ್ರಾಂತ ಅಂಧಶ್ರದ್ಧೆಯ ಪೂಜಕರಂತೆಯೂ ಕವಿಯಾದವನು ಇರುವುದಿಲ್ಲ''

ಕನಸು ತುಂಬಿದ ಕಣ್ಣುಗಳಲ್ಲಿ ಅವನು ತಡವರಿಸುತ್ತ ಕತ್ತಲಲ್ಲಿ ನಡೆಯುವುದಿಲ್ಲ ಹಾಗೂ ಎದುರಿಗೆ ಹಾಜರಿಲ್ಲದ ಅಥವಾ ಸತ್ತ ದೇವರಿಗೆ ಪ್ರತಿಬಾರಿಯೂ ತನ್ನ ಮುಂಚಾಚಿದ ಹಸ್ತ ಸುಡುವವರೆಗೂ ಕೂಗುತ್ತ ಪ್ರಾರ್ಥನೆ ಮಾಡುವುದಿಲ್ಲ. ಮನುಷ್ಯ ವಿಧಿಯ ನಿಜ ಸ್ವರೂಪವನ್ನು, ಮನುಷ್ಯ ಸಂಕಟದ ಸಾಮುದಾಯಿಕ ವಿಧಿಯನ್ನೂ, ಇತಿಹಾಸದುದ್ದಕ್ಕೂ ದಾಖಲಾಗದ ನೋವನ್ನು ನಮ್ಮ ಹಣೆಬರಹದ ಪಕ್ವ ಅರಿವಿನೊಂದಿಗೆ ಕವಿಯಾದವನು ಗ್ರಹಿಸುತ್ತಾನೆ:

''ನೋವಿನ ದಿಗ್ಭ್ರಮೆಯಲ್ಲಿ
ಈ ಇಡೀ ಬದುಕು ಮತ್ತದರ ಸಂಕಟವು
ಮೊನಚು ಮುಂಚಾಚು ಬಾಟಲಿನ ಗೋಡೆ ಅಥವಾ ಅದರ ಅಂಚು
ಈ ನಿಶ್ಚಲ ಹಿಂಬಾಲಿಕೆಯಲ್ಲಿದೆ
ಎಂಬುದ ಅನುಭವಿಸಲು ನೀನು
ಹೊಳೆಹೊಳೆವ ಸೂರ್ಯನ ಬೆಳಕಲ್ಲಿ ಹೋಗುತ್ತೀಯ''

ಗಣ್ಯರ ದೃಷ್ಟಿಕೋನಕ್ಕೆ ವಿರುದ್ಧವಾಗಿ 'ನಾನು' ಮತ್ತು 'ನೀನು' ಅಥವಾ ಸಾಹಿತಿಯ 'ಅಹಂಕಾರ' v/s ಸಮುದಾಯ ಸಮಸ್ಯೆಗೆ, ಆಧುನಿಕ ಕಲೆ ಮತ್ತು ಸಾಹಿತ್ಯವು ತನ್ನೊಳಗೆ ಅಂತರ್ಗತವಾಗಿರುವ ಒಂದು ಪ್ರಮಾಣದ ಆಸಕ್ತಿಯನ್ನು 'ಇತರತನ'ಗಳಲ್ಲೂ, ಸಮುದಾಯದಲ್ಲೂ ಇರುವುದೆಂದು ಪರಿಭಾವಿಸುತ್ತದೆ. ಆಧುನಿಕ ಕವಿಯು ಈ ಗುರುತನ್ನು ತನ್ನ ಒಳ ಅರಿವಿನಿಂದಲೆ ಅನುಭವಿಸುತ್ತಾನೆ. ಇದು ರಿಮ್‌ಬಾಡ್‌ನ ಪ್ರಥಮಪುರುಷ ಏಕವಚನವು ಮತ್ತೊಂದಾಗಿ ಅನಂತರ ಮತ್ತೆ ಅದಕ್ಕೇ ಹಿಂತಿರುಗಿ ಬರುವ ಬಗೆಯದ್ದಾಗಿ ಉಳಿದಿಲ್ಲ. ಇನ್ನೊಂದೆಡೆಯಲ್ಲಿ ಇದು 'ಸ್ವಯಂ'ನ ಹಿಗ್ಗಿಸಿದ ಅರಿವು, ವಿಸ್ತಾರಕ್ಕೆ ಬೆಳೆಯುತ್ತಲೇ ಹೋಗುವ ಪ್ರಜ್ಞೆಯ ವೃತ್ತವಾಗಿದ್ದು ತನ್ನೊಳಗೇ ಅತಿದೂರದ ನಕ್ಷತ್ರವನ್ನೂ ಒಳಗೊಂಡಂತಹದ್ದು.

ಸೃಜನಶೀಲ ಕಾವ್ಯವು ಮನುಷ್ಯ ಬದುಕಿನ ತಾತ್ಕಾಲಿಕತೆಯನ್ನು ಮತ್ತು ಕಾಲದ ಬದಲಾವಣೆಗೆ ಒಳಗಾಗುವ ಅದರ ಗುಣವನ್ನು ಪರಿಭಾವಿಸುತ್ತದೆ. ಇದು ನಮ್ಮನ್ನು ನಿರಾಶೆಗೆ, ಉದ್ವೇಗಕ್ಕೆ ಅಥವಾ ಬೇರುಗಳಿಲ್ಲದ ಸ್ಥಿತಿಗೆ ಕೊಂಡೊಯ್ಯಬಾರದು. ಬದುಕಿನ ಅನುಭವದಲ್ಲಿ ಸೃಜನಶೀಲ ಆನಂದದ ಸಾಧ್ಯತೆಯನ್ನು ಅರಿಯುವುದು ಹಾಗು ಪುರಾಣಗಳನ್ನು ಸೃಷ್ಟಿಸುವ ಎಲ್ಲ ಶ್ರೇಣಿಯವರನ್ನು ಮತ್ತು ಆಧುನಿಕ ಸಮಾಜದ ಮಾಧ್ಯಮ-ಪಾರುಪತ್ಯಗಾರರ ವಿರುದ್ಧವಾಗಿ ಹಂಚಿಕೊಳ್ಳುವ ಅನುಭವದ ಹಿಂದಿನ ಶ್ರೇಷ್ಠತೆ, ವಿಶಿಷ್ಟತೆ ಮತ್ತು ಸಾಮುದಾಯಿಕ ಗುಣವನ್ನು ಅರಿಯುವುದು ಇಲ್ಲಿ ಬಹಳ ಮುಖ್ಯ.

ನಿಜವಾಗಿ ಹಾಗೂ ವಿಶ್ವಾಸಾರ್ಹವಾಗಿ ವೈಯಕ್ತಿಕವಾದ ಎಲ್ಲ ಕಾವ್ಯವೂ ಅದೇ ಸಮಯಕ್ಕೆ ಸಾರ್ವಕಾಲಿಕವೂ ಆಗಿರುತ್ತದೆ. ಅಣುರೂಪಿ ಜಗತ್ತು ಬ್ರಹ್ಮಾಂಡದ ನಿಯತಿಯನ್ನು ಸೂಚಿಸುತ್ತದೆ. ಯಾಕೆಂದರೆ ಅನುಭವವು ಯಾವಾಗಲೂ 'ಇತರ'ದ್ದರ ಸಾಧ್ಯತೆಯನ್ನು ಧ್ವನಿಸುತ್ತದೆ. ಒಂದು ಅನುಭವ ವನ್ನು ಒಳಗು ಮಾಡಿಕೊಳ್ಳುವುದೆಂದರೆ 'ಸ್ವಯಂ'ನ ಒಂಟಿತನವನ್ನು ಅಲ್ಲಗಳೆಯುವುದು ಹಾಗೂ 'ಇತರ'ದ್ದರ ಇರುವಿಕೆಯನ್ನು ಪ್ರತಿಪಾದಿಸುವುದೆ ಆಗಿದೆ. ಅನುಭವದಲ್ಲಿನ ಸೃಜನಶೀಲ ಆನಂದವನ್ನು

ನಾವು ಅಲ್ಲಗಳೆದರೆ, ಜಡವಸ್ತು ಮತ್ತು ಭೌತಿಕ ಜಗತ್ತಿನ ಅಗಾಧತೆಯ ಭಯ ತಪ್ಪಿದ್ದಲ್ಲ. ಸಾರ್ತ್ರನ ನಾಯಕನಿಗೆ ಅವನ ಸುತ್ತಲಿನ ಹಗೆಯ, ಆಸೆಬುರುಕ ಮತ್ತು ಯಾಂತ್ರಿಕ ಹೊರಜಗತ್ತಿನ ವಿಚಿತ್ರ ನೋಟದೊಳಗೆ ತಾನು ಮುಳುಗಿಹೋದಂತೆನಿಸುತ್ತದೆ. ತನಗೆ ಗೊತ್ತಿಲ್ಲದೆಯೇ ಅವನು 'ಒಂಟಿ' ಯಾಗುತ್ತಾನೆ. 'ಇತರ'ರೊಂದಿಗಿನ ಸಂಬಂಧ ಸೇತುವೆಯನ್ನು ಸಂಪರ್ಕವನ್ನು ಅವನು ಕಡಿದುಹಾಕುತ್ತಾನೆ.

ಅನುಭವವು ಆನಂದದಾಯಕವಾಗಿರದೆ ಭಯಹುಟ್ಟಿಸುವ ಕಾಡುವ ಭ್ರಮೆಯಾಗಿಬಿಟ್ಟರೆ ವಾಸ್ತವದ ನಿರಾಕರಣೆ ಹಾಗೂ ಅನುಭವದ ಪ್ರಾಮಾಣ್ಯತೆಯು ಕ್ರೂರ ಅಗತ್ಯವಾಗಿ ಪರಿಣಮಿಸುತ್ತದೆ. ನಾವು ಬದುಕುವ ಈ ಪ್ರಪಂಚದಲ್ಲಿ ಇಂತಹ ಅಸಂಖ್ಯ ಘೋರಸ್ವಪ್ನಗಳಿವೆ. ಇದು ಒಂದೋ ನಮ್ಮನ್ನು ಅನುಭವಕ್ಕೆ ಬೆನ್ನುತಿರುಗಿಸುವಂತೆ ಮಾಡಿದೆ ಅಥವಾ ವೈಯಕ್ತಿಕ ಅಸ್ತಿತ್ವವನ್ನು ಹೆಚ್ಚೆಚ್ಚು ಕಿಟಕಿಗಳೇ ಇಲ್ಲದ ಏಕತ್ವದೆಡೆಗೆ ಸರಿಯುವಂತೆ ಮಾಡಿದೆ.

ಎಲ್ಲ ಬಗೆಯ ಕಲೆಗಳು ಸಂಗೀತದ ನಿಬಂಧನೆಗೆ ಒಳಪಡಲು ಹಾತೊರೆಯುತ್ತವೆ ಎನ್ನಲಾಗುತ್ತದೆ. ಸಂಗೀತದಲ್ಲಿ ವಿಷಯಗಳು ಸರಳವಾಗಿರುತ್ತವೆ; ಪ್ರಕಾರದ ಹೊರಗೆ ಅವಕ್ಕೆ ಅರ್ಥವಿರುವುದಿಲ್ಲ, ಜೊತೆಗೆ ಎರಡೂ ಹೆಚ್ಚುಕಡಿಮೆ ಒಂದೇ ಆಗಿರುತ್ತವೆ. ರಾಬರ್ಟ್ ಬ್ಲೈ ಎಂಬುವವನ ಜಿಗಿಯುವ ಕಾವ್ಯದ ಪರಿಕಲ್ಪನೆಯು ಕಾವ್ಯವು ಮೌನದೆಡೆಗೆ, ಅಜ್ಞಾತದೆಡೆಗೆ ಜಿಗಿಯುವ ಮುನ್ನ ಅದರ ಸ್ವರೂಪ ಮತ್ತು ಅರ್ಥವು ಒಂದಕ್ಕೊಂದು ಬೆಸೆದುಕೊಳ್ಳಲು ಮೊದಲುಗೊಳ್ಳುವುದರ ಬಗ್ಗೆ ಹೇಳುತ್ತದೆ. ಅದು ಹಾಗಾಗುವುದು ಒಂದು ಮೋಡಿಯೇ ಸರಿ ಹಾಗೂ ಅದನ್ನು ಸಾಧಿಸಲು ಪ್ರಜ್ಞಾಪೂರ್ವಕವಾಗಿ ಅಣಿಗೊಳ್ಳುವ ಕವಿಯ ಪ್ರಯತ್ನವಂತು ಅಸಾಧ್ಯವೆಂದೆ ಹೇಳಬಹುದು. ಯಾಕೆಂದರೆ ಅವನು ಭಾಷೆ ಯಂತಹ ಸಮುದಾಯದ ಆಸ್ತಿಯನ್ನು ಬಳಸಿಕೊಳ್ಳುತ್ತಾನೆ, ಬಾರ್ಜಸ್ ಹೇಳುವಂತೆ, ''ಭಾಷೆಯ ಬೇರುಗಳು ಅವೈಚಾರಿಕವಾದವು ಹಾಗೂ ಮಾಂತ್ರಿಕ ಗುಣವುಳ್ಳವು'' ಆದರೆ, ನನ್ನ ಪ್ರಕಾರ, ಬಾರ್ಜಸ್‌ನು ಎಲ್ಲ ಕವಿಗಳ ಕನಸು ಎನ್ನಬಹುದಾದ ಹಾರೈಕೆಯನ್ನು ಕಾವ್ಯದ ಪರವಾಗಿ ಮಾಡಿದ್ದಾನೆ. ಅವನು ಹೇಳುತ್ತಾನೆ, ''ಕಾವ್ಯವು ಆ ಪುರಾತನ ಮಾಂತ್ರಿಕತೆಗೆ ಹಿಂತಿರುಗ ಬಯಸುತ್ತದೆ. ಯಾವ ನಿರ್ಧರಿತ ನಿಬಂಧನೆಗಳಿಲ್ಲದೆ, ಕತ್ತಲಲ್ಲಿ ಮುನ್ನಡೆಯುವ ರೀತಿಯಲ್ಲಿ, ಅದು ಹಿಂಜರಿಯುತ್ತಲೆ ದಿಟ್ಟರೀತಿಯಲ್ಲಿ ತನ್ನ ದಾರಿಮಾಡಿಕೊಳ್ಳುತ್ತದೆ. ಕಾವ್ಯವು ಗೂಢ ಚದುರಂಗ, ಕನಸಿನಲ್ಲೆಂಬಂತೆ ಚದುರಂಗದ ಮಣೆಯೂ, ಪಗಡೆ ಕಾಯಿಗಳೂ ಬದಲಾಗುತ್ತವೆ, ನನ್ನ ಸಾವಿನ ನಂತರ ನಾನವನ್ನು ದಿಟ್ಟಿಸಿ ನೋಡುತ್ತಿರುತ್ತೇನೆ.''

ರಾಮಾಯಣ, ಮಹಾಭಾರತ ಮತ್ತು ಭಾಗವತ ಪುರಾಣದ ಕಾಲದಲ್ಲಿ ಕಾವ್ಯದ ಅವಕಾಶ(space)ವು ಬಹುಪಾಲು ಸಾರ್ವತ್ರಿಕವಾದದ್ದಾಗಿತ್ತು. ಆ ಕಾವ್ಯದ ಒಳಹೋಗಲು ಕ್ರಮಬದ್ಧ ಅಕ್ಷರತೆಯ ಅಗತ್ಯವಿರಲಿಲ್ಲ. ಅದು ಮಹಾನ್ ಮೌಖಿಕ ಪರಂಪರೆಯ ಭಾಗವಾಗಿತ್ತು. ಮೌಖಿಕ ಪರಂಪರೆ ಮತ್ತು ಮಹಾಕಾವ್ಯಗಳ ಸರ್ವವ್ಯಾಪಕತೆಯಿಂದ ಹಿಡಿದು ಮಧ್ಯಕಾಲೀನ ಯುಗದ ಭಕ್ತಿಕಾವ್ಯ ಅಥವಾ ಕಬೀರ ಸೂರದಾಸ, ತುಕಾರಾಮ ಮತ್ತಿತರರವರೆಗೆ ಅದರ ಅವಕಾಶದಲ್ಲಿ ಗಮನಾರ್ಹ ಕುಗ್ಗುವಿಕೆಯೇನೂ ನಮಗೆ ಕಾಣುವುದಿಲ್ಲ. ಅದು ಪ್ರಾದೇಶಿಕ ಮಹಾಕಾವ್ಯಗಳಂತೆ ಇಡೀ-ಭಾರತೀಯ ಸಂಗತಿಯೆ ಆಗಿತ್ತು. ರಾಷ್ಟ್ರೀಯತೆ ಮತ್ತು ಸ್ವಾತಂತ್ರ್ಯ ಹೋರಾಟದೆಡೆಗಿನ ಸಾಹಿತ್ಯದ ಕ್ರಮೇಣ ತಿರುಗುವಿಕೆ ಕೂಡ ಜನರ ಮನಸ್ಸಿನಲ್ಲಿ ಬಹುದೊಡ್ಡ ಪ್ರಮಾಣದ ಅವಕಾಶವನ್ನು ಹಾಗೇಯೇ ಕಾಪಾಡಿಕೊಂಡಿತು. ಸ್ವಾತಂತ್ರ್ಯಾನಂತರದ ಕಾಲಘಟ್ಟದಲ್ಲಿ ಕಾವ್ಯದ ಸಾರ್ವಜನಿಕ ಅವಕಾಶ ಹಾಗೂ ಸ್ವಯಂನಲ್ಲಿ ಆಕ್ರಮಿತವಾದ ಮನಸ್ಥಿತಿ ಮತ್ತು ತಪ್ಪೊಪ್ಪಿತದ ಆತ್ಮಂತಿಕ ಖಾಸಗಿ ನುಡಿಗಟ್ಟಿನ ನಡುವೆ ದ್ವಂದ್ವ ವರ್ಗೀಕರಣ ಆರಂಭವಾದದ್ದು.

ಸಮಾಜದ ಸಂಗತಿಗಳಿಂದ ಕವಿಗಳು ಅಂಚಿಗೆ ತಳ್ಳಲ್ಪಟ್ಟವರಾಗಿದ್ದಾರೆ. ಒಂದೆಡೆಯಲ್ಲಿ ವಿಮರ್ಶಕರಾಗಿ ಅವರನ್ನು ಕೆಲವೊಮ್ಮೆ ಹೊಸ ಪಾದ್ರಿತ್ವ ಹೊಂದಿದವರಾಗಿ ಪವಿತ್ರ ನಾವೀನ್ಯದ ಲೋಕ ಕಾಯುವವರೆಂದು ಪರಿಗಣಿಸಲಾಗುತ್ತದೆ. ಇನ್ನೊಂದೆಡೆಯಲ್ಲಿ ತಂತ್ರಜ್ಞಾನದ ಹೊಸ ಶಕ್ತಿಗಳು ಮತ್ತದರ ಉಪ-ಉತ್ಪನ್ನಗಳು, ಅತಿ ದೊಡ್ಡ ಕಂದರವನ್ನೇ ಸೃಷ್ಟಿಸಿವೆ. ಕಲಿಸಿ ಮತ್ತು ಪಡೋಸಿ★೪ ಪಾತ್ರಗಳು, ಅಂದರೆ 'ಕವಿಯಾಗಿ ಆವಾಹಿತನಾದವನೂ ಮತ್ತು ಪಕ್ಕದ ಮನೆಯ ಸ್ನೇಹಿತನಾಗಿ ಅವನ ಪಾತ್ರ'ಗಳೆರಡೂ ಮತ್ತೆ ಒಗ್ಗೂಡಲು ಸಾಧ್ಯವೆ ಎಂಬ ಅನುಮಾನಗಳು ಆರಂಭವಾಗಿವೆ. ರಾಬರ್ಟ್ ಬ್ಲೈನನ ಜಗಿಯುವ ಕಾವ್ಯ, ಕಬೀರನ ಕುರಿತ ಅವನ ೪೨ ಭಾವೋದ್ರೇಕದ ಪದ್ಯಗಳು, ವಿಲಿಯಂ ಬ್ಲೇಕ್ ಮತ್ತಿತರರ ಪದ್ಯಗಳು ಅಪರೂಪವಾಗುತ್ತಿವೆ. ಒಗ್ಗೂಡಿಸಲು ಅಸಾಧ್ಯವಾದಾಗ ಇದು ಸೂಕ್ಷ್ಮ ಮನಸ್ಸಿನ ಕವಿಗಳಿಗೆ ಬಹುದೊಡ್ಡ ವಿಭಾಗವಾಗಿ ಕಾಣಲು ಶುರುವಾಯಿತು. ಕಬೀರನು ಮಾರುಕಟ್ಟೆಯಲ್ಲಿ ನಿಲ್ಲಬೇಕಾಯಿತು. ಒಂದು ಒರಿಯಾ ಮಾತು 'ಬ್ರಹ್ಮಜ್ಞಾನವನ್ನು ಮಾರುಕಟ್ಟೆಯಲ್ಲಿಡು' ಎಂದು ಹೇಳುವ ಮೂಲಕ ಹತ ಮಧ್ಯೇ ಬ್ರಹ್ಮಜ್ಞಾನ (haata madhye Brahmajnana) ಮಾತಿಗೆ ಪೆಟ್ಟುಕೊಡುತ್ತದೆ. ಆದರೆ ವಾಸ್ತವವಾಗಿ ಇವತ್ತಿನ ಅಗತ್ಯ ಕೂಡ ಇದೇ ಆಗಿದೆ. ತಾನು ತಾನಾಗಿರುವ ಮೂಲಕ, ತೀವ್ರವಾಗಿ, ಖಾಸಗಿಯಾಗಿ ಇರುವ ಹೊತ್ತಿಗೆ ಇತರರನ್ನು ತಲುಪುವ ಸಾಮರ್ಥ್ಯವನ್ನು ತನ್ನಲ್ಲಿ ಉಳಿಸಿಕೊಳ್ಳುವ ಮೂಲಕ ಕಾವ್ಯದ ಕನಸು ಇನ್ನೂ ಉಳಿದಿದೆಯೆಂಬುದು ನನ್ನ ನಂಬಿಕೆ.

ಬೋದಿಲೇರ್ ಹೇಳುತ್ತಾನೆ "ಆಧುನಿಕ ಕಲೆಯ ಪರಿಲ್ಪನೆಯೆಂದರೆ, ಏಕಕಾಲಕ್ಕೆ ವಿಷಯ ಮತ್ತು ವಿಷಯಿಯನ್ನು ಒಳಗೊಂಡು, ಹೊರಗಿನ ಪ್ರಪಂಚ ಮತ್ತು ಕಲಾವಿದ ಎರಡನ್ನೂ ಹದಗೊಂಡ ಧ್ವನ್ಯಾತ್ಮಕ ಮೋಡಿಯನ್ನು ಸೃಷ್ಟಿಸುವುದು."

ಸೂಕ್ಷ್ಮಮನಸ್ಸಿನ ಕವಿಗಳ ಕೈಯಲ್ಲಿ, ಕಾವ್ಯವು ಇಂದು ಅಂತಹ 'ವಿಸ್ತರಿಸಿದ ಅವಕಾಶ' ಮತ್ತು ಧ್ವನ್ಯಾತ್ಮಕ ಮೋಡಿ'ಯನ್ನು ಆವಿಷ್ಕರಿಸಲು ಮುನ್ನೋಡುತ್ತಿದೆ.

ಕೃಪೆ : ದ ಸಂಡೇ ಎಕ್ಸ್‌ಪ್ರೆಸ್, ಜ ೧೫, ೨೦೧೧

★೧ Auschwitz- ದಕ್ಷಿಣ ಪೋಲೆಂಡಿನ ಪಟ್ಟಣ ಇದು. ಎರಡನೆ ಮಹಾಯುದ್ಧದ ಸಮಯದಲ್ಲಿ ಜರ್ಮನಿಯವರು ಇಲ್ಲಿ ನಡೆಸಿದ ಕಾನ್ಸನ್‌ಟ್ರೇಶನ್ ಕ್ಯಾಂಪ್‌ನಿಂದಾಗಿ ಮಿಲಿಯನ್‌ಗಟ್ಟಲೆ ಯಹೂದ್ಯರು ಸಾವನ್ನಪ್ಪಿದರು ಎನ್ನಲಾಗುತ್ತದೆ. ಇತಿಹಾಸದಲ್ಲಿ ಇದೊಂದು ಕರಾಳ ಘಟನೆ.

★೨ cogito ergo sum- ನಾನು ಆಲೋಚಿಸುತ್ತೇನೆ ಹಾಗಾಗಿ ನನ್ನ ಅಸ್ತಿತ್ವವಿದೆ ಎಂಬ ಡೆಕಾರ್ಟ್‌ನ ಸಿದ್ಧಾಂತ


★೩ kalisi- ಕವಿಶಕ್ತಿ ಆವಾಹಿತನಾದವನು

★೪ padosi ಪಕ್ಕದ ಮನೆಯವನು/ಸ್ನೇಹಿತ

ಸೀತಾಕಾಂತ ಮೊಹಾಪಾತ್ರ

(೧೭ ಸೆಪ್ಟೆಂಬರ್ ೧೯೩೭)

೭೩ ವರ್ಷಗಳ ಸೀತಾಕಾಂತ ಮೊಹಾಪಾತ್ರ ಒರಿಯಾ ಹಾಗೂ ಇಂಗ್ಲಿಷ್ ಭಾಷೆಗಳ ಕವಿ ಮತ್ತು ಲೇಖಕ. ನನ್ನ ಕನಸುಗಳು ಮಾತೃಭಾಷೆಯಲ್ಲಿ ಕಾಣಬಲ್ಲೆನಾದ್ದರಿಂದ ನನ್ನ ಕವಿತೆಗಳು ಒರಿಯಾದಲ್ಲೇ ಬರೆಯುತ್ತೇನೆಂದು ಹೊರಟ ಲೇಖಕ. ಕಾವ್ಯ ಒರಿಯಾದಲ್ಲಾದರೆ ವಿಮರ್ಶಾ ಸಂಪಾದನೆಗಳನ್ನು ಇಂಗ್ಲಿಷ್‌ನಲ್ಲಿ ಬರೆಯುತ್ತಿದ್ದಾರೆ.



ಒರಿಸ್ಸಾದ ಮಹಾನದಿಯ ಮುಖ್ಯ ಉಪನದಿ ಚಿತ್ರೋತ್ಪಲಾ ನದಿಯ ದಡದ ಮಹಂಗಾ ಎಂಬ ಹಳ್ಳಿಯಲ್ಲಿ ಹುಟ್ಟಿದ ಸೀತಾಕಾಂತರು, ತಮ್ಮ ವಿದ್ಯಾಭ್ಯಾಸ ಕಟಕ್‌ನಲ್ಲಿ ನಡೆಸಿದರು. ಇತಿಹಾಸದಲ್ಲಿ ಬಿ.ಎ. ಪದವಿಯನ್ನೂ ರಾಜ್ಯಶಾಸ್ತ್ರದಲ್ಲಿ ಸ್ನಾತಕ ಪದವಿ ಯನ್ನೂ ಪಡೆದರು. ಆರಂಭದ ಎರಡು ವರ್ಷಗಳು ಉತ್ಕಲ ವಿಶ್ವವಿದ್ಯಾಲಯದಲ್ಲಿ ಅಧ್ಯಾಪನ ನಡೆಸಿದರು. ಐಎಎಸ್ ಪದವಿಯ ನಂತರ ಅನೇಕ ಸಂಸ್ಥೆಗಳಲ್ಲಿ ಐಎಎಸ್ ಅಧಿ ಕಾರಿಯಾಗಿ ಕಾರ್ಯನಿರ್ವಹಿಸಿದರು. ಅನೇಕ ಸಾಂಸ್ಕೃತಿಕ ಸಂಸ್ಥೆಗಳ ಮುಖ್ಯ ಕಾರ್ಯಭಾರಗಳನ್ನು ನಿರ್ವಹಿಸಿದರು. ಕೇಂಬ್ರಿಡ್ಜ್ ಮತ್ತು ಹಾರ್ವರ್ಡ್ ವಿಶ್ವವಿದ್ಯಾಲಯಗಳ ಸೀನಿಯರ್ ಫೆಲೋ ಆಗಿದ್ದ ಮೊಹಾಪಾತ್ರ ಈಗ ದೆಹಲಿಯ ನ್ಯಾಷನಲ್ ಬುಕ್ ಟ್ರಸ್ಟ್‌ನ ಅಧ್ಯಕ್ಷರಾಗಿದ್ದಾರೆ.

೧೯೬೩ರಲ್ಲಿ 'ದೀಪ್ತಿ ಓ ದ್ಯುತಿ' ಎಂಬ ಒರಿಯಾ ಕವಿತಾಸಂಕಲನದಿಂದ ಹಿಡಿದು ಸುಮಾರು ಹದಿನೈದಕ್ಕೂ ಹೆಚ್ಚು ಕವಿತಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು, ಒಂದು ಪ್ರವಾಸ ಕಥನ ಹಾಗೂ ಅನೇಕ ಅನುವಾದಗಳನ್ನು ಮಾಡಿದ್ದಾರೆ. ಇಂಗ್ಲಿಷ್‌ನಲ್ಲಿ ಮೂವತ್ತಕ್ಕೂ ಹೆಚ್ಚು ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದ ಕೃತಿಗಳು ಬೆಳಕು ಕಂಡಿವೆ. Social Anthropology ಕುರಿತು ಎರಡು ಕೃತಿಗಳನ್ನು ರಚಿಸಿ, ಸಂತಾಲ್ ಬುಡಕಟ್ಟಿನ ಮೌಖಿಕ ಕಾವ್ಯದ ಒಂಬತ್ತು ಸಂಪುಟಗಳ ಪ್ರಕಟಣೆಗೆ ಕಾರಣವಾಗಿದ್ದಾರೆ. ಸಂತಾಲ್ ಬುಡಕಟ್ಟು ಜನರ ಒಡನಾಟದಿಂದ ಸಂತಾಲಿ ಭಾಷೆಯ ಮೌಖಿಕ ಕಾವ್ಯದ ಸಂಗ್ರಹವಷ್ಟೇ ಅಲ್ಲದೆ, ಅದರ ಅನುವಾದವನ್ನೂ ಮಾಡಿದ್ದಾರೆ.

೧೯೯೩ರ 'ಜ್ಞಾನಪೀಠ' ಪ್ರಶಸ್ತಿಯೂ ಸೇರಿ ಅನೇಕ ಪ್ರಶಸ್ತಿಗಳನ್ನು ಸೀತಾಕಾಂತರು ಪಡೆದಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ, ಒರಿಯಾ ಸಾಹಿತ್ಯ ಅಕಾಡೆಮಿ, ಟೋಕಿಯೋದ 'ಸೋರಾ' ವಿಶ್ವವಿದ್ಯಾಲಯ ಪ್ರಶಸ್ತಿ ಜೊತೆಗೆ ಭಾರತ ಸರ್ಕಾರದ ಪದ್ಮಭೂಷಣ ಹಾಗೂ ಪದ್ಮವಿಭೂಷಣ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಪ್ರಸ್ತುತ ಭುವನೇಶ್ವರದಲ್ಲಿ ನೆಲೆಸಿದ್ದಾರೆ.



ಕುವೆಂಪು ಕಾದಂಬರಿಗಳು ಮತ್ತು ಪೂರ್ಣದೃಷ್ಟಿ

ಬಿ.ಎನ್. ಸುಮಿತ್ರಾಬಾಯಿ

ಕುವೆಂಪು ಅವರ ಸಾಹಿತ್ಯದ ವೈಚಾರಿಕ ನೆಲೆಗಳು, ಅದರಲ್ಲೂ ಸಮಾಜವಾದಿ ಆಶಯಗಳಿಗೆ ಪೂರಕವಾಗಿರುವಂಥವನ್ನು 'ಪ್ರಗತಿಪರ' ಎಂಬ ಪರಿಕಲ್ಪನೆಗೆ ಹೊಂದುವಂಥವನ್ನು ಕುರಿತ ಶೋಧನೆಗಳು, ಚರ್ಚೆಗಳು, ವಿಮರ್ಶೆಗಳೂ ಕಳೆದೆರೆಡು ದಶಕಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನಡೆದಿರುತ್ತವೆ. ಅವರ ಕಾದಂಬರಿಗಳದು 'ವಾಸ್ತವವಾದಿ ಮಹಾಮಾರ್ಗ'ವೆಂದು ಗುರುತಿಸುವ ಯತ್ನಗಳೂ ಎಲ್ಲರಿಗೂ ಗೊತ್ತಿರುವಂಥವು. ಆದರೆ, ಕಾವ್ಯ, ನಾಟಕ ಮತ್ತು ವಿಮರ್ಶೆಯ ಪ್ರಕಾರಗಳಲ್ಲಿ ಕುವೆಂಪು ಪ್ರತಿಪಾದಿಸಿ ಎತ್ತಿ ಹಿಡಿದಿರುವ, ಅವರ ಬಹುಮುಖ್ಯವಾದ ಜೀವನದರ್ಶನವನ್ನು ಹೇಳುವ 'ಪೂರ್ಣದೃಷ್ಟಿ'ಯ ತಾತ್ತ್ವಿಕತೆಯನ್ನು ಅವರ ಕಾದಂಬರಿಗಳಿಗೂ ಅನ್ವಯಿಸಿ ನೋಡುವ ಸಾಧ್ಯತೆ ಹೆಚ್ಚಾಗಿ ಶೋಧಿತವಾದಂತಿಲ್ಲ. ಅದರಲ್ಲೂ ಆಧುನಿಕ ಹಾಗೂ ಆಧುನಿಕೋತ್ತರವಾದಿ ವಿಮರ್ಶಾ ಯತ್ನಗಳೂ ಗಮನಿಸದೆ ಬಿಟ್ಟಿರುವ ಈ 'ಪೂರ್ಣದೃಷ್ಟಿ'ಯು ಕುವೆಂಪು ಕಾದಂಬರಿಗಳಲ್ಲೂ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಚರ್ಚೆಗೆ ಮುಂದಿಡುವುದು ನನ್ನ ಈ ಪ್ರಬಂಧದ ಆಶಯ. ಈ ವಿಚಾರವನ್ನು ಚರ್ಚೆಗೆ ತರುವುದಕ್ಕಾಗಿ ಈ ಕೆಲವು ಪ್ರಮೇಯಗಳನ್ನು ಮುಂದಿಡುತ್ತೇನೆ.

೧. 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳು ರಚಿತವಾದ ಕಾಲ ಮತ್ತು ರಾಜಕೀಯ-ಸಾಮಾಜಿಕ ಪರಿಸರಗಳ ದೃಷ್ಟಿಯಿಂದ ಬೇರೆ ಬೇರೆ ಎಂದು ಚಾರಿತ್ರಿಕವಾಗಿ ಗುರುತಿಸಲ್ಪಡುತ್ತವೆಯಾದರೂ ಮೂಲಭೂತವಾಗಿ ಅವುಗಳನ್ನು ಒಂದೇ ವಸ್ತುವನ್ನು ಎರಡು ಭಾಗಗಳಲ್ಲಿ ಕಥಿಸುವ ಏಕಪಠ್ಯವೆಂದು ನೋಡುವುದೂ ಸಾಧ್ಯವಿದೆ.

೨. ವಿಶ್ವದ ಸ್ವಾಯತ್ತವೂ ಸ್ವತಂತ್ರವೂ ಆದ ಜೀವನದ ಪರಿಪೂರ್ಣತ್ವದ ಜೊತೆಯಲ್ಲಿ

ಮಾನವರ ಬದುಕಿನ ಸಾಪೇಕ್ಷತೆಯನ್ನು ಗುರುತಿಸುವುದು ಹಾಗೂ ಪೂರ್ಣವಿಕಾಸದತ್ತ ಎಲ್ಲಿ ಮಾನವರ ಊರ್ಧ್ವಮುಖ ಪಯಣವನ್ನು ಪ್ರತಿಪಾದಿಸುವುದರಲ್ಲಿಯೇ ಕುವೆಂಪು ಅವರ ಕಾದಂಬರಿಗಳು ಹೇಳುವ 'ವಿಮೋಚನೆ ' ಮತ್ತು 'ಪ್ರಗತಿ'ಯ ಪರಿಕಲ್ಪನೆಗಳಿವೆ. ಆದ್ದರಿಂದ ಅವರ ಕಾದಂಬರಿಗಳಲ್ಲಿರುವ ಜನ-ಜೀವನ ದರ್ಶನ ವಿಶ್ವದೃಷ್ಟಿಯೆದುರಲ್ಲಿ ಸಾಪೇಕ್ಷವಾದದ್ದು.

೩. ವಿಶ್ವದ ಅನಂತತೆ ಮತ್ತು ಮಾನವ ಬದುಕಿನ ಪರಿಮಿತತೆಗಳ ಚೌಕಟ್ಟಿನೊಳಗೂ ಅಡಗಿರುವ ಬದುಕಿನ ಅನಂತ, ವೈವಿಧ್ಯಮಯ ಅವಸ್ಥೆಗಳನ್ನು, ಜೀವಂತವಾಗಿರುವ ಕ್ಷಣ ಸತ್ಯಗಳನ್ನು ವಿಸ್ತಾರವಾಗಿ ತೆರೆದಿಡುವ ಮೂಲಕ ಕುವೆಂಪು ಪ್ರಾದೇಶಿಕ ಪುಟ್ಟ ಗ್ರಾಮೀಣ ಜಗತ್ತನ್ನು ರಾಷ್ಟ್ರೀಯ, ಜಾಗತಿಕ ಮತ್ತು ವಿಶ್ವಾತ್ಮಕ ವ್ಯವಸ್ಥೆಯೊಂದಿಗೆ ಬೆಸೆದುಕೊಳ್ಳುವ ರೀತಿಯಲ್ಲಿ ಪೂರ್ಣತ್ವದ ದರ್ಶನ ಮಾಡಿಸುವ ಮಹದಾಶಯವೊಂದಕ್ಕೆ ಸೂಚನೆಯಿತ್ತಿದ್ದಾರೆ.

ಮೇಲೆ ಹೇಳಲಾಗಿರುವ ನನ್ನ ಪ್ರಮೇಯಗಳನ್ನು ಚರ್ಚಿಸುವುದಕ್ಕೆ ತಳಹದಿಯಾಗಿ ಇಲ್ಲಿ ಕೆಲವು ಸಂಗತಿಗಳನ್ನು ನೆನಪಿಗೆ ತಂದುಕೊಳ್ಳಬಹುದು.

ಅ. ಸಾಮಾಜಿಕ ವಾಸ್ತವವಾದ(social realism) ಎಂದು ಗುರುತಿಸಲಾಗುವ ವಾಸ್ತವವಾದದ ಕೆಲವು ಲಕ್ಷಣಗಳು ಕುವೆಂಪು ಕಾದಂಬರಿಗಳ ದೊಡ್ಡ ಶರೀರವನ್ನೂ ಅದರ ಅಂಗಾಂಗಗಳನ್ನೂ ಸೃಷ್ಟಿಸುತ್ತದೆ. ಉದಾಹರಣೆಗೆ- ಸಾಮಾಜಿಕ ಮತ್ತು ಜನಾಂಗೀಯ ಅನ್ಯಾಯಗಳ ಚಿತ್ರಣ. (ಜಾತಿಭೇದ, ವರ್ಗಭೇದ, ಲಿಂಗ ತಾರತಮ್ಯ ಮುಂತಾದ ಸಾಮಗ್ರಿ ಇಲ್ಲಿ ದಟ್ಟವಾಗಿ ಚಿತ್ರಿತವಾಗಿರುತ್ತದೆ.) ಆರ್ಥಿಕ ಬಡತನದ ಮತ್ತು ಮಾನಸಿಕ ದಮನದ ಫಲವಾದ ಜೀವನದ ದುರವಸ್ಥೆಗಳ ವಿವರವಾದ ಪ್ರತಿಪಾದನೆ, ವ್ಯಕ್ತಿಯ ಹಾಗೂ ಸಮಾಜದ ಬದುಕಿನೊಳಗಿನ ಅಸ್ತಿತ್ವದ ಹೋರಾಟಗಳ ಚಿತ್ರಣ, ದುಡಿಯುವ ಜನರ ದೈನಂದಿನ ಬದುಕಿನ ಚಟುವಟಿಕೆಗಳನ್ನು ವೀರೋಚಿತವಾಗಿ ಉದಾತ್ತ ಭಾವದಿಂದ ಚಿತ್ರಿಸುವುದು... ಇತ್ಯಾದಿ. ಇಂಥ ಸಾಮಾಜಿಕ ವಾಸ್ತವವಾದಿ ಲಕ್ಷಣಗಳು ಮಲೆನಾಡಿನ ಮಡಿಲಲ್ಲಿರುವ ಪುಟ್ಟ ಹಳ್ಳಿಗಳ ಜನ-ಜೀವನದ ಸಂದರ್ಭವನ್ನು ಬಳಸಿಕೊಂಡು ತುಂಬ ವಿಸ್ತಾರವಾದ, ಜೀವಂತಿಕೆಯುಳ್ಳ, ವೈವಿಧ್ಯಮಯವೂ ಆದ ಕಾದಂಬರಿಗಳನ್ನು ಕುವೆಂಪು ಕಟ್ಟಿದ್ದು. ಸ್ಥಳೀಯವೂ, ದೇಸಿಯೂ ಆದ ರೂಪ-ರೇಖೆ-ಬಣ್ಣಗಳ ಅಸಾಧಾರಣ ಕಲಾಸಿರಿ ಇವುಗಳಿಗೆ ಒದಗಿದೆ ಎನ್ನುವುದು ಎಲ್ಲರಿಗೂ ಗೊತ್ತಿರುತ್ತದೆ.

ಆ. ಚಾರಿತ್ರಿಕ ಕಾಲಾನುಕ್ರಮಣಿಕೆಯಲ್ಲಿ 'ಕಾನೂರು ಹೆಗ್ಗಡಿತಿ'ಯು ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮ ತೀವ್ರವಾಗಿ ಕಾವೇರುತ್ತಿದ್ದ ಕಾಲದಲ್ಲಿ (೧೯೩೬)ರಚಿತವಾದದ್ದು. 'ಮಲೆಗಳಲ್ಲಿ ಮದುಮಗಳು' ಹೊರಬಂದಾಗ ವಸಾಹತೋತ್ತರ ಸ್ವತಂತ್ರ ಭಾರತವು ನೆಹರೂ ಯುಗದ ಆಶೋತ್ತರಗಳಲ್ಲಿತ್ತು. ಆದರೆ, ಕುವೆಂಪು ಕಾದಂಬರಿಗಳು ವಸಾಹತುಶಾಹಿ ಮತ್ತು ವಸಾಹತೋತ್ತರ ಭಾರತೀಯ ಸಂದರ್ಭಗಳನ್ನು ಸಮಕಾಲದ ಕಣ್ನೆಲೆಯಿಂದ ನೋಡುವ ಯತ್ನಗಳಾಗುವುದಿಲ್ಲ. ಬದಲಾಗಿ ಆ ಎರಡೂ ಕಾಲಘಟ್ಟಗಳಿಗಿಂತ ತುಂಬ ಹಿಂದಿನ ಜೀವನಾವಸ್ಥೆಗಳನ್ನು ವಸ್ತುವಾಗಿಸಿಕೊಂಡಿವೆ. ಆದ್ದರಿಂದ ತಾವಿರುವ ಕಾಲಕ್ಕಿಂತ ಹಿಂದಕ್ಕೆ ಹೋಗಲು ಅವು ಯತ್ನಿಸುತ್ತವೆ ಎನ್ನಬಹುದು.

ಕುವೆಂಪು ಅವರ ಬಾಲ್ಯದ ನೆನಪುಗಳಲ್ಲೂ, ಅವರ ಆಪ್ತೇಷ್ಟ ಬಂಧುಗಳ ಹಾಗೂ ಪರಿಚಿತರ ಸ್ಮೃತಿ ಕಥನಗಳಲ್ಲೂ ಉಳಿದಿರಬಹುದಾದ ಮಲೆನಾಡಿನ ಬದುಕಿನ ಸ್ಥಿತ್ಯಂತರದ ಅವಸ್ಥೆಯನ್ನು ಕೇಂದ್ರಕ್ಕೆ ತರುವಂಥ ಕೃತಿಗಳಿವು. ತಮ್ಮ ನಿಕಟ ಸಮಕಾಲೀನ ನಗರ ಕೇಂದ್ರಿತ ಜನಜೀವನದ ತುಡಿತ. ತಳಮಳ, ಆಸೆ, ಆಕಾಂಕ್ಷೆ, ಹೋರಾಟಗಳೆಲ್ಲದರಿಂದಲೂ ಹಿಂದಕ್ಕೆ ಸರಿದು ಗತಕಾಲದಲ್ಲಿ ನೆಲೆಸುವ ಮತ್ತು ದಾರ್ಶನಿಕ ಹುಡುಕಾಟಕ್ಕೆ ತೊಡಗುವ ಯಾವ ರೀತಿಯ ಸೃಜನಶೀಲ ಆಯ್ಕೆಯನ್ನು ಕುವೆಂಪು ಅವರ ರಾಮಾಯಣದರ್ಶನಂ ಕಾವ್ಯದಲ್ಲಿ ಮತ್ತು ಅವರ ನಾಟಕಗಳಲ್ಲಿ ಕಾಣುತ್ತೇವೆಯೋ ಅಂತಹುದೇ ಆಯ್ಕೆಯೊಂದನ್ನು ಅವರ ಕಾದಂಬರಿಗಳೊಳಗೂ ಗುರುತಿಸಲು ಸಾಧ್ಯವಿದೆ. (ಇದರರ್ಥ ಸುತ್ತಲಿನ ಅಂದಂದಿನ ವರ್ತಮಾನದ ಆಗುಹೋಗುಗಳಿಗೆ ಕುವೆಂಪು ಸ್ಪಂದಿಸಲೇ ಇಲ್ಲ ಎಂಬುದಲ್ಲ. ಅವರ ನೂರಾರು ಬಿಡಿ ಕವಿತೆಗಳಲ್ಲಿ, ವೈಚಾರಿಕ ಲೇಖನಗಳಲ್ಲಿ, ಸಣ್ಣಕಥೆ ಹಾಗೂ ಪ್ರಬಂಧಗಳಲ್ಲಿ ಸಮಕಾಲೀನಕ್ಕೆ ಪ್ರತಿಸ್ಪಂದಿಸಿರುವ ಅಸಂಖ್ಯ ಮಾದರಿಗಳಿರುತ್ತವೆ.)ಅಂದರೆ, ಪ್ರತಿಕೃತಿ ದರ್ಶನಕ್ಕೆ ಬದಲಾಗಿ ಪ್ರತಿಮಾ ವಿಧಾನಕ್ಕೇ ಆದ್ಯತೆ ನೀಡಿದ್ದ ಕುವೆಂಪು ಅವರ ಸೃಷ್ಟಿಶೀಲ ದೃಷ್ಟಿಕೋನಕ್ಕೆ ಕಾದಂಬರಿಗಳೂ ಹೊರತಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು.

ಇ. ದೇಶದ ರಾಜಕೀಯ ಸ್ವಾತಂತ್ರ್ಯವಷ್ಟೇ ನಿಜವಾದ ಬಿಡುಗಡೆಯಲ್ಲ. ವಿದ್ಯೆಯ ಸವಲತ್ತು ಜೀವನಾವಕಾಶಗಳೇ ನಿರಾಕೃತವಾಗಿರುವುದರಿಂದ ದೈಹಿಕವಾಗಿಯೂ, ಮಾನಸಿಕವಾಗಿಯೂ ದಾಸ್ಯದಲ್ಲಿ ನರಳುತ್ತಿರುವ ಬಹುಸಂಖ್ಯಾತ ಸಾಮಾನ್ಯಾತಿಸಾಮಾನ್ಯ ಜನರ ಸ್ಥಿತಿಗತಿಗಳು ನಿಜವಾಗಿ ಬದಲಾದಾಗಲೇ ದೇಶದ ಪ್ರಗತಿ ಸಾಧ್ಯ ಎಂಬ ಸಮಾಜವಾದದ ತಾತ್ತ್ವಿಕ ವಿಚಾರವನ್ನು ತಮ್ಮ ಮುಖ್ಯ ಶ್ರದ್ಧೆಯಾದ ಉಪನಿಷದ್ದರ್ಶನ, ಯೋಗ ದರ್ಶನಗಳು ಹೇಳುವ ಪೂರ್ಣತ್ವದ ತತ್ತ್ವದ ಜೊತೆಗೆ ಬೆಸೆದುಕೊಂಡು ಕುವೆಂಪು ಯಾವ ರೀತಿಯ ಸಂಕೀರ್ಣ ದರ್ಶನವನ್ನು ಕಾವ್ಯ-ನಾಟಕಗಳಲ್ಲಿ ಒದಗಿಸಿದ್ದಾರೋ ಅದೇ ರೀತಿಯ ಯತ್ನವನ್ನು ಅವರ ಕಾದಂಬರಿಗಳಲ್ಲೂ ಕಾಣಬಹುದು ಎಂಬುದು ನನ್ನ ಇಲ್ಲಿನ ವಾದವಾಗಿದೆ. ಈ ವಿಚಾರಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ನಾನು ನನ್ನ ವಿಚಾರವನ್ನು ಪ್ರತಿಪಾದಿಸಲು ಯತ್ನಿಸುತ್ತೇನೆ.

೧. 'ಕಾನೂರು ಹಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಎರಡೂ ಒಂದೇ ಪಠ್ಯದ ಭಾಗಗಳು. ಎರಡು ಕಾದಂಬರಿಗಳು ಹೇಳುವುದೂ 'ಮಲೆನಾಡ ಬಾಳಿನ ಕಥನ'ವನ್ನೇ. ಮೊದಲ ಕಾದಂಬರಿಯ ವಸ್ತುವಿನ ಚಾರಿತ್ರಿಕ ಕಾಲಕ್ಕಿಂತಲೂ ಹಿಂದಿನ ಕಾಲದ ಮಲೆನಾಡನ್ನು ಎರಡನೆಯ ಕಾದಂಬರಿ(ಚಿತ್ರಿಸುತ್ತವೆ) ಮುಂದಿಡುತ್ತದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಎಲ್ಲಿ ಕೊನೆಯಾಗುತ್ತದೋ ಅಲ್ಲಿಂದಲೇ 'ಕಾನೂರು ಹೆಗ್ಗಡಿತಿ' ಕಾದಂಬರಿಯ ಕಥೆ ಆರಂಭವಾಗುತ್ತದೆ. ಅಂದರೆ, ಒಂದು ಹೋಲಿಕೆಯಿಂದ ವಿವರಿಸಬಹುದಾದರೆ, ತನ್ನ ಬಾಲವನ್ನು ತನ್ನದೇ ಬಾಯಲ್ಲಿರಿಸಿಕೊಂಡು ಸುರುಳಿಯಾಗಿರುವ ಹೆಬ್ಬಾವಿನಂತೆ ಮಲೆನಾಡ ಬದುಕು ಇಲ್ಲಿದೆ. ಹಾವಿನಂತೆಯೇ ಸದಾ ಹೊಸ ಹೊಳಪು, ಕುತೂಹಲ, ಭಯ, ವಿಸ್ಮಯಗಳನ್ನು ನೋಡುಗರಿಗೆ ಉಂಟುಮಾಡುವ ವಿಚಿತ್ರ ಸೆಳೆತ ಈ ಪಠ್ಯಕ್ಕೆ ಇದೆ.

ವರ್ತುಲ, ಸುರುಳಿ ಅಥವಾ ಚಕ್ರಾಕಾರದಲ್ಲಿ ಜೀವನವನ್ನು, ಬ್ರಹ್ಮಾಂಡವನ್ನು, ಸೃಷ್ಟಿ-ಸ್ಥಿತಿ-ಲಯಗಳನ್ನು, ಸಂವತ್ಸರ, ಋತು, ಮಾಸಾದಿ ಕಾಲಗಣನೆಯನ್ನೂ ಭಾವಿಸಿರುವುದು ಪ್ರಾಚೀನ ಭಾರತೀಯ

ಚಿಂತನೆಯ ಬಹುಮುಖ್ಯ ಲಕ್ಷಣ ಮತ್ತು ಕುವೆಂಪು ಇಂಥ ಚಿಂತನೆಗೂ ತುಂಬ ನಿಕಟವಿದ್ದವರು.

'ಮಲೆ' ಹೋಗಿ 'ಊರು' ಆದ ಮಲೆನಾಡ ಕಥೆಯನ್ನು ಕುವೆಂಪು ಒಟ್ಟಾಗಿಯೇ ಹೇಳಲೆತ್ನಿಸುತ್ತಾರೆ ಎನ್ನುವುದಕ್ಕೆ ಕೃತಿಗಳ ಒಳಗೇ ಸೂಚನೆ ಸಿಗುತ್ತದೆ. ಮಲೆಯ ಕಾಡುಗಳಲ್ಲಿ ಅಲೆದಲೆದು ತಲೆಮರೆಸಿಕೊಂಡು, ನೆಲೆಯಿಲ್ಲದೆ ಬದುಕಬೇಕಾದ ಸ್ಥಿತಿಯಿಂದ ಪಾರಾಗಲು ಗುತ್ತಿ ಹೋಗಿ ಸೇರುವುದು ಕಾನೂರನ್ನು. ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ದೇಶದ ಸ್ಥಿತ್ಯಂತರ ಅವಸ್ಥೆಗೆ ಸಾಂಕೇತಿಕವಾಗಿ ಅಭಿವ್ಯಕ್ತಿ ನೀಡುವ ಹೊತ್ತಿನಲ್ಲೇ ಅತ್ಯಂತ ಪ್ರಾದೇಶಿಕವಾಗಿದ್ದೂ ಜಾಗತಿಕ ವಿದ್ಯಮಾನಕ್ಕೆ ಜೋಡಿಸಿಕೊಳ್ಳುವ ವಿಶಿಷ್ಟ ರೀತಿಯ ಕಥೆಯ ಎಳೆಗಳನ್ನು ಇವುಗಳ ರಾಚನಿಕ ಸಂಯೋಜನೆಯಲ್ಲಿ ಗುರುತಿಸಲು ಸಾಧ್ಯವಿದೆ. (ಉದಾ: ಚಿಕಾಗೋದಲ್ಲಾಗುವ ವಿಶ್ವಧರ್ಮ ಸಮ್ಮೇಳನದ ಜೊತೆ ಮಲೆನಾಡಿನ ಕುಗ್ರಾಮಗಳ ಸ್ಥಿತಿಯನ್ನೂ ಜೋಡಿಸಿ ಪ್ರಸ್ತಾಪಿಸುವ ರೀತಿ.)

ಅಂದರೆ, ಬದುಕಿನ ಒಂದು 'ವಲಯ'ವನ್ನು ಹಲವು 'ವಲಯ'ಗಳ ಜೊತೆಗೇ ಗ್ರಹಿಸಬಲ್ಲ ವಿಶಾಲವಾಗಿ ಗ್ರಹಿಸಬೇಕೆಂಬ ಮಹಾತ್ವಾಕಾಂಕ್ಷೆ ಇದು. ಕುಂಡಲಿನೀ ಯೋಗ ಸಾಧಕನೊಬ್ಬ ಆ ಶಕ್ತಿಯ ವಿವಿಧ ಚಕ್ರಗಳನ್ನು ಏರುತ್ತಾ ಸಹಸ್ರಾರವನ್ನು ತಲುಪುವಂತೆ ಕುವೆಂಪು ಕಾದಂಬರಿಗಳು ಮಲೆನಾಡಿನ ಪುಟ್ಟ ಎದೆಗೂಡಿನಿಂದ ಹೊರಟು ಬೆಳೆಬೆಳೆದು ವಿರಮಿಸುವುದು ವಿಶ್ವದ ನೆಲೆಯಲ್ಲಿ. ಈ ವಿಷಯವನ್ನು ಮುಂದೆ ವಿವರವಾಗಿ ಚರ್ಚಿಸಲಾಗುವುದು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಮುದ್ರಿತ ಆವೃತ್ತಿಯಲ್ಲಿ ಮೊದಲೇ ಮುದ್ರಿಸಲಾಗಿರುವ ಕೆಲವು ಸೂತ್ರವಾಕ್ಯಗಳಿವೆ. (ಇವು ಕುವೆಂಪು ಬರೆಯಲು ಬಯಸಿದ್ದ ಮುಂದಿನ ಕಾದಂಬರಿಗಾಗಿ ಅವರು ಟಿಪ್ಪಣಿಸಿದ್ದರೆಂಬುದು ಬೇರೆ. ಆದರೂ ಈ ಸೂತ್ರ ವಾಕ್ಯಗಳನ್ನು ಒಟ್ಟು ಕುವೆಂಪು ದಾರ್ಶನಿಕ ದೃಷ್ಟಿಯನ್ನು ಅರಿಯಲು ಬಳಸುವುದರಲ್ಲಿ ತಪ್ಪೇನೂ ಇಲ್ಲ.)

'ಇಲ್ಲಿ
ಯಾವುದಕ್ಕೂ ಮೊದಲಿಲ್ಲ;
ಯಾವುದಕ್ಕೂ ತುದಿಯಿಲ್ಲ;
ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ;
ಕೊನೆ ಮುಟ್ಟುವುದೂ ಇಲ್ಲ!'

ತುದಿ, ಮೊದಲು, ಅಂತಿಮ ಗುರಿ ಯಾವುದೂ ಇಲ್ಲದ ನಿರಂತರವಾಗಿ ಸಾಗುತ್ತಲೇ ಇರುವ (ತಿರುಗುತ್ತಲೇ ಇರುವ!) ವಿಶ್ವಜೀವನದ ಅನಂತತೆ ಮತ್ತು ಚಕ್ರಗತಿಯ ಚಲನೆಯ ಮೂಲಕ ಕಾದಂಬರಿಯ ಕಥೆಯ ಗತಿಯೂ ಸೂಚಿತವಾಗುವಂತಿದೆ. ಅನಂತತೆಯಲ್ಲಿ ಮತ್ತೆ ಮತ್ತೆ ಮರುಕಳಿಸುವ, ಬದಲಾಗುತ್ತಲೇ ಇರುವ ಬಾಳಿನೊಳಗೆ ಮಾನವರ ಬದುಕು ಎಷ್ಟೇ ಸಾಮಾನ್ಯದ್ದಾಗಿರಲಿ, ಎಷ್ಟೇ ಕ್ಷಣಿಕವೆನ್ನಿಸಿರಲಿ, ಆ ಅನುಕ್ಷಣ ಸತ್ಯಗಳನ್ನು ಜೀವಂತವಾಗಿಸಿ ಉದ್ದೀಪನಗೊಳಿಸಿ ಬಿಡಿ ಚಿತ್ರಗಳಾಗಿ ಕಟ್ಟುವುದು ಈ ಕಾದಂಬರಿಗಳ ಪ್ರಮುಖ ರಚನಾಕ್ರಮವಾಗಿದೆ.

ನಿರಂತರತೆ, ಮರುಕಳಿಕೆಗಳ ವಿಶ್ವಾತ್ಮಕ ಗ್ರಹಿಕೆ ಕೇವಲ ವೈದಿಕ ಧರ್ಮಕ್ಕೆ ಸೀಮಿತವಲ್ಲ. ಎಲ್ಲವೂ ಯಾವಾಗಲೂ ಇರಬಲ್ಲದು ಎಂಬ ಜೈನ ಸ್ಯಾದ್ವಾದಿ ಚಿಂತನೆಯಾಗಲಿ, ಯಾವುದೂ ಯಾವಾಗಲೂ ಇರುವುದೇ ಇಲ್ಲ ಎಂಬ ಬೌದ್ಧ ಶೂನ್ಯವಾದವಿರಲಿ, ನಮ್ಮ ಮನಕ್ಕೆ ಒದಗಿಸುವ ಭಾವನೆ ಎಂದರೆ, ನಿರಂತರತೆಯದೇ. ಆದರೆ ತುಂಬ ಸ್ಪಷ್ಟವಾಗಿ, ಎಲ್ಲ ಇಂದ್ರಿಯಗಳನ್ನೂ ತಣಿಸುವಷ್ಟು ಸಮೃದ್ಧ ರೀತಿಯಲ್ಲಿ

ಕುವೆಂಪು ಚಿತ್ರಿಸುವ ಸೇಂದ್ರಿಯ ಜೀವನಾನುಭವಗಳ ಬೃಹದಾರಣ್ಯದಲ್ಲಿ ದಾರಿ ತಪ್ಪದೆ ನಡೆಯಲು ಗುತ್ತಿಗೆ ಇರುವಂಥ ಪ್ರಜ್ಞೆ, ಅವಧಾನವಿದ್ದರೆ ಮಾತ್ರ ಸಾಧ್ಯ. ಇಲ್ಲವಾದಲ್ಲಿ ವಿಚಾರವಾದ, ವೈಜ್ಞಾನಿಕ ತಿಳಿವುಗಳೆಂಬ ಎತ್ತುಗಳ ಬಂಡಿ ಏರಿ ಹೊರಟರೆ ಹಳ್ಳದಿಣ್ಣೆಗಳಲ್ಲಿ ಬಿದ್ದು ಹೂವಯ್ಯನ ಹಾಗೆ ಬೆನ್ನು-ಸೊಂಟ ಉಳುಕಿಸಿಕೊಳ್ಳುವ ಸಾಧ್ಯತೆ ಇದ್ದೇ ಇರುತ್ತದೆ. ಹೀಗಾಗಿ ನಿರಂತರತೆ ಎಂಬ ದಾರ್ಶನಿಕ ಪರಿಕಲ್ಪನೆ ಕಾದಂಬರಿಗಳ ಒಳಗೆ ಹೇಗೆ ಕೆಲಸ ಮಾಡುತ್ತದ ಎಂಬುದನ್ನು ೧) ಪ್ರೇಮದ ಸಾಫಲ್ಯ, ವೈಫಲ್ಯಗಳ ಜಿಜ್ಞಾಸೆ, ೨) ಹಳೆಯದರ ನಾಶ- ಹೊಸತಿನ ಸೃಷ್ಟಿಯ ಪ್ರಶ್ನೆ ಮತ್ತು ೩) ಒಳಿತು-ಕೆಡಕುಗಳ ಸಂಘರ್ಷ – ಎಂಬ ಮೂರು ಮೌಲ್ಯ ಜಿಜ್ಞಾಸೆಗಳ ನಿದರ್ಶನದ ಮೂಲಕ ಪರಿಶೀಲಿಸ ಬಯಸುತ್ತೇನೆ. ಈ ಒಂದೊಂದು ಪ್ರಶ್ನೆಯನ್ನೂ ಕಾದಂಬರಿಗಳಲ್ಲಿ ನಿರ್ವಹಿಸಲಾಗಿರುವ ಕ್ರಮದಲ್ಲಿ ಯಾವುದೂ ಗುರಿ ತಲುಪದ – ಮುಕ್ತಾಂತದ ರೀತಿಯೇ ಪ್ರಧಾನವಾಗಿರುವುದನ್ನು ಕಾಣಬಹುದು.

೧. ಪ್ರೇಮ ಸಾಫಲ್ಯ - ವೈಫಲ್ಯಗಳ ಜಿಜ್ಞಾಸೆ :

ಹೂವಯ್ಯ – ಸೀತೆ, ಮುಕುಂದಯ್ಯ–ಚಿನ್ನಮ್ಮ, ಐತ-ಪೀಂಚಲು, ಗುತ್ತಿ-ತಿಮ್ಮಿಯರ ನಾಲ್ಕು ಜೋಡಿಗಳ ಮೂಲಕ ಕುವೆಂಪು ಹೆಣ್ಣು-ಗಂಡುಗಳ ಪ್ರೇಮದ ಆದರ್ಶಪ್ರಾಯವಾದ ಸ್ಥಿತಿಯೊಂದರ ಹುಡುಕಾಟಕ್ಕೆ ಈ ಕಾದಂಬರಿಗಳಲ್ಲಿ ಯತ್ನಿಸುತ್ತಾರೆ. ಈ ಯಾವ ಜೋಡಿಯೂ ಪರಿಪೂರ್ಣ ಮಾದರಿ ಎನ್ನುವಂತಿಲ್ಲ.

ಹೂವಯ್ಯನು ಆಕಾಶಕ್ಕೂ, ಸೀತೆಯು ಭೂಮಿಗೂ ಜೋಡಿಸಿಕೊಂಡಿದ್ದಾರೋ ಎಂಬ ಹಾಗೆ ಅವರ ಅನುಭವಗಳೂ ಬದುಕಿನ ಹೋರಾಟಗಳೂ ಭಿನ್ನವಾಗಿ ಕಾಣುತ್ತವೆ. ಎಷ್ಟೇ ಆದರ್ಶಪ್ರಾಯ ಸಾತ್ವಿಕ ವ್ಯಕ್ತಿಗಳಾಗಿದ್ದರೂ, ಅವರ ಪರಸ್ಪರ ಪ್ರೇಮದಲ್ಲಿ ಬಲವಾದ ರಮ್ಯವಾದಿ ಛಾಯೆ ಇದ್ದರೂ, ಒಂದಾಗಲು ಸಾಧ್ಯವಿರದೆ, ಸಮತಲದಲ್ಲಿ ಪ್ರೀತಿ-ಗೌರವಗಳಿಗೇ ಅವರು ಸೀಮಿತವಾಗಿ ಉಳಿಯುತ್ತಾರೆ. ಮುಕುಂದಯ್ಯ – ಚಿನ್ನಮ್ಮರನ್ನು ಒಂದಾಗಿಸಲು ದೈವವೇ ನಿಯಮ ಮಾಡಿರುತ್ತದೆ. ಆದರೆ, ವಾಸ್ತವ ಜೀವನದ ಭೌತಿಕ ಶಕ್ತಿಗಳು, ಸಾಮಾಜಿಕ ಶಕ್ತಿಗಳೂ ಅವರನ್ನು ದೂರವೇ ಉಳಿಸಿಬಿಡುವಷ್ಟು ಶಕ್ತವಾಗಿವೆ. ಅವರು ಮುಂದೆಯಾದರೂ ಮದುವೆ ಆಗುವರು ಎಂಬ ನಿರೀಕ್ಷೆಯಲ್ಲೇ ಕಾದಂಬರಿ ಮುಗಿಯುತ್ತದೆ. ಗುತ್ತಿ-ತಿಮ್ಮಿಯರ ಬದುಕಿನ ತುಂಬ ಬೇರೆ ಬೇರೆ ದಮನಗಳಿದ್ದರೂ ಪರಸ್ಪರರನ್ನು ಪಡೆಯಲು ನಿರಂತರವಾಗಿ ಹೋರಾಡುತ್ತಾರೆ; ಆದರೆ, ಅದಕ್ಕಾಗಿ ನೆಲೆ ತಪ್ಪಿದವರೂ ಆಗುತ್ತಾರೆ. ಒಬ್ಬರೊಬ್ಬರನ್ನು ಪಡೆದರೂ ಅವರು ಒಟ್ಟಾಗಿ ಬದುಕಬೇಕೆಂದರೆ ತಲೆತಪ್ಪಿಸಿಕೊಂಡು ಪರವೂರಿನಲ್ಲಿ ನೆಲೆಯೂರುವುದು ಅನಿವಾರ್ಯವಾಗುತ್ತದೆ. ಹಾಗೆ ನೆಲೆ ಕಂಡುಕೊಂಡ ಮೇಲೂ ಭಾವೀ ಜೀವನದಲ್ಲಿ ಸುಖ-ಶಾಂತಿಗಳೇ ಇರುತ್ತವೆ ಎಂಬ ನಿರೀಕ್ಷೆಯನ್ನೇನೂ ಕಾದಂಬರಿ ಹುಟ್ಟಿಸುವುದಿಲ್ಲ. ಇದ್ದುದರಲ್ಲಿ ಐತ-ಪೀಂಚಲುಗಳದು ದೇಹ-ಮನಸ್ಸುಗಳ ತಾದಾತ್ಮ್ಯ ಭಾವದಲ್ಲಿ ಪರಸ್ಪರ ಪೂರಕವಾದ ಜೋಡಿ. ಹೆಚ್ಚು ಸಂತೃಪ್ತಿ ಸೂಚಿಸುವ ದಾಂಪತ್ಯ – ಸಂತಾನಗಳು ದಕ್ಕಿರುವ ಸಂತೋಷ ಹುಟ್ಟಿಸಬಲ್ಲ ಪ್ರೇಮ ಇವರದು. ಆದರೆ, ಈ ಪ್ರೇಮಭಾವ ಕೂಡ ಕೊರತೆಗಳಿಂದ ಮುಕ್ತವಾದುದಲ್ಲ. ಅದೊಂದು ಸ್ಥಿರವಾದ ಚಿಲುಮೆಯಲ್ಲ. ಮತ್ತೆ ಮತ್ತೆ ವ್ಯಕ್ತಿಗಳು ತಮ್ಮನ್ನು ತಿದ್ದಿಕೊಳ್ಳುತ್ತ, ಪರಿಷ್ಕರಿಸಿಕೊಳ್ಳುತ್ತ ಆವಿಷ್ಕರಿಸಿಕೊಳ್ಳಬೇಕಾದ ಪ್ರೇಮಭಾವವನ್ನು ಇವರು ಸೂಚಿಸುತ್ತಾರೆ. ಹೀಗೆ ಪ್ರೇಮದಲ್ಲಿ ಸಫಲತೆ ಎನ್ನುವುದೂ ನಿರಂತರವಾಗಿ ಸಾಕ್ಷಾತ್ಕಾರಗೊಳಿಸಿಕೊಳ್ಳುವ ಅವಸ್ಥೆಯೇ ಆಗಿ ಈ ಕಾದಂಬರಿಗಳಲ್ಲಿ ಮೈತಳೆಯುತ್ತದೆ.

೨. ಹಳೆಯದರ ನಾಶ- ಹೊಸತಿನ ಸೃಷ್ಟಿಯ ಪ್ರಶ್ನೆ

ಹೊಸತರ ಸೃಷ್ಟಿಗಾಗಿ ಹಳೆಯದರ ನಾಶವಾಗಲೇಬೇಕಾದ್ದು ನಿಸರ್ಗ ನಿಯಮ. ಆದರೆ, ಇರುವ ಬದುಕನ್ನು, ಅದರ ಲೋಪ-ದೋಷಗಳನ್ನು ವಿಮರ್ಶಿಸಿ, ಅದನ್ನು ಬದಲಿಸಲು ಶ್ರಮಿಸಬಲ್ಲ ಬುದ್ಧಿ ಪ್ರಧಾನ ಲಕ್ಷಣವುಳ್ಳವರು ಈ ಕಾದಂಬರಿಗಳಲ್ಲಿ ಬೆರಳೆಣಿಕೆಯಷ್ಟು ಜನ. ಉಳಿದವರೆಲ್ಲ ಪ್ರಕೃತಿಯಿಂದ ಹುಟ್ಟುವ ಸ್ವಭಾವ ಮತ್ತು ಪ್ರವೃತ್ತಿಗಳಿಂದಲೇ ನಿರ್ದೇಶನ ಪಡೆಯುತ್ತ ಬದುಕುವವರು. ಇಂಥವರ ನಡುವೆಯೂ ನಿಸರ್ಗಸಿದ್ಧ ಪ್ರಜ್ಞಾವಂತಿಕೆ, ಚಾತುರ್ಯ ಮತ್ತು ಭಾವನೆಗಳುಳ್ಳ ಗುತ್ತಿ ಮತ್ತು ಪ್ರಜ್ಞಾವಿಕಾಸದಲ್ಲಿ ಮೇಲೇರಿರುವ ಹೂವಯ್ಯ – ಇವರಿಬ್ಬರೂ ಕ್ರಮವಾಗಿ ತಾವು ಬದುಕುತ್ತಿರುವ ಬದುಕನ್ನು ಮತ್ತು ತಮ್ಮ ಸುತ್ತಲಿನ ಸಮುದಾಯವನ್ನೂ, ಹಳ್ಳಿಯ ಇತರರ ಬದುಕನ್ನೂ ವಿಚಾರ, ವಿವೇಕ, ಮಾನವೀಯತೆಯ ಕಡೆಗೆ ತಿರುಗುವಂತೆ ಸುಧಾರಿಸಲು ಯತ್ನಿಸುವವರು. ಆದರ್ಶ ಧ್ಯೇಯವಾದಿ ಹೂವಯ್ಯನದು ಸಮಾಜದ ಜೊತೆಗಿನ ಹೋರಾಟವಾದರೆ ಗುತ್ತಿ ತನ್ನದೇ ಅಸ್ತಿತ್ವಕ್ಕಾಗಿ ಹೋರಾಡಬೇಕಾದ ಸ್ಥಿತಿಯಲ್ಲಿ ಉಳಿದಿರುವವನು.

‘ಕಾನೂರು ಹೆಗ್ಗಡಿತಿ’ಯಲ್ಲಿ ಹೂವಯ್ಯನು ನಡೆಸುವ ಸುಧಾರಣೆಯ ಯತ್ನಗಳು ಬಲೀಂದ್ರ ಹೋತನ ಪ್ರಾಣರಕ್ಷಣೆಯ ಯತ್ನದ ಹಾಗೆ ತಾತ್ಕಾಲಿಕ ಪ್ರಭಾವ ಬೀರಿದಂತಿದ್ದರೂ ಮೌಢ್ಯ, ಸ್ವಾರ್ಥ, ದ್ವೇಷಗಳ ಪ್ರಾಕೃತಿಕ ಸ್ವಭಾವಗಳಿಂದಾಗಿ ಆ ಪ್ರಾಣಿಯ ಹತ್ಯೆ ನಡೆಯುವುದನ್ನು ತಪ್ಪಿಸಲಾರದು. ಹೀಗೆಯೇ ಗುತ್ತಿ ತನ್ನ ಪರಿಸರದ ವಿರುದ್ಧವಾದ ಹೋರಾಟದಲ್ಲಿ ಮತ್ತು ಪೊಲೀಸರಿಂದ ತಪ್ಪಿಸಿಕೊಳ್ಳುವ ಅಲೆಮಾರಿತನದಲ್ಲಿ ಹುಡುಕಿಕೊಂಡ ಪರಿಹಾರವು ಅವನನ್ನು ಕಾನೂರು ಚಂದ್ರಯ್ಯರ ಆಶ್ರಯಕ್ಕೆ ಕೊಂಡೊಯ್ಯುತ್ತದೆ.

ಸ್ಥಳ ಬದಲಾವಣೆಯ ಹೋರಾಟದಲ್ಲಿ ಗುತ್ತಿಯು ಬಂಧುಗಳನ್ನು, ತನ್ನ ಹಳ್ಳಿಯನ್ನು, ನೆಲೆಸಿದ್ದ ಕೇರಿಯನ್ನು ಪರಿಚಿತರು, ಮಿತ್ರರು ಎಲ್ಲರನ್ನೂ ತೊರೆದು ಹೋಗಬೇಕಾಗುತ್ತದೆ. ತನ್ನ ಇನ್ನೊಂದು ಪ್ರಾಣದಂತಿದ್ದ ನಾಯಿ ಹುಲಿಯನನ್ನೂ ನದಿಯ ಪಾಲಾಗಲು ಬಿಡಬೇಕಾಗುತ್ತದೆ. ತುಂಬು ಪ್ರವಾಹದ ನದಿಯನ್ನು ದಾಟಿ, ತನ್ನ ಮಟ್ಟಿಗೆ ‘ದೇಸಾಂತರ’ ಎನ್ನುವಂಥ ಕಾನೂರಿನ ಅಪರಿಚಿತ ಪರಿಸರದಲ್ಲಿ ತನ್ನ ಅಸ್ಮಿತೆಯ ಏಕಮಾತ್ರ ಗುರುತಾದ ಹೆಸರನ್ನೂ ಬಿಟ್ಟು ಬೇರೊಂದು ಹೆಸರಿನಿಂದ ‘ಹೊಸ’ ಬದುಕನ್ನು ಗುತ್ತಿ ಆರಂಭಿಸುತ್ತಾನೆ. ಈ ಇಡೀ ಹೋರಾಟದಲ್ಲಿ ಅವನ ಏಕಮಾತ್ರ ಸಂಗಾತಿ ಅವನು ಪ್ರೀತಿಸಿ, ಮದುವೆಯಾಗಿದ್ದ ತಿಮ್ಮಿ. ಆದರೆ ಇವರಿಬ್ಬರೂ ಬಂದು ಆಸರೆ ಪಡೆಯುವುದು ಕಾನೂರು ಚಂದ್ರಯ್ಯಗೌಡರಂಥ ಕ್ರೂರ, ನಿರಂಕುಶ, ಲಂಪಟ ಜಮೀನುದಾರರ ಬಳಿ. ಆತನ ಕಣ್ಣು ಆಗಲೇ ತಿಮ್ಮಿಯನ್ನು ಅಳೆದಿದೆ. ಅಂದಮೇಲೆ ನವವಿವಾಹಿತರಾದ ಇವರಿಬ್ಬರ ಬದುಕು ಹೊಸ ಯಜಮಾನರ ಜೀತದಾಳುತನದಲ್ಲಿ ಎಷ್ಟು ಹೊಸ ರೀತಿಯದಾಗಿದ್ದೀತು ಎಂಬ ಶಂಕೆಯನ್ನು ಕಾದಂಬರಿ ಉಳಿಸುತ್ತದೆ.

ಹೂವಯ್ಯನ ನೇತೃತ್ವದಲ್ಲಿ ಜಾತಿ, ವರ್ಗಭೇದಗಳಿರದ ಸ್ನೇಹ-ವಿಶ್ವಾಸಗಳಿರುವ ಸಮಾಜವಲ್ಲಿ ಶಿಕ್ಷಣದಿಂದ ಸಾಮಾನ್ಯರೂ ಆತ್ಮವಿಕಾಸಕ್ಕೆ ಅವಕಾಶ ಪಡೆಯಲು ಅವಕಾಶವಿರುವ ಹೊಸ ಸಮಾಜದ ಕಟ್ಟೋಣದ ಕನಸು ರಮ್ಯವಾದದ ನೆರಳಲ್ಲಿ – ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಸೂಚಿತವಾದರೂ ಆ ಫಲವು ಕುವೆಂಪು ಅವರ ಮುಖ್ಯ ಗುರಿಯಲ್ಲ. ಬದಲಾಗಿ ಹೂವಯ್ಯ/ಗುತ್ತಿಯರ ಬದುಕಿನ ಹೌರಾಟವನ್ನು ಮೌಲಿಕವೆಂದು ಗುರುತಿಸುವುದೇ ಅವರಿಗೆ ಮುಖ್ಯವಾಗುತ್ತದೆ. ಹೀಗೆ ಹಳೆಯದರ ವಿನಾಶದಿಂದ ಹೊಸತರ ಸೃಷ್ಟಿ ಎನ್ನುವುದು ಒಂದರ ಕಾರ್ಯಕ್ಕೆ ಮತ್ತೊಂದು ಪರಿಣಾಮವೆನ್ನುವಂತೆ

ಇಲ್ಲಿ ಎದುರಾಗುವುದಿಲ್ಲ. ಇಲ್ಲಿ ವ್ಯಕ್ತವಾಗುವ ಆಶಾವಾದವು ಮರುಸೃಷ್ಟಿಯ ಯತ್ನಗಳಿಗೆ ಪ್ರೇರಕಶಕ್ತಿಯಾಗಿ ಬಹುಮುಖ್ಯ. ಆದರೆ ಕೊನೆ ಮುಟ್ಟಿಸುವಂತಹುದಲ್ಲ. ಜೀವನಕ್ಕೆ ಕೊನೆಯೆನ್ನುವುದಿಲ್ಲ ಎಂಬುದೇ ಇಲ್ಲಿನ ಮುಖ್ಯ ನಿಲುವು.

೩. ಒಳಿತು-ಕೆಡಕುಗಳ ಮೌಲ್ಯ ಸಂಘರ್ಷ

ಮೂಲತಃ ಒಂದು ಕಾಸ್ಮಿಕ್ ಪರಿಗ್ರಹಿಕೆಯಾಗಿಯೇ ಕುವೆಂಪು ಕಾದಂಬರಿಗಳೊಳಗೆ ಕೆಲಸ ಮಾಡುತ್ತದೆ. ಆರಂಭದಲ್ಲಿ ಸೂಚಿಸಿದ ಹಾಗೆ ಎರಡು ಕಾದಂಬರಿಗಳನ್ನೂ ಒಂದೇ ಪಠ್ಯವೆಂದು ನೋಡಿದಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಸಿಂಬಾವಿ ಭರಮೈ ಹೆಗ್ಗಡೆ, ಹೂವಳ್ಳಿಯ ವೆಂಕಪ್ಪಯ್ಯ ನಾಯಕರು, ಬೆಟ್ಟಳ್ಳಿ ಕಲ್ಲಯ್ಯಗೌಡರು ತಿಮ್ಮಯ್ಯ ಹೆಗ್ಗಡೆ ಮುಂತಾದ ಜಮೀನುದಾರರಲ್ಲಿ ಪ್ರತ್ಯೇಕವಾಗಿ ಕಂಡುಬರುವ ಲಕ್ಷಣಗಳೆಲ್ಲವೂ ಒಗ್ಗೂಡಿದ ಹಾಗೆ ಕಾನೂರು ಚಂದ್ರಯ್ಯಗೌಡರ ಪಾತ್ರದಲ್ಲಿ ಅವರೆಲ್ಲರ ಗುಣಗಳೂ ಸಮಾವೇಶಗೊಳ್ಳುತ್ತವೆ.

ಹಾಗೆಯೇ, ಗಂಗೆ, ಕಾವೇರಿ, ನಾಗತ್ತೆ ಮೊದಲಾದವರ ಶಕ್ತಿಗಳೂ ದೌರ್ಬಲ್ಯಗಳೂ ಒಟ್ಟಾದ ಹಾಗೆ ಸುಬ್ಬಮ್ಮ ಹೆಗ್ಗಡಿತಿ ಸೃಷ್ಟಿಯಾಗಿದ್ದಾಳೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಮಾತೆಯರ ವಾತ್ಸಲ್ಯ ಭಾವವೆಲ್ಲ ಸೀತೆಯ ತಾಯಿಯಲ್ಲಿ ಸೇರಿಕೊಂಡಿದೆ. ಗುತ್ತಿಯಂತೂ ಈ ಎರಡೂ ಕಾದಂಬರಿಗಳನ್ನೂ ಬೆಸೆಯುವ ಪ್ರತ್ಯಕ್ಷ ಕೊಂಡಿಯೇ ಆಗಿದ್ದಾನೆ. ಹೀಗೆಯೆ ಮುಕುಂದಯ್ಯ, ವಾಸಯ್ಯ ಮೊದಲಾದವರ ಕಲಿಕೆ, ಜ್ಞಾನ, ವಿವೇಚನೆ ಸಾತ್ವಿಕ ಸ್ವಭಾವಗಳು ಒಗ್ಗೂಡಿದಂತೆ ತೋರುವುದು ಹೂವಯ್ಯನಲ್ಲಿಯೇ.

ಈ ರೀತಿ ನೋಡಿದಲ್ಲಿ ಚಂದ್ರಯ್ಯ ಗೌಡರು ಪ್ರತಿನಿಧಿಸುವ ಮೌಲ್ಯಗಳಿಗೆ ನಿಜವಾದ ಸವಾಲೊಡ್ಡುವ ಒಳಿತಿನ ಪ್ರತಿರೂಪವು ಹೂವಯ್ಯನದೇ ಆಗಿ ಕಾಣುತ್ತದೆ. ಆದರೆ ಚಂದ್ರಯ್ಯಗೌಡರನ್ನು ಕುವೆಂಪು ಚಿತ್ರಿಸಿರುವ ರೀತಿಯು ಸಾಕಷ್ಟು ಚರ್ಚೆ, ವಿವಾದಗಳಿಗೆ ಎಡೆಗೊಟ್ಟಿದೆ. ರನ್ನನ ಗದಾಯುದ್ಧದಲ್ಲಿ ಹೇಗೆ 'ವಿಜಯ' ಎಂಬ ಪರಿಕಲ್ಪನೆಯನ್ನು ರನ್ನನು ಸಂಕೀರ್ಣವಾಗಿಸಿದ್ದಾನೋ ಹಾಗೆಯೇ ಕುವೆಂಪು ಕೃತಿಯಲ್ಲೂ ಸತ್ಯಕ್ಕೇ ಜಯ ಎಂಬ ಸಮೀಕರಣ ಅಸಾಧ್ಯವಾಗುತ್ತದೆ. ಅಷ್ಟೇ ಅಲ್ಲ; ಬದಲಾವಣೆಗಾಗಿ ನಡೆಸುವ ಪುರುಷ ಪ್ರಯತ್ನಗಳನ್ನು ಕುವೆಂಪು ಗೌರವಯುತವಾಗಿ ಪ್ರತಿಪಾದಿಸುತ್ತಾರೆಯೇ ಹೊರತು ಜಯಾಪಜಯಗಳ ಬಗ್ಗೆ ಅವರ ಕೃತಿಗಳು ಅನಾಸಕ್ತವೇ ಎನ್ನಬಹುದು.

ಚಂದ್ರಯ್ಯಗೌಡರ ಅಂತ್ಯಕಾಲದ ಪಶ್ಚಾತ್ತಾಪ ಅವರ ಬಗ್ಗೆ ಸಹಾನುಭೂತಿಯನ್ನು ಹುಟ್ಟಿಸು ವಂತಿದ್ದರೂ ಅದುವರೆಗೆ ದಮನಿತಳಾಗಿದ್ದ ಸುಬ್ಬಮ್ಮ ಚಂದ್ರಯ್ಯಗೌಡರ ಎಲ್ಲ ನೀಚಲಕ್ಷಣಗಳನ್ನೂ ಸ್ವೀಕರಿಸಿದವಳ ಹಾಗೆ ಮೇಲೆದ್ದು ಬರುತ್ತಾಳೆ. ದುಷ್ಟತನ ಮತ್ತು ನಿರಂಕುಶ ಪ್ರವೃತ್ತಿಯ ಸುಳಿಯಲ್ಲಿ ಸಿಕ್ಕುಬಿದ್ದು ದಾರುಣರೀತಿಯಲ್ಲಿ ಅರಿವಿಲ್ಲದೆ ಪ್ರಾಣಬಿಡುತ್ತಾಳೆ. ಅವಳ ಸಾವಿನಿಂದ ಯಾರ ಮೇಲೂ ಯಾವ ಪರಿಣಾಮವೂ ಆಗುವುದಿಲ್ಲ ಎಂಬ ಹಾಗೆ ಕಾದಂಬರಿಯ ಕಥೆ ಮುಂದುವರೆಯುತ್ತದೆ ಎನ್ನುವುದನ್ನು ಗಮನಿಸಿದರೆ ಲೋಕದ ಗತಿ ಸ್ವಾಯತ್ತವೂ ಸ್ವಯಂ ತಾಂತ್ರಿಕವೂ ಆಗಿದ್ದು, ಅದರೆದುರಿಗೆ ಮಾನವ ಜೀವನದ ಏಳುಬೀಳುಗಳ ಪರದಾಟಗಳು ಅತಿ ಕ್ಷುಲ್ಲಕ ಎಂಬ ಭಾವನೆ ಉಂಟಾದರೆ ಆಶ್ಚರ್ಯವಿಲ್ಲ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಎಲ್ಲ ವ್ಯಕ್ತಿಗಳೂ ಜೀವನದ ಸಂಕಟ, ಆತಂಕ, ಒದ್ದಾಟಗಳಲ್ಲಿರುವಾಗ ಪ್ರಕೃತಿಯು ತನ್ನಷ್ಟಕ್ಕೆ ತನ್ನ ಕೆಲಸ ನಡೆಸುವ ಒಂದು ಗಮನಾರ್ಹ

ಗದ್ಯಖಂಡವನ್ನು ಉದಾಹರಣೆಗಾಗಿ ನೋಡಬಹುದು.:

'ಯಾರು ಬದುಕಲಿ, ಯಾರು ಸಾಯಲಿ, ಯಾರು ಹುಟ್ಟಲಿ, ಹುಟ್ಟದೆ ಹೋಗಲಿ, ಮಳೆಗಾಲ ನಿಲ್ಲುತ್ತದೆಯೆ? ಮಳೆ ಹಿಡಿದು ಕೂತಿತ್ತು ನಾಲ್ಕು ಪಾದಗಳನ್ನೂ ಬಲವಾಗಿ ಊರಿ! ಮೋಡ ಸದಾ ಕವಿದು ಸೂರ್ಯ ದರ್ಶನವೇ ಅಪೂರ್ವವಾಯಿತು. ತನ್ನ ದುರ್ದಮ್ಯ ವ್ಯಾಪಾರಗಳನ್ನು ನಿರ್ದಾಕ್ಷಿಣ್ಯವಾಗಿ ಸಾಧಿಸಿತ್ತು ಬೃಹತ್ ಪ್ರಕೃತಿ... ಆ ಭೂಮ ನಿಸರ್ಗದ ಮುಂದೆ ಹಳೆಮನೆ, ಕೋಣೂರು, ಹೂವಳ್ಳಿ, ಬೆಟ್ಟಳ್ಳಿ ಮತ್ತು ಸಿಂಬಾವಿಗಳ ಏಕಗೃಹ ಕ್ಷುದ್ರಗ್ರಾಮಗಳ ಬದುಕಿನ ಆಶೆ-ನಿರಾಶೆ ಕಷ್ಟ-ಸುಖ ಶೋಕ-ತಾಪಾದಿಗಳು ಯಃಕಶ್ಚಿತಗಳಾಗಿದ್ದುದರಲ್ಲಿ ಆಶ್ಚರ್ಯವೇನು?'

ತಂದೆ-ತಾಯಿಯರನ್ನು ಏಕಕಾಲದಲ್ಲಿ ಅನಿರೀಕ್ಷಿತವಾಗಿ ಕಳೆದುಕೊಂಡು ಧರ್ಮುವಿನ ಮನಃಸ್ಥಿತಿಯಾಗಲಿ; ತಾನು ಬಯಸಿದ ಹೆಣ್ಣು ಆ ಹೆಣ್ಣಿನ ಇಚ್ಛೆಗೂ ವಿರುದ್ಧವಾಗಿ ಮತ್ತೊಬ್ಬನ ಪಾಲಾಗುತ್ತದೆಯಲ್ಲಾ ಎಂಬ ಮುಕುಂದಯ್ಯನ ಹೃದಯದ ವ್ಯಥೆಯಾಗಲಿ; ತಾನು ಹಾರಿಸಿಕೊಂಡು ಬಂದ ಹುಡುಗಿಯನ್ನು ಮತ್ತೆ ತವರಿಗೊಯ್ದು ಬಲಾತ್ಕಾರವಾಗಿ ಮತ್ತೊಬ್ಬನಿಗೆ ಮದುವೆ ಮಾಡುತ್ತಾರೆ ಎಂಬ ವಾರ್ತೆಯ ಬಡಬಾಗ್ನಿಯನ್ನು ಹೊಟ್ಟೆಯೊಳಗಿಟ್ಟುಕೊಂಡು ಹೇಗೋ ಉಪಾಯದಿಂದ ಪೊಲೀಸರ ಕೈಯಿಂದ ತಪ್ಪಿಸಿಕೊಂಡು ಮಳೆಗಾಲದ ಕಾಡಿನಲ್ಲಿ ತಲೆಮರೆಸಿಕೊಂಡು ಕಾಲ ಹಾಕುತ್ತಿರುವ ಗುತ್ತಿಯ ದಾರುಣ ಚಿತ್ತ ಸ್ಥಿತಿಯಾಗಲಿ; ನಿರಂತರ ರೋಗಿಷ್ಠನಾಗಿದ್ದರೂ ತನ್ನನ್ನು ಒಲಿದು ಬದುಕು ಸಾಗಿಸುತ್ತಿದ್ದ ತನ್ನ ಹೆಂಡತಿ ಅಕ್ಕಣಿ ಮೆಲ್ಲಮೆಲ್ಲಗೆ ಜಾರಿ ಚೀಂಕ್ರನಿಗೆ ವಶವಾಗುತ್ತಿದ್ದಾಳಲ್ಲಾ ಎಂದು ಒಳಗೊಳಗೆ ಕೊರಗಲಾರಂಭಿಸಿರುವ ಪಿಜಿಣನ ಬಾಳಿನ ಬೇಗೆಯಾಗಲಿ; ಕಡೆಗೆ ಪಾದ್ರಿಯಿಂದ ಅನೇಕಾನೇಕ ಪಾರಿತೋಷಕಗಳನ್ನು ಪಡೆದು, ಆತನಿಗೆ ತಾನು ಕ್ರೈಸ್ತ ಜಾತಿಗೆ ಸೇರುತ್ತೇನೆ ಎಂದು ನಂಬುಗೆ ಬರುವಂತೆ ಮಾಡಿ, ಒಂದು ರೀತಿಯಲ್ಲಿ ಮಾತನ್ನೂ ಕೊಟ್ಟು, ಈಗ ಅದರಿಂದ ನುಣುಚಿಕೊಳ್ಳಲು ಹವಣಿಸುತ್ತಿರುವ ದೇವಯ್ಯನ ಹಾಸ್ಯಾಸ್ಪದವಾದ ಒಳತೋಟಿಯಾಗಲಿ– ಆ ಸಹ್ಯಾದ್ರಿಯ ಮಲೆಕಾಡು ಮಳೆ ಇವುಗಳ ಕಡೆಗಣ್ಣಿನ ಗಮನಕ್ಕಾದರೂ ಬರುತ್ತದೆಯೇ?''

ಈ ದೀರ್ಘ ಗದ್ಯಖಂಡ ಹೆಚ್ಚು ಕಡಿಮೆ ಕಾದಂಬರಿಯ ಹಲವು ಪಾತ್ರಗಳ ಮನದ ತೊಳಲಾಟಗಳನ್ನೂ ಪ್ರಕೃತಿಯ ಉದಾಸೀನ ಗತಿಯನ್ನೂ ಅಕ್ಕ-ಪಕ್ಕ ತಂದಿಟ್ಟಿರುವ ಬಗೆಯನ್ನು ಗಮನಿಸಬೇಕು. ಮನುಷ್ಯರ ಸ್ವಕೇಂದ್ರಿತ ಜೀವನ ವ್ಯಾಪಾರದಲ್ಲಿ ಅತ್ಯಂತ ತುರ್ತಿನದೆಂದು ಆತಂಕ ಹುಟ್ಟಿಸುವ ಸಮಸ್ಯೆಗಳು ಸ್ವಾಯತ್ತವಾದ ನಿಸರ್ಗದ ಜೀವನದ ಪ್ರಕ್ರಿಯೆಯ ಎದುರಿನಲ್ಲಿ ಹೇಗೆ ಕ್ಷುಲ್ಲಕವೆನಿಸಬಹುದು ಎಂಬುವದನ್ನೇ ಇಲ್ಲಿ ಸೂಚಿಸಲಾಗಿದೆ. ಇದಿಷ್ಟೇ ಆದರೆ, ಇದೇನೂ ಹೊಸತೆಂದೂ, ಅನನ್ಯವೆಂದೂ ಹೇಳಲಾಗದು.

ಆದರೆ, ಈ ವಿಶ್ವ ನಿಯತಿಯ ಎದುರಿನಲ್ಲಿ ಜೀವಜಗತ್ತಿನ ಪ್ರತಿಯೊಂದು ಚಲನೆ, ಪ್ರತಿಯೊಂದು ಎದೆಮಿಡಿತ, ಉಸಿರಾಟವನ್ನೂ ಯಥಾರ್ಥವಾಗಿ ಸೂಕ್ಷ್ಮದರ್ಶಕದಲ್ಲಿ ಕಾಣುವಂಥ ಸೂಕ್ಷ್ಮ ವಿವರಗಳ ಮೂಲಕ ದಾಖಲಿಸುವ ಕುವೆಂಪು ಆ ಕ್ಷಣಕ್ಕೆ ಅದೇ ಪರಮ ಸತ್ಯ ಎಂಬಷ್ಟು ಭಾವೋದ್ದೀಪನೆಯನ್ನು ಉಂಟುಮಾಡುವ ಚಿತ್ರಕಾರ. ಅದರಿಂದ ಪ್ರತಿಯೊಂದು ಪಾತ್ರ, ಪ್ರತಿಯೊಂದು ಗಳಿಗೆ, ಪ್ರತಿಯೊಂದು ಅನುಭವ, ಪ್ರತಿಯೊಂದು ಘಟನೆ ಕೂಡ ಅನನ್ಯ ರೀತಿಯ ಕಣ್ಣೆದುರು ಜೀವಂತವಾಗುವಂತೆ ಮಾಡಬಲ್ಲ ಅಸಾಧಾರಣ ಪ್ರತಿಭೆ ಅವರದು. ಅವರ ಒಂದು ಪ್ರಸಿದ್ಧ ಕವಿತೆಯ ಸಾಲು ಹೇಳುವ ಹಾಗೆ 'ಬಾ ಇಲ್ಲಿ ಸಂಭವಿಸು/ಬಂದೆನ್ನ ಹೃದಯದಲ್ಲಿ / ನಿತ್ಯವೂ ಅವತರಿಪ / ಸತ್ಯಾವತಾರ!' ಎಂಬ ಹಾಗೆಯೇ ಇಲ್ಲಿ ಈ ಬದುಕಿನಲ್ಲಿ, ವ್ಯಕ್ತಿಯ ಹೃದಯದಲ್ಲಿ ನಿತ್ಯವೂ ಸಂಭವಿಸಿ, ಅವತರಿಸುವ ಅನುಕ್ಷಣ ಸತ್ಯವನ್ನು ಕುರಿತ

ಶೋಧನೆ ಕಾದಂಬರಿಗಳಲ್ಲೂ ಇರುವುದರಿಂದ, ಸಾಪೇಕ್ಷವಾದ ಇಂಥ ಸತ್ಯಗಳ ನಿರಂತರ ಕಥನದಂತೆ ಅವು ಕಂಡುಬರುತ್ತವೆ.

ಇದುವರೆಗಿನ ನನ್ನ ಪ್ರತಿಪಾದನೆಯಲ್ಲಿ ನಾನು ಪ್ರಬಂಧದ ಆರಂಭದಲ್ಲಿ ಹೇಳಿದ ಎರಡು ಮುಖ್ಯ ಪ್ರಮೇಯಗಳನ್ನು ಚರ್ಚಿಸಿದ್ದೇನೆ. ಕೊನೆಯದಾಗಿ ಕುವೆಂಪು ಅವರ 'ಪೂರ್ಣದೃಷ್ಟಿ'ಯ ತತ್ತ್ವಕ್ಕೂ ಈ ಕಾದಂಬರಿಗಳಿಗೂ ಏರ್ಪಡುವ ಜೀವ-ದೇಹ ಸಂಬಂಧವನ್ನು ಕುರಿತು ವಿವೇಚಿಸ ಬಯಸುತ್ತೇನೆ. ಇದಕ್ಕೆ ಮೊದಲು ಕುವೆಂಪು ತಮ್ಮ ದಾರ್ಶನಿಕ ಕಾವ್ಯ ಮೀಮಾಂಸೆಯಲ್ಲಿ ಪ್ರತಿಪಾದಿಸುವ ಕೆಲವು ತಾತ್ತ್ವಿಕ ನಂಬಿಕೆಗಳನ್ನು ನಾವು ನೆನೆಸಿಕೊಳ್ಳುವುದು ಸೂಕ್ತ.

೧. 'ಯಾವ ಪ್ರಜ್ಞೆ ಹಿಂದು ಮುಂದು ಇಂದುಗಳನ್ನು ಏಕಕಾಲದಲ್ಲಿ ಅಥವಾ ಕಾಲಾತೀತವಾದ ನಿತ್ಯದಲ್ಲಿ ಅಖಂಡವಾಗಿ ಗ್ರಹಿಸಬಲ್ಲುದೋ ಅದಕ್ಕೆ ಮಾತ್ರ ಗೋಚರ – ಎಲ್ಲದರ ಕಾರಣ, ಎಲ್ಲದರ ಉದ್ದೇಶ ಮತ್ತು ಎಲ್ಲದರ ಪ್ರಯೋಜನ.' ಖಂಡದೃಷ್ಟಿಯಲ್ಲಿ ಮಾತ್ರ ಚರಿಸಲು ಸಮರ್ಥವಾಗಿರುವ ಅಯೋಗ ಬುದ್ಧಿಗೆ ನಿಷ್ಕಾರಣವೆಂದೂ ನಿರುದ್ದೇಶವೆಂದೂ ನಿಷ್ಪ್ರಯೋಜಕವೆಂದೂ ತೋರುವ ಘಟನೆಗಳೂ, ವ್ಯಾಪಾರಗಳೂ ಪೂರ್ಣದೃಷ್ಟಿಯ ದಿವ್ಯಜ್ಞಾನಕ್ಕೆ ಸಕಾರಣವಾಗಿ ಸೋದ್ದೇಶವಾಗಿ ಸಪ್ರಯೋಜಕವಾಗಿ ಕಾಣುತ್ತವೆ.

೨. ಸಾಮಾನ್ಯ ಮಾನವನು, ಅವನು ಎಂತಹ ಅಸಾಧಾರಣ ಮೇಧಾವಿಯಾಗಿರಲಿ, ಎಂತಹ ಪಾರದರ್ಶಿಯಾದ ಪ್ರತಿಭಾಶಾಲಿಯಾಗಿರಲಿ, ಮನೋಮಯ ಮಾನವ ಮತಿಗೆ ಸಾಧ್ಯವಾದಷ್ಟರಿಂದಲೇ ತೃಪ್ತನಾಗಬೇಕು. ಸಿದ್ಧನೂ, ಸ್ಥಿತಪ್ರಜ್ಞನೂ ಆಗಿ ವಿಜ್ಞಾನಮಯಕ್ಕೇರಿದ ಪೂರ್ಣಯೋಗಿಗೆ ಮಾತ್ರ ಪೂರ್ಣದೃಷ್ಟಿ ಸಾಧ್ಯ.

೩. ಅಂಶದೃಷ್ಟಿಗೆ ದುರಂತವಾದದ್ದು ಪೂರ್ಣದೃಷ್ಟಿಗೆ ದುರಂತವಲ್ಲ. ಖಂಡದೃಷ್ಟಿಗೆ ಅನ್ಯಾಯವೆಂದೂ ಅಧರ್ಮವೆಂದೂ ವ್ಯರ್ಥವೆಂದೂ ನಷ್ಟವೆಂದೂ ತೋರುವ ವ್ಯಾಪಾರಗಳು ಪೂರ್ಣದೃಷ್ಟಿಗೆ ಅಲ್ಲಿಯೇ ಅಷ್ಟರಲ್ಲಿಯೇ ಕೊನೆಗಾಣದೆ, ಅನ್ಯಾಯವು ಪರಮ ನ್ಯಾಯದ ಕಡೆಗೂ, ಅಧರ್ಮವು ಪರಮಧರ್ಮದ ಕಡೆಗೂ, ನಷ್ಟವು ಪರಮಲಾಭದ ಕಡೆಗೂ ಚಲಿಸುತ್ತಿರುವುದು ಗೋಚರಿಸುತ್ತದೆ.

ಕುವೆಂಪು ಅವರ ಕಾದಂಬರಿಗಳನ್ನು ಇನ್ನೊಂದು ನೆಲೆಯಿಂದ ನೋಡಲು ಅವರದೇ ಆದ ಈ ಮೇಲಿನ ವಿಚಾರಗಳು ನಮಗೆ ನೆರವಾಗಬಲ್ಲವು ಅನಿಸುತ್ತದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಅತೀಂದ್ರಿಯಾನುಭವದ ಘಟನೆಗಳು ಮತ್ತೆ ಮತ್ತೆ ಚಿತ್ರಿತವಾಗಿದ್ದರೆ 'ಕಾನೂರು ಹೆಗ್ಗಡಿತಿ'ಯಲ್ಲಿ ಹೂವಯ್ಯನ ಭಾವಸಮಾಧಿಯ ಪ್ರಸಂಗವಿದೆ. ಇವುಗಳ್ಯಾವುದನ್ನೂ ವಾಸ್ತವವಾದಕ್ಕೆ ವಿರುದ್ಧವೆಂದು ಕುವೆಂಪು ಭಾವಿಸುವುದಿಲ್ಲ. ಬದಲಾಗಿ Social realismನ್ನು ಅಳವಡಿಸಿಕೊಂಡಿದ್ದರಿಂದಲೇ ಕಾಲ, ದೇಶಗಳ ಗಡಿಗಳನ್ನೂ ಮೀರಿದ ಸಂಗತಿಗಳನ್ನು ಪರಿಭಾವಿಸುವ ಅವಕಾಶ ಅವರ ಕಾದಂಬರಿಗಳಿಗೆ ಒದಗುತ್ತದೆ. ಹೇಗೆಂಬುದನ್ನು ಮುಂದೆ ಕಾಣುತ್ತೇವೆ.

ಹೂವಯ್ಯನು ಬಿರುಸಾದ ಮಳೆಯಿಂದ ರಕ್ಷಣೆ ಪಡೆಯಲು ಗುಡಿಸಿಲಂಗಡಿಯೊಂದರ ಛಾವಣಿಯ ಕೆಳಗೆ ನಿಲ್ಲುತ್ತಾನೆ. ಅದೇ ಛಾವಣಿಯ ಅಡಿಗೆ ತಮ್ಮ ಜೀವವುಳಿಸಿಕೊಳ್ಳಲು ದನ, ಕರು, ಆಡು, ಕೋಳಿ, ನಾಯಿಗಳ ಪ್ರಾಣಿವೃಂದವೂ ಬಂದು ಆಶ್ರಯ ಪಡೆದಿರುತ್ತವೆ. ಆದರೆ, ಮಳೆಯನ್ನೂ, ಹೊರಗಿನ

ಕಾಡನ್ನೂ ನೋಡುತ್ತ ನೋಡುತ್ತ ಹೂವಯ್ಯ ಭಾವಸಮಾಧಿಯಲ್ಲಿ ಮುಳುಗಿಬಿಡುತ್ತಾನೆ. ತನ್ನ ಸುತ್ತಲಿನ ಯಾವುದರ ಪರಿವೆಯೂ ಇಲ್ಲದಂತಾಗಿ ಕೇವಲ ಆನಂದಾನುಭವದಲ್ಲಿ ತಲ್ಲೀನನಾಗಿಬಿಡುತ್ತಾನೆ. ಇದು ಪ್ರಜ್ಞಾಪೂರ್ವಕವಾದ ಚಿತ್ತನಿರೋಧದಿಂದ ಯೋಗಿಯೊಬ್ಬನು ತಲುಪುವ ಸಮಾಧಿಸ್ಥಿತಿಯಲ್ಲ. ಆದರೆ, ಅದನ್ನೇ ಹೋಲುವಂತಹುದು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಅತೀಂದ್ರಿಯ ದರ್ಶನದ ಅನುಭವಗಳೂ ಚಿನ್ನಮ್ಮ ಮತ್ತು ತಿಮ್ಮಿಯರಿಗೆ ಆಗುವುದರಲ್ಲಿ ಅದು ಯಾದೃಚ್ಛಿಕವೇ. ಅವರ ಪ್ರಜ್ಞೆ, ಇಚ್ಛಾಶಕ್ತಿ ಗಳಿಂದ ಆದದ್ದಾಗಿರುವುದಿಲ್ಲ. ಆದರೆ ಗಡ್ಡದ ಸನ್ಯಾಸಿ, ರಾಮಕೃಷ್ಣಾಶ್ರಮದ ಸಾಧುಗಳು ಆಡುವ ಭವಿಷ್ಯವಾಣಿಗಳು ಮಾತ್ರ ಅವರ ಸಾಧನೆ ಮಾಡಿದ ಮನಶ್ಶಕ್ತಿಯ ಮೂಲಕ ದೊರಕುವ ಅರಿವು ಗಳಾಗುತ್ತವೆ.

ಇಂತಹ ಸನ್ನಿವೇಶಗಳನ್ನು ಕುವೆಂಪು ಕಾದಂಬರಿಗಳಲ್ಲಿ ತಂದಿರುವುದು ಸೋದ್ದೇಶವಾಗಿಯೇ ಬದುಕನ್ನು ದೇಶ, ಕಾಲ, ಚರಿತ್ರೆಗಳ ಗಡಿಗಳನ್ನು ಮೀರಿದ ನಿರಂತರತೆಯಲ್ಲಿ ದರ್ಶನ ಮಾಡಿಸುವುದು ಅವರ ಕಾದಂಬರಿಗಳ ತಳದಲ್ಲಿರುವ ಒಂದು ದೊಡ್ಡ ಆಶಯ. ಆ ರೀತಿಯ ದರ್ಶನವನ್ನು ಓದುಗರಿಗೆ ತಲುಪಿಸಲು ಅವರು ಬಳಸಿಕೊಳ್ಳುವ ತಂತ್ರವೇ ಈ 'ಅತೀಂದ್ರಿಯಾನುಭವ' ಎಂಬುದು ನನ್ನ ವಾದವಾಗಿದೆ.

ಇಲ್ಲಿ ಇನ್ನೊಂದು ಸಂಗತಿಯನ್ನು ಗಮನಿಸಬೇಕು. ಚಿನ್ನಮ್ಮನ ಮತ್ತು ತಿಮ್ಮಿಯ ಸಂದರ್ಭದಲ್ಲಿ ಸತ್ಯದ ಒಂದು ಕಿಂಚಿತ್ ಹೊಳಹು ಕಾಲ-ದೇಶಗಳನ್ನು ಮೀರಿ ಆ ವ್ಯಕ್ತಿಗಳೆದುರು ಅಯಾಚಿತವಾಗಿ ಆಗಿರುವಂಥವು. ಆದರೂ ಅವು ಮುಕುಂದಯ್ಯ ಮತ್ತು ಚಿನ್ನಮ್ಮ ಇವರು ಜನ್ಮಾಂತರದಿಂದಲೂ ಪತಿ-ಪತ್ನಿಯರೆಂದೂ, ಈಗಲೂ ಅವರು ಮದುವೆ ಆಗಬೇಕೆಂಬುದು ಒಂದು ನಿಯತಿಯೆಂದೂ ಸೂಚಿಸಲಿಕ್ಕಾಗಿಯೇ ಬಂದಿರುವಂಥವು. ರಾಮಕೃಷ್ಣಮಠದ ಸಾಧುಗಳು, ಗಡ್ಡದ ಗೋಸಾಯಿ ತ್ರಿಕಾಲಜ್ಞರಾಗಿ ನುಡಿಯುವ ಭವಿಷ್ಯವಾಣಿಗಳು ಮುಕುಂದಯ್ಯ ಮತ್ತು ಚಿನ್ನಮ್ಮರು ಮುಂದೆ ಅವರ ಮೊಮ್ಮಗನಾಗಿ ಒಬ್ಬ ಮಹಾಪುರುಷನ ಅವತಾರಕ್ಕೆ ಅನುಕೂಲ ಸಂತಾನವನ್ನು ಪಡೆಯಲಿಕ್ಕಾಗಿ ಮದುವೆ ಆಗುವುದು ಅನಿವಾರ್ಯ ಎಂಬ ಸೂಚನೆಯಿದೆ.

ಈ ಅಂಶಗಳನ್ನು ಆರೇಳು ಬಾರಿ ಕುವೆಂಪು ಬೇರೆ ಬೇರೆ ರೀತಿಗಳಿಂದ ಈ ಕಾದಂಬರಿಯಲ್ಲಿ ಓದುಗರಿಗೆ ತಲುಪಿಸುವ ಯತ್ನ ಮಾಡಿರುವುದರಿಂದ ಇದನ್ನು ಸಾಧಾರಣ ಸಂಗತಿ ಎಂದು ಭಾವಿಸದಿರಲಿ ಎಂಬ ಆಶಯವೂ ಇಲ್ಲಿ ಇದ್ದಿರಬೇಕೆಂದು ಊಹಿಸಬಹುದು. ಈ ವಿಚಾರವನ್ನು ಹೇಗೆ ಬೆಳೆಸಲಾಗುತ್ತದೆ ಎಂಬುದನ್ನು ನೋಡೋಣ.

೧. ಮೊದಲು ಚಿನ್ನಮ್ಮ ತನ್ನ ಬಾಲ್ಯದಲ್ಲೇ ಬಾಲಕ ಮುಕುಂದಯ್ಯನಲ್ಲಿ ತನ್ನ ಹಿಂದಿನ ಜನ್ಮದ ಗಂಡನನ್ನು ಕಂಡಳು ಎಂಬ ಘಟನೆಯು ಚಿತ್ರಿತವಾಗುತ್ತದೆ. ಆಮೇಲೆ ಹುಲಿಕಲ್ಲು ಗುಡ್ಡದ ನೆತ್ತಿಯ ಮೇಲೆ ತಿಮ್ಮಿಯು ಅರೆಜಾಗ್ರತಾವಸ್ಥೆಯಲ್ಲಿ ಯೋಧನೊಬ್ಬನು ಕುದುರೆಯನ್ನೇರಿ ಬಂದು ನಿಂತಿದ್ದು, ಮದುಮಗಳೊಬ್ಬಳು ಅಲ್ಲಿಗೆ ಬಂದಾಗ ಅವಳನ್ನೂ ಕುದುರೆಯ ಮೇಲಕ್ಕೇರಿಸಿಕೊಂಡು ಅದೃಶ್ಯವಾದ ನೋಟವನ್ನು ಕಂಡ ಬಗೆಯನ್ನು ನಿರೂಪಿಸುತ್ತಾರೆ.

ಈ ಎರಡೂ ಘಟನೆಗಳು ಸೂಚಿಸುವ ಸತ್ಯವನ್ನು ಮತ್ತಷ್ಟು ಬಲಪಡಿಸುವುದಕ್ಕಾಗಿಯೇ ಗಡ್ಡದ

ಗೋಸಾಯಿಯು ಮುಕುಂದಯ್ಯನಿಗೆ ಹೇಳುವ ಭವಿಷ್ಯದ ಪ್ರಸಂಗ ಬರುತ್ತದೆ. ಆಮೇಲೆ ಕೊಲ್ಕತ್ತಾದ ದಕ್ಷಿಣೇಶ್ವರದಲ್ಲಿ ರಾಮಕೃಷ್ಣಮಠದ ಸನ್ಯಾಸಿಗಳು ಪರಸ್ಪರ ಇದೇ ರೀತಿಯ ಭವಿಷ್ಯದ ಬಗ್ಗೆ ಮಾತನಾಡಿಕೊಂಡದ್ದನ್ನು ಕುವೆಂಪು ಚಿತ್ರಿಸುತ್ತಾರೆ. ಮುಂದೆ ಅವತರಿಸಲಿರುವ ಆ ಮಹಾಪುರುಷ ವಿವೇಕಾನಂದರ ಶಿಷ್ಯರೊಬ್ಬರಿಂದ ದೀಕ್ಷೆ ಪಡೆಯಲಿದ್ದಾನೆಂಬುದು ಅವರ ಚರ್ಚೆಯ ಮುಖ್ಯ ವಿಚಾರ. ಇದು ಮಾತ್ರವಲ್ಲ; ಕಷ್ಟದ ಹೆಸರೂ ಕೇಳಿ ತಿಳಿದಿರದಂಥ ಕುಸುಮ ಕೋಮಲೆ ಚಿನ್ನಮ್ಮ ಕಗ್ಗತ್ತಲಲ್ಲಿ ಭೀಕರ ಗುಡುಗು, ಮಿಂಚು, ಸಿಡಿಲು, ಮಳೆಗಾಳಿಯ ಹೊಡೆತವನ್ನೂ ಗಮನಿಸದೆ ಎಲ್ಲ ಗಂಡಾಂತರಗಳನ್ನೂ ಎದುರಿಸಿ ಹೋಗಿ ಹುಲಿಕಲ್ಲು ಗುಡ್ಡದ ಮಂಟಪದಲ್ಲಿ ಮುಕುಂದಯ್ಯನೊಂದಿಗೆ ಸೇರಿಕೊಂಡು ಧೈರ್ಯ, ಸಾಹಸ ಮಾಡಿದಳೆಂದರೆ ಅದಕ್ಕೂ ಮನುಷ್ಯರಿಗೆ ಮೀರಿದ ಕಾರಣವಿರಬೇಕು; ಆಕೆಯ ಮಗಳ ಮಗನಾಗಿ ಮುಂದೆ ಅವತರಿಸಲು ಕಾದಿರುವ 'ಅದಾವುದೋ ಗುರುಚೇತನವೊಂದರ ಚಿತ್ತ ತಪಸ್ಸಿನ ಫಲವೇ' ಆಗಿರಬೇಕೆಂಬ ನಿರೂಪಕನ ವ್ಯಾಖ್ಯಾನವೂ ಎದುರಾಗುತ್ತದೆ!

ಈ ಅತೀಂದ್ರಿಯ ವಿದ್ಯಮಾನವಿರುವ ಘಟನೆಗಳನ್ನು ಕುವೆಂಪು ಸೃಷ್ಟಿಸಿರುವುದು ನಿಜವಾಗಿ ಕಾದಂಬರಿಗೆ ಉಪಯುಕ್ತವೆ? ಅಲ್ಲವೇ? ಎಂಬ ಪ್ರಶ್ನೆಯಾಗಲಿ, ಈ ಘಟನೆಗಳು ಕೃತಿಯಲ್ಲಿ ಸಾವಯವ ಸಂಬಂಧವನ್ನು ಹೊಂದಿವೆಯೆ ಎಂಬುದಾಗಲಿ ನನ್ನ ಪ್ರಬಂಧದ ಗುರಿ ಅಲ್ಲ; ಆದರೆ, ಕವಿಯ ಆಶಯದಲ್ಲಿ ಆ ರೀತಿಯ ಸಾವಯವ ಗ್ರಹಿಕೆಯಿದ್ದಿರಬೇಕು ಎಂದು ನಾನು ಖಚಿತವಾಗಿ ತಿಳಿಯುತ್ತೇನೆ. ಈ 'ಸಾವಯವ ಸಂಬಂಧ' ಎಂಬುದು ಆರಂಭಕ್ಕೆ ನಾನು ಉಲ್ಲೇಖಿಸಿರುವ 'ಪೂರ್ಣದೃಷ್ಟಿ'ಯ ದಾರ್ಶನಿಕ ನಂಬಿಕೆಯಲ್ಲಿ ಸೇರಿರುವಂಥದು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅರವತ್ತು-ಎಪ್ಪತ್ತರ ದಶಕಗಳಲ್ಲಿ, ಅದೂ ಎರಡು ಮಹಾಯುದ್ಧಗಳ ದುಷ್ಪರಿಣಾಮಗಳಿಂದ ಜಗತ್ತು ಇನ್ನೂ ಚೇತರಿಸಿಕೊಳ್ಳಲು ಕಷ್ಟವಾಗಿದ್ದ ಕಾಲದ ಖಿನ್ನತೆ, ಪರಕೀಯತೆ, ವ್ಯಕ್ತಿಯ ಅಸ್ತಿತ್ವವಾದಿ ತೊಳಲಾಟಗಳೇ ಸಾಹಿತ್ಯ ಮತ್ತು ಕಲೆಗಳಲ್ಲಿ ಆವರಿಸಿದ್ದ ಪರಿಸರದಲ್ಲಿ ಕುವೆಂಪು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಮೂಲಕ, ಅದಕ್ಕಿಂತ ಮೂರು ದಶಕಗಳಷ್ಟು ಹಿಂದೆಯೇ ಬರೆದಿದ್ದ 'ಕಾನೂರು ಹೆಗ್ಗಡಿತಿ'ಯಲ್ಲಿ ಆರಂಭಿಸಿದ್ದ ಮಲೆನಾಡ ಕಥನವೆಂಬ 'ಪುರಾಣ' ಸದೃಶ ಲೋಕದ ಇನ್ನೂ ಹಿಂದಿನ ಅವಸ್ಥೆಯನ್ನು ಮತ್ತೆ ಕಟ್ಟಿಕೊಡಲು ಯತ್ನಿಸುತ್ತಾರೆ. ಈ ಎರಡನೆಯ ಪುರಾಣಲೋಕದಲ್ಲಿ ಪರಂಪರಾಗತ ಆರ್ಷೇಯ ಭಾರತೀಯ ಧರ್ಮ-ಸಂಸ್ಕೃತಿಗಳ ತತ್ವವನ್ನು ಎತ್ತಿ ಸಾರಿ ಹೇಳಿದ ವಿವೇಕಾನಂದರನ್ನು ಜಗದುದ್ಧಾರಕ ಗುರುವೆಂದು ಭಾವಿಸುತ್ತಾರೆ. ಅಂಥ ಗುರುವಿನ ಶಿಷ್ಯ ಪರಂಪರೆಯಲ್ಲಿ ಸೇರುವ ವ್ಯಕ್ತಿಯು ತಾನು ಹುಟ್ಟಿಬಂದ ಶೂದ್ರಸಮುದಾಯವನ್ನು ಅವರ ಕ್ಷುದ್ರ ಜೀವನಾವಸ್ಥೆಯಿಂದ ಹೊರಕ್ಕೆ ಬರುವಂತೆ, ಆತ್ಮೋನ್ನತಿಯ ಕಡೆಗೆ ಶ್ರಮಿಸಲು ಸಿದ್ಧವಾಗುವಂತೆ 'ಉದ್ಧಾರಕ' ಸೇವಾ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳಲಿರುವನು ಎಂಬುದನ್ನು ದೈವ ನಿಯಮದ ಒಂದಂಶವೆಂದೂ ಸೂಚಿಸುತ್ತಾರೆ. ಈ ವ್ಯಕ್ತಿ ಹೂವಯ್ಯನೇ ಕುವೆಂಪುವೇ ಎಂಬುದಕ್ಕಿಂತಲೂ ಕುವೆಂಪು ಅವರ ಅಸಾಧಾರಣ ಸಾಧನೆಯ ಹಿಂದೆ ಇಂಥದ್ದೊಂದು ದೈವಚಿತ್ತವಿದೆಯೆಂದು ಅವರು ನಂಬಿದ್ದರೆ ಆಶ್ಚರ್ಯಪಡಬೇಕಿಲ್ಲ.

ಉಪಸಂಹಾರದಲ್ಲಿ ಹೇಳಬೇಕೆಂದರೆ – ಕುವೆಂಪು ಅವರು ಪೂರ್ಣದೃಷ್ಟಿಯ ಮಹತ್ತರವಾದ ಆಶಯವನ್ನು ಸೂಚಿಸುತ್ತಲೇ ಅತ್ಯಂತ ಕಿರಿಯ ವಲಯವಾದ ಮಲೆನಾಡಿನ ಗ್ರಾಮೀಣ ಸಮುದಾಯದ ಉದ್ಧಾರವನ್ನು ವಸಾಹತುಶಾಹಿಯ ಮುಷ್ಟಿಯಿಂದ ವಿಮೋಚನೆ ಪಡೆಯಬಯಸಿದ್ದ ದೇಶದ

ಬಿಡುಗಡೆಯ ಆಶಯದೊಂದಿಗೆ ಬೆಸೆಯುವುದಕ್ಕಾಗಿ ಈ ಅತೀಂದ್ರಿಯ ಘಟನಾವಳಿಗಳನ್ನು ಸೃಷ್ಟಿಸುತ್ತಾರೆ. ಸಾಮ್ರಾಜ್ಯಶಾಹಿ ಸಾಂಸ್ಕೃತಿಕ ಆಕ್ರಮಣದಿಂದಾಗಿ ಆತ್ಮಸ್ಥೈರ್ಯವನ್ನು ಕಳೆದುಕೊಂಡು ಗ್ಲಾನಿಗೆ ಒಳಗಾಗಿದ್ದ ದೇಶದ ಜನತೆಯ ಅಂಥ ಆತ್ಮಗ್ಲಾನಿ, ಕ್ಲೈಬ್ಯಗಳನ್ನು ತೊಡೆಯಲು, ಅವರೊಳಗೆ ಸ್ವಾಭಿಮಾನದ ಎಚ್ಚರವನ್ನು ಮೂಡಿಸಲು ಬದುಕನ್ನು ಮುಡಿಪಿಟ್ಟ ವಿವೇಕಾನಂದರ ಮೂಲಕ ಮಲೆನಾಡ ಕಥನಕ್ಕೆ ರಾಷ್ಟ್ರೀಯ ವಲಯದೊಳಕ್ಕೆ ಪ್ರವೇಶ ಸಿಕ್ಕುತ್ತದೆ.

ಆ ವಿವೇಕಾನಂದರು ಚಿಕಾಗೋ ನಗರದ ಅಂತರರಾಷ್ಟ್ರೀಯ ಧರ್ಮಸಮ್ಮೇಳನದಲ್ಲಿ ತಮ್ಮ ಅಮೋಘವಾಣಿಯ ಮೂಲಕ ಭಾರತದ ಬಗೆಗಿನ ಜಾಗತಿಕ ಪೂರ್ವಾಗ್ರಹಗಳನ್ನು ನಿವಾರಿಸಲು ಮತ್ತು ಈ ರಾಷ್ಟ್ರದ ಸಾಂಸ್ಕೃತಿಕ ಹಿರಿಮೆಯನ್ನು ಪ್ರಪಂಚದ ವಲಯಕ್ಕೆ ಕೊಂಡೊಯ್ದುದ್ದು ಮಲೆನಾಡಿನ ಕಥನವನ್ನು ಜಾಗತಿಕ ವಲಯದೊಂದಿಗೆ ಬೆಸೆಯುವ ಯತ್ನವಾಗಿ ಕಾದಂಬರಿಯಲ್ಲಿ ಪ್ರಸ್ತಾಪಗೊಳ್ಳುತ್ತದೆ.

ಅತೀಂದ್ರಿಯಾನುಭವಗಳು 'ಮಿಂಚಿಣುಕಿ' ಮಾಯವಾಗುವ ಕಾಲಾತೀತ, ದೇಶಾತೀತ ಪರಮ ಸತ್ಯದ ಹೊಳಹುಗಳೆಂದು ಪ್ರತಿಪಾದಿಸುವ ಮೂಲಕ, ಈ ಜನಜಾಗರಣದ ಕಾರ್ಯವನ್ನು ಪೂರ್ಣತೆಯ ಕಡೆಗಿನ ವ್ಯಕ್ತಿಯ ಆತ್ಮವಿಕಸನದ ದಾರಿ-ದರ್ಶಕವೆಂದು ಅರ್ಥೈಸಲು ಸಾಧ್ಯವಾಗುತ್ತದೆ.

ಹೀಗೆ ಕುವೆಂಪು ಕಾದಂಬರಿಗಳು ಒಂದು ಪಠ್ಯವಾಗಿ ಭೂತಕಾಲಕ್ಕೆ ಹೋಗಿ ಆ ಕಾಲದ ಮಲೆನಾಡಿನ ಗ್ರಾಮೀಣ ಸಮಾಜದ ಯಥಾವತ್ತಾದ ಚಿತ್ರಣವನ್ನು ನೀಡಿ, ಆ ಸಮುದಾಯದ ಉದ್ಧಾರಕ್ಕೆ ಭವಿಷ್ಯದಲ್ಲಿ ಇರುವ ಸಾಧ್ಯತೆಯೊಂದನ್ನು ಸೂಚಿಸುತ್ತವೆ. ಇಪ್ಪತ್ತನೆಯ ಶತಮಾನದ ಏಕವ್ಯಕ್ತಿ ವಿರಚಿತವಾದ ಮಹಾಪುರಾಣವೂ ಆಗಿದೆ ಎಂದು ಇವುಗಳನ್ನು ಓದುವುದು ಸಾಧ್ಯವಿದೆ.



ನಂ. ೩೫, ೭ನೇ ಮುಖ್ಯರಸ್ತೆ
ಪ್ರಮೋದ ಲೇಔಟ್, ನಾಯಂಡಹಳ್ಳಿ ಅಂಚೆ
ಬೆಂಗಳೂರು - ೫೬೦ ೦೩೯





ಕುವೆಂಪು ಕಾವ್ಯದ ಧಾತು ಮತ್ತು ಧೋರಣೆಗಳು

ವಿ.ಚಂದ್ರಶೇಖರ ನಂಗಲಿ

'ಅಲ್ಲಮನ ಧಾತು ಮತ್ತು ಧೋರಣೆಗಳು' – ಎಂಬ ಡಾ. ಎಲ್. ಬಸವರಾಜು ಅವರ ಶೀರ್ಷಿಕೆಯಿಂದ ಪ್ರೇರಿತನಾಗಿ, 'ಕುವೆಂಪು ಕಾವ್ಯದ ಧಾತು ಮತ್ತು ಧೋರಣೆಗಳು' ಎಂಬ ಶೀರ್ಷಿಕೆಯನ್ನಿಲ್ಲಿ ಬಳಸಲಾಗಿದೆ. ಕುವೆಂಪು ಸಮಗ್ರ ಕಾವ್ಯದ ಎರಡು ಸಂಪುಟಗಳಲ್ಲಿರುವ ಕವಿತೆಗಳನ್ನು ಮುಖ್ಯವಾಗಿಟ್ಟುಕೊಂಡು ಇಲ್ಲಿನ ವಿಚಾರಗಳನ್ನು ರೂಪಿಸಲಾಗಿದೆ. 'ಕುವೆಂಪು'ಗೆ ಸಂಬಂಧಪಟ್ಟಂತೆ ನಮಗೆ ಸಿಕ್ಕುವ ಹೆಸರುಗಳಿವು: ಕೆ.ವಿ. ಪುಟ್ಟಪ್ಪ (ಶಾಲಾ ಬಾಲಕ), ಕಿಶೋರಚಂದ್ರವಾಣಿ(ಹದಿಹರೆಯದಲ್ಲಿ), ಕುವೆಂಪು('ಕೊಳಲು'ನಲ್ಲಿ), ಶ್ರೀ ಕುವೆಂಪು (ಶ್ರೀರಾಮಾಯಣದರ್ಶನಂ'ನಲ್ಲಿ). ಈ ಎಲ್ಲ ಹೆಸರುಗಳನ್ನು ಒಟ್ಟಿಗೆ ಗಮನಿಸಿದರೆ, ಮಲೆನಾಡಿನ ಕುಗ್ರಾಮದ ಶಾಲಾಬಾಲಕನೊಬ್ಬ ಚಿಗುರೊಡೆದು ಬೆಳೆಯುತ್ತಾ, ಕವಿಯಾಗಿ ಮರದಂತೆ ಅರಳುತ್ತಾ, ಕಡೆಗೆ ಗಗನಚುಂಬಿಯಾದ ಮಹಾವೃಕ್ಷದಂತೆ ಮಹಾಕವಿಯಾಗಿ ಬೆಳಗಿದ ಗತಿಶೀಲತೆಯ ಚಲನಾತ್ಮಕ ವ್ಯಕ್ತಿತ್ವವೊಂದು ಕಣ್ಮುಂದೆ ಸುಳಿಯುತ್ತದೆ. ಕುವೆಂಪು ಕಾವ್ಯವೆಂದರೆ ಗತಿಶೀಲತೆಯ ಕಾಣ್ಕೆಯೆಂದೇ ಅರ್ಥ. ಈ ದೃಷ್ಟಿಯಿಂದ ತೊರೆ (ಪು.೪೨), ಮೇಘ (ಪು.೨೧೫) ಎಂಬ ಕವಿತೆಗಳು ಗಮನಾರ್ಹವಾಗಿವೆ. ನಿಘಂಟುಗಳು ನೀಡುವ ಸ್ಥಾವರವಾದ ಅರ್ಥಕ್ಕೆ ಬದ್ಧವಾಗಿ ತೊರೆಯನ್ನು ತೊರೆಯೆಂದೂ ಮೇಘವನ್ನು ಮೇಘವೆಂದೂ 'ಫಿಕ್ಸಿಂಗ್' ಮಾಡದೆ, ಪಾರಾದಾಗಲೆ ಈ ಕವಿತೆಗಳ ಗತಿಶೀಲತೆಯ ಕಾಣ್ಕೆ ಗೋಚರವಾಗುತ್ತದೆ.

ಕುವೆಂಪು ತೊರೆಯೊಂದಿಗೆ, ಮೇಘದೊಂದಿಗೆ ತಮ್ಮನ್ನು ಸಮೀಕರಿಸಿಕೊಂಡಿದ್ದಾರೆ. ಅರ್ಜುನಚರನಾದ ಅರಿಕೇಸರಿಯಂತೆ, ಕರ್ಣಚರನಾದ ಪಂಪನಂತೆ, ತೊರೆಯೊಂದಿಗೆ –ಮೇಘದೊಂದಿಗೆ 'ಚರಿಸುವ' ಕವಿ ಇಲ್ಲಿದ್ದಾನೆ. ಸಹೃದಯರು ಮೊದಲಿಗೆ ಈ ಕವಿತೆಗಳನ್ನು ಓದಿ ನಂತರ ನನ್ನ ವಿಮರ್ಶೆಯ ಮಾತುಗಳನ್ನು ಗಮನಿಸಬೇಕೆಂದು ಬಿನ್ನಹ. ಈ ಕವಿತೆಗಳಿಂದ ಆಯ್ದುಕೊಂಡ ಸಾಲುಗಳಿವು :

ಒಂಟಿಯಾಗಿ ಹರಿವ ಕವಿಯೊಲು ಅಲೆವೆನು... ತೊರೆ

ಒಂಟಿಯಾಗಿ ಅಲೆಯುವ ಕವಿಯ ಚೈತನ್ಯದ ತೆರದಿ... ಮೇಘ

ಇಲ್ಲಿರುವ ಒಂಟಿತನವನ್ನು ತಪ್ಪು ತಪ್ಪಾಗಿ ವ್ಯಾಖ್ಯಾನಿಸುವುದುಂಟು. 'ಒಂಟಿತನ' ಎಂಬುದು ಏಕರೂಪಿ ಯಾದ ಪರಿಕಲ್ಪನೆಯಲ್ಲ. ಒಂಟಿತನವು ಬಹುರೂಪಿಯಾಗಿದೆ: ೧. ಅನಾಥ ಪ್ರಜ್ಞೆಯ ಒಂಟಿತನ, ೨. ಜನವಿದೂರ ಪ್ರಜ್ಞೆಯ ಒಂಟಿತನ, ೩. ಸ್ವಯಂ ನಿರ್ಮಿತ ಅಪರಾಧ ಪ್ರಜ್ಞೆಯ ಒಂಟಿತನ, ೪. ನಿನಗೆ ನೀನೇ ದಾರಿ ದೀಪ ಎಂಬ ಬುದ್ಧಮಾರ್ಗದ ಒಂಟಿತನ ಇತ್ಯಾದಿ. ಕುವೆಂಪು ಅವರ ನಿಸರ್ಗ ಕವಿತೆಗಳನ್ನು ವರ್ಡ್ಸ್‌ವರ್ತ್‌ನೊಂದಿಗೆ ತೌಲನಿಕವಾಗಿ ಪರಿಶೀಲಿಸುತ್ತಾ ಡಿ.ಆರ್. ನಾಗರಾಜ್ ಕೊಟ್ಟಿರುವ ತೀರ್ಪು ಹೀಗಿದೆ : ವರ್ಡ್ಸ್‌ವರ್ತ್ ನಿಸರ್ಗ ಜನಸಹಿತವಾದದ್ದು; ಕುವೆಂಪು ನಿಸರ್ಗ ಜನ ವಿಹೀನವಾದದ್ದು. ಇದನ್ನು ಕೇವಲ ಒಂದು ಅಬ್ಸರ್‌ವೇಷನ್ ಎಂಬಂತೆ ಹೇಳಿದ್ದರೂ, ಇದರೊಳಗಿರುವ ಸೂಕ್ಷ್ಮತೆಗಳನ್ನು ಮರೆಯಬಾರದೆಂದು 'ಒಂಟಿತನ'ದ ಬಹುರೂಪಿ ಗ್ರಹಿಕೆಯನ್ನು ನಿರೂಪಿಸಲಾಗಿದೆ.

ಕುವೆಂಪು ಸಮಗ್ರ ಕಾವ್ಯಕ್ಕೆ ಬರೆದ ಮುನ್ನುಡಿಯಲ್ಲಿ ಜಿ.ಎಸ್. ಶಿವರುದ್ರಪ್ಪನವರು ಗುರುತಿಸಿರುವ ಕುವೆಂಪು ಕಾವ್ಯದ ಮುಖ್ಯ ಲಕ್ಷಣಗಳಾದ ನಿಸರ್ಗ-ಆಧ್ಯಾತ್ಮ-ವೈಚಾರಿಕತೆಗಳನ್ನು ಬಿಡಿಯಾಗಿ ನೋಡದೆ ಇಡಿಯಾಗಿ ಗ್ರಹಿಸಬೇಕು. ನ್ಯಾಚುರಲ್ – ಸ್ಪಿರಿಚ್ಯುಯಲ್ - ರ್‍ಯಾಶನಲ್ ಎಂಬ ಧಾರೆಗಳು ಬೇರ್ಪಡಿಸ ಲಾಗದಂತೆ ಒಂದರೊಳಗೊಂದು ಬೆರೆತುಹೋದ ತ್ರಿವೇಣಿ ಸಂಗಮವನ್ನು ಕುವೆಂಪು ಕಾವ್ಯದಲ್ಲಿ ಮನಗಾಣಬಹುದು. ಕುವೆಂಪು ಅವರಿಗೆ ನಿಸರ್ಗದ ಅನುಸಂಧಾನ ಖಾಸಗಿಯಾದದ್ದು! ಎಷ್ಟು ಖಾಸಗಿ ಎಂದರೆ, ವಚನಕಾರರು ಹೇಳುವಂತೆ :

> ಸತಿಯ ಸಂಗವನು, ಅತಿಶಯದ ಗ್ರಾಸವನು
> ಪೃಥುವಿಗೀಶ್ವರನ ಪೂಜೆಯನು ಅರಿವುಳ್ಳೊಡೆ
> ಪರರ ಕೈಯಲ್ಲಿ ಮಾಡಿಸುವರೆ ರಾಮನಾಥ?

"ಕಾವ್ಯ ಮತ್ತು ದರ್ಶನ – ಎರಡೂ ನಮ್ಮಾತ್ಮದ ಜೇನುಗೂಡುಗಳಿರುವಂತೆ..."(ನೆನಪಿನ ದೋಣಿಯಲ್ಲಿ) ಎಂಬ ಕುವೆಂಪು ನುಡಿಗಳನ್ನಿಲ್ಲಿ ಸ್ಮರಿಸಬಹುದು. ನೆಲದಲ್ಲಿ ಹರಿವ ನೀರು ಮತ್ತು ಬಾನಲ್ಲಿ ಅಲೆವ ಮೋಡಗಳ ನಡುವೆ ಕುವೆಂಪು ಅವರಿಗೆ ವ್ಯತ್ಯಾಸಗಳಿಲ್ಲ. ಇವೆರಡೂ ಜೀವನ ಮುಖಿಯಾದ ಕಾವ್ಯ ಮತ್ತು ದರ್ಶನದ ಪ್ರತೀಕವಾಗಿದ್ದು ಆತ್ಮಸಂವಾದಿಗಳಾಗಿವೆ. ಈ ಕವಿತೆಗಳ ತಿರುಳೆಂದರೆ, ಜಲಧರ್ಮ ಮತ್ತು ಮೇಘಧರ್ಮಗಳ ವಿಸ್ತರಣೆಯಾಗಿ 'ಜೀವನಧರ್ಮ'ವನ್ನು ನಿರೂಪಿಸಿರುವುದು. "...ಹರಿವ ನೀರನ್ನು 'ಜೀವನ' ಎಂದೂ ಹೆಸರಿಸಿದ್ದಾರೆ. ನಮ್ಮ ಜೀವ ಕಾಲದಲ್ಲಿ ಪ್ರವಹಿಸುತ್ತಿರುವುದನ್ನು ಪ್ರತಿಮಿಸುತ್ತದೆ ನಿರಂತರವಾಗಿ ಹರಿಯುವ ನೀರು" (ನೆನಪಿನದೋಣಿಯಲ್ಲಿ)

'ತೊರೆ' ಮತ್ತು 'ಮೇಘ' ಕವಿತೆಗಳಲ್ಲಿ ಗಮನಿಸಬೇಕಾದ ಮುಖ್ಯ ವಿಚಾರವೆಂದರೆ, ನೀರು ಮತ್ತು ಮೋಡಗಳೆಂಬ ವಸ್ತುಗತಿಶೀಲತೆಗೆ ಕವಿಯ ಮನಸ್ಸು ಒಲಿದಿದೆ. 'ವಸ್ತುಗತಿ'ಯನ್ನು ಸಾಧ್ಯವಾಗಿಸುವ ಧಾತುಗಳಿವು:

೧. ಅನಂತ್ಯ : ಇಲ್ಲಿ ಯಾವುದಕ್ಕೂ ಮೊದಲಿಲ್ಲ, ಯಾವುದಕ್ಕೂ ಕೊನೆಯಿಲ್ಲ ಎಂಬ ಕುವೆಂಪು ಪ್ರಜ್ಞೆಯೇ 'ಅನಂತ್ಯ'

೨. ಬಹುತ್ವ : ಭೂವನಕುಸುಮಿಸಿ ಪುಲಕಿಸಿ ಮರಳಿಸಿ ಕೋಟಿ ಕೋಟಿ ಸಲ ಹೊಸಯಿಸಿತು ಎಂಬ ಬೇಂದ್ರೆ ಪ್ರಜ್ಞೆಯೇ 'ಬಹುತ್ವ'

೩. ನವತ್ವ : ಇದು ನಿಚ್ಚಂ ಪೊಸತು ಅರ್ಣವೆಂಬೊಲ್ ಅತಿ ಗಂಭೀರವೆಂಬ ಪಂಪ ಪ್ರಜ್ಞೆಯೇ 'ನವತ್ವ'

ಇಂಥ 'ವಸ್ತುಗತಿ'ಯ ತತ್ವದಿಂದಲೇ ಕಾವ್ಯಾರ್ಥ ಪರಂಪರೆಯ ನಿರ್ಮಾಣವಾಗುತ್ತದೆ; ಕಾರಯಿತ್ರೀ ಮತ್ತು ಭಾವಯಿತ್ರೀ ಪ್ರತಿಭೆಗಳ ಹೃದಯ ಸಂವಾದ 'ಈಗಳೆ ಸಾಧ್ಯ'ವಾಗುತ್ತಿರುತ್ತದೆ. ಆದರೆ, ವಸ್ತುಗತಿಗೆ ಇದರ ಫಲಿತವಾದ ಕಾವ್ಯಾರ್ಥ ಸಿದ್ಧಿಗೆ ಮಾರಕವಾದ ಸಂಗತಿಗಳಿವೆ. ಇವನ್ನು ಕಾವ್ಯಾರ್ಥ ವಿಘ್ನಕಾರಿಗಳು ಅಥವಾ ಕಾವ್ಯಾರ್ಥದ ಅರಿಷಡ್ವರ್ಗಗಳು ಎಂದು ಕರೆಯಬಹುದು.

೧. ನಿಘಂಟುಗಳು, ಪದಕೋಶಗಳು
೨. ಜೀವಚರಿತ್ರೆಗಳು, ಸಂದರ್ಶನಗಳು, ಮಾತುಕತೆಗಳು
೩. ನಿರ್ದಿಷ್ಟವಾದ ಸಾಮಾಜಿಕ ಮತ್ತು ಚಾರಿತ್ರಿಕ ಸಂದರ್ಭಗಳು
೪. 'ಚಾರಿತ್ರಿಕ ವಿಧಾನ'ವೆಂಬ ವಿಮರ್ಶಾಪದ್ಧತಿಗೆ ಬದ್ಧವಾದ ಸಾಹಿತ್ಯ ಚರಿತ್ರೆಗಳು, ಸಾಹಿತ್ಯ ಸಂಶೋಧನೆಗಳು
೫. ಸಾಹಿತ್ಯ ಚಳುವಳಿ ಜನ್ಯವಾದ ಪಾಂಥಿಕ ಅಧ್ಯಯನಗಳು
೬. ಯಾಂತ್ರಿಕವಾದ ಓದನ್ನು ಪ್ರಸಾರ ಮಾಡುತ್ತಿರುವ ಶೈಕ್ಷಣಿಕ ಪಠ್ಯಕ್ರಮ – ಪರೀಕ್ಷಾ ಪದ್ಧತಿಯ ವ್ಯಾಸಂಗಗಳು

ಸತ್ಯಾನ್ವೇಷಕರಿಗೆ ಅಡ್ಡಗಾಲು ಕೊಟ್ಟು ಬೀಳಿಸುವ ಈ ಅರಿಷಡ್ವರ್ಗಗಳನ್ನು ಒಂದೇ ಮಾತಿನಲ್ಲಿ ವಂಶವಾಹಿ ಅಧ್ಯಯನಗಳು (=ಜೆನೆಟಿಕಲ್ ಸ್ಟಡೀಸ್) ಎಂದು ಕರೆಯಬಹುದು. ಇಲ್ಲಿ ಕಾವ್ಯಾನುಸಂಧಾನವು ಪೂರ್ವನಿರ್ಧಾರಿತವಾಗಿರುತ್ತದೆ. ಎಲ್ಲ ತಲೆಮಾರುಗಳು ಈ ಅರಿಷಡ್ವರ್ಗಗಳಿಂದ ಸಿಗುವ ಮಾಹಿತಿ ತಂತ್ರಜ್ಞಾನವನ್ನು ರವಾನಿಸುತ್ತ 'ಸ್ಥಾವರ'ವಾದ ಕಾವ್ಯಾರ್ಥವೊಂದನ್ನು ಆರಾಧಿಸುತ್ತಿರುತ್ತವೆ. ಕ್ರಿಕೆಟ್ ಆಟದಲ್ಲಿ ಮ್ಯಾಚ್ ಫಿಕ್ಸಿಂಗ್ ಇರುವಂತೆ, ಇದು ಕಾವ್ಯಲೋಕದ 'ಸೆಮಾಂಟಿಕ್ ಫಿಕ್ಸಿಂಗ್' ಆಗಿರುತ್ತದೆ. ಇದನ್ನು ಮೀರಬೇಕಾದರೆ ಕಾವ್ಯಾರ್ಥ ಸಹಕಾರಿ ಪ್ರಜ್ಞೆಯನ್ನು ಅಳವಡಿಸಿಕೊಳ್ಳಬೇಕು:

೧. ಕಾರಂತ ಪ್ರಜ್ಞೆಯ 'ಬಿಂಬಜ್ಞಾನ' (= ವಿಸ್ತಾರವಾದ ಜೀವನಾನುಭವ)
೨. ಅಲ್ಲಮ ಪ್ರಜ್ಞೆಯ 'ಕಾಲಜ್ಞಾನ' (= ಅನಂತವಾದ ಕಾಲಪ್ರವಾಹ)

ಹಿಂದಣ ಅನಂತವನೂ ಮುಂದಣ ಅನಂತವನೂ
ಒಂದು ದಿನ ಒಳಕೊಂಡಿತ್ತು ನೋಡ!

ಮೇಲೆ ನಿರೂಪಿಸಿದ ಎರಡೂ ಬಗೆಯ ಜ್ಞಾನ ನೇತ್ರಗಳ ಮೂಲಕ, ವಸ್ತುಗತಿಯನ್ನು ಮನಗಂಡು ಕಾವ್ಯಾರ್ಥ ಸಿದ್ಧಿಯನ್ನು ಪಡೆಯಬೇಕು. ಹೀಗೆ ಮಾಡದೆ, ಬರಿಯ ಶಬ್ದಜ್ಞಾನದಲ್ಲಿ ವಿಹರಿಸುತ್ತಾ ಕಾಲಾನುಕ್ರಮಣಿಕೆ ಎಂಬ ಕಲಿತ ಜ್ಞಾನಕ್ಕೆ ಅಡಿಯಾಳುಗಳಾಗಿ ನಡೆದಲ್ಲಿ – ಗಾಣಕ್ಕೆ ಕಟ್ಟಿದ ಎತ್ತುಗಳಂತೆ ಅದೇ ಸುತ್ತುಗಳಲ್ಲಿ ತಿರುಗುತ್ತಿರುತ್ತೇವೆ.

'ಕಲಾಸುಂದರಿ' ಎಂಬ ಕವಿತೆಯಲ್ಲಿ ಕುವೆಂಪು ಕಾವ್ಯಾಂಗನೆಯ ಚೆಲುವನ್ನು ಭಾವಪೂರ್ಣವಾಗಿ ವರ್ಣಿಸಿದ್ದಾರೆ. ಕಲಾಸುಂದರಿಯ ವರ್ಣನೆಯಲ್ಲಿ ಕುವೆಂಪು ಬಳಸಿರುವ ವಿಶೇಷಣಗಳಿಂದ ಈ ಮೂರನ್ನು ಆಯ್ಕೆ ಮಾಡಿಕೊಂಡು ವಿವರಿಸುತ್ತಿದ್ದೇನೆ :

೧. ಅರಣ್ಯ ರಮಣಿ, ೨. ದ್ವಂದ್ವಮಾಲಿನಿ, ೩. ನಿತ್ಯನೂತನ ಪ್ರಸೂತೆ.

ಅರಣ್ಯರಮಣಿ: ಕುವೆಂಪು ಅವರಿಗೆ ಅರಣ್ಯವೇ ಒಂದು ಮಹಾಕಾವ್ಯ. ಕಾವ್ಯವು ಕೂಡ ಅರಣ್ಯವಿದ್ದಂತೆ! ಇವೆರಡೂ ಸೌಂದರ್ಯಾನುಭೂತಿಯನ್ನು ಉಂಟುಮಾಡುವ ಶಕ್ತಿಯುಳ್ಳವು. ಆದ್ದರಿಂದಲೇ ಕಲಾಸುಂದರಿಯನ್ನು 'ಅರಣ್ಯರಮಣಿ' ಎಂದು ಕರೆದಿದ್ದಾರೆ. ಕುವೆಂಪು ಕಾವ್ಯದಲ್ಲಿ ಕಾಂತಾ ರಸಕ್ಕೆ ಎಳಸುವ ಸೀತೆಯ ಹೃದಯವಿದೆ, ನಾಗರಿಕ ಜೀವನದ ದಾರಿದ್ರ್ಯವನ್ನು ಮನಗಾಣುವ ರಾಮನ ಬುದ್ಧಿಯಿದೆ, ಮಹಾರಣ್ಯ ಸರಣಿಯ ಮರ್ಮವನ್ನು ಬಲ್ಲ 'ಹುಲಿಕಲ್ ನೆತ್ತಿಯ ಬಂಟ' ನಾಯಿಗುತ್ತಿಯ ದಿಟ್ಟತನವಿದೆ. ಗುರು ವಚನದಂತೆ 'ಪೊಂಗುಳಿ'ಯನ್ನು ಕೊಲ್ಲಲು ನಿರಾಕರಿಸುವ ಏಕಲವ್ಯನ ಜೀವಜಾಲದ ಮೈತ್ರಿಯಿದೆ. ಕಾಡನ್ನು ಕುವೆಂಪು ಅವರಂತೆ ಒಳಗೊಂಡ ಮತ್ತೊಬ್ಬ ಕವಿಯೇ ಕನ್ನಡದಲ್ಲಿಲ್ಲ. ಅರಣ್ಯದ ನಾಡಿ ಮಿಡಿತವೇ ಕುವೆಂಪು ಕಾವ್ಯದ ಬಹುಮುಖ್ಯ ಧಾತು ಮತ್ತು ಧೋರಣೆಯಾಗಿದೆ.

ದ್ವಂದ್ವಮಾಲಿನಿ: ದ್ವಂದ್ವಗಳು (=ಬೈನರೀಸ್), ವೈರುಧ್ಯಗಳು (=ಆಪೋಸಿಟ್ಸ್) ಕುವೆಂಪು ಕಾವ್ಯದ ಕಣ್ಣುಗಳಾಗಿವೆ. ಉಭಯ ದೃಷ್ಟಿ ಏಕದೃಷ್ಟಿಯಾಗುವಂತೆ ಕುವೆಂಪು ಕಾವ್ಯದ ದ್ವಂದ್ವಗಳು – ವೈರುಧ್ಯಗಳು ಒಟ್ಟು ಪರಿಣಾಮದಲ್ಲಿ ಅಖಂಡ ಸತ್ಯವನ್ನು ದರ್ಶಿಸುತ್ತವೆ. ಎಲ್ಲ ಬಗೆಯ ದ್ವಂದ್ವಗಳು ಮತ್ತು ವೈರುಧ್ಯಗಳು 'ಸ್ಥಾವರ'ಗಳಾಗಿ ಉಳಿಯದೆ, 'ಜಂಗಮ'ವಾಗುವ ಪರಿವರ್ತನೆಯ ಮಹಾ ತತ್ವವೊಂದನ್ನು ಕುವೆಂಪು ಕಾವ್ಯದಲ್ಲಿ ಸ್ಪಷ್ಟವಾಗಿ ಮನಗಾಣಬಹುದು. ನೀರು ಆವಿಯಾಗಿ ಮೋಡವಾಗುವ, ಮೋಡ ಕರಗಿ ನೀರಾಗುವ ಪರಿವರ್ತನೆಯ ಶಕ್ತಿಯೇ ಬಾಳನ್ನು ಮುನ್ನಡೆಸುತ್ತಿದೆ. ಇಂಥ ಬಾಳನ್ನು ಬಿಂಬಿಸುವ 'ಕಲಾಸುಂದರಿ'ಯನ್ನು 'ದ್ವಂದ್ವಮಾಲಿನಿ' ಎಂದು ಕರೆದಿರುವುದು ಯಥೋಚಿತವಾಗಿದೆ.

ನಿತ್ಯನೂತನ ಪ್ರಸೂತೆ: ಶ್ರೇಷ್ಠವಾದ ಕಾವ್ಯ ಎಲ್ಲ ತಲೆಮಾರುಗಳಿಗೂ ನಿತ್ಯನೂತನವಾದ ಅನುಭವವನ್ನು ಕೊಡಬಲ್ಲುದು. ಒಮ್ಮೆ ಓದಿಕೊಂಡು ಕಾವ್ಯಾನುಭವ ಪ್ರಾಪ್ತಿಯಾಗಿದೆ ಎಂದು ತಿಳಿಯುವುದು ಬಹು ದೊಡ್ಡ ಪ್ರಮಾದ. ಮಣ್ಣು, ನೀರು, ಗಾಳಿ, ಬೆಳಕು, ಬಾನುಗಳನ್ನು ಒಮ್ಮೆ ಪಡೆದು ಬಿಟ್ಟುಬಿಡುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ನಿಜ ಕಾವ್ಯವನ್ನು ಒಮ್ಮೆ ಪಡೆದು ಬಿಡಲಾಗದು! ನಾವು ಬೆಳೆದಂತೆಲ್ಲ ಕಾವ್ಯವು ಬೆಳೆಯುತ್ತಾ ನಮ್ಮ ಜೀವಮಾನದುದ್ದಕ್ಕೂ ನಿತ್ಯನೂತನವಾದ ಅನುಭವವನ್ನು ಕೊಡುತ್ತಿರುತ್ತದೆ. ಆದ್ದರಿಂದಲೇ 'ಕಲಾಸುಂದರಿ'ಯನ್ನು ಕುವೆಂಪು 'ನಿತ್ಯನೂತನ ಪ್ರಸೂತೆ' ಎಂದು ಕರೆದಿದ್ದಾರೆ.

ಹೀಗೆ, ಅರಣ್ಯರಮಣಿಯೂ ದ್ವಂದ್ವಮಾಲಿನಿಯೂ ನಿತ್ಯನೂತನ ಪ್ರಸೂತೆಯೂ ಆಗಿರುವ ಕುವೆಂಪು ಕಾವ್ಯವನ್ನು ಬಹು ಎಚ್ಚರ ಮತ್ತು ಬಹು ಸೂಕ್ಷ್ಮ ಪ್ರಜ್ಞೆಯಿಂದ ಪರಿಶೀಲಿಸಬೇಕಾಗುತ್ತದೆ. ಅರಣ್ಯದಲ್ಲಿರುವಷ್ಟು ದ್ವಂದ್ವಗಳು ಮತ್ತು ವೈರುಧ್ಯಗಳು ನೆಡುತೋಪುಗಳಲ್ಲಿರುವುದಿಲ್ಲ. ಅರಣ್ಯದ ನಿತ್ಯನೂತನತೆಯನ್ನೂ ನೆಡುತೋಪುಗಳಲ್ಲಿ ಕಾಣಲಾರೆವು. 'ಅರಣ್ಯರಮಣಿ'ಯೇ ದ್ವಂದ್ವಮಾಲಿನಿಯೂ, ನಿತ್ಯನೂತನ ಪ್ರಸೂತೆಯೂ ಆಗಿರುವುದರಿಂದ ಕುವೆಂಪು ಕಾವ್ಯದಲ್ಲಿ ಇವೆಲ್ಲ ಧಾರೆಗಳ ಕೂಡಲ ಸಂಗಮವಿದೆ. ಕಾಡಿನ ಭಾಷೆ ತಿಳಿಯದವರಿಗೆ ಕುವೆಂಪು ಭಾಷೆಯೂ ಭಾವಗಮ್ಯವಾಗುವುದಿಲ್ಲ. ಕುವೆಂಪು ಅವರು ಕಾಡಿನೊಳಗಾದ ಚೇತನ ಮತ್ತು ಆತುರ ವೈರಿಯಾದ ಸಹೃದಯಿ:

೧. ಅನ್ನಮಯದೀಚೆಯಲಿ ಪ್ರಾಣಮಯದಾಚೆಯಲಿ
ನನಗಿರುವುದೊಂದಲ್ತೆ ಅರಣ್ಯಮಯ ಕೋಶಂ

೨. ಇಲ್ಲಿ ಆವಸರವೂ ಸಾವಧಾನದ ಬೆನ್ನೇರಿದೆ.

ವಚನಕಾರ ಕಾಡಸಿದ್ದೇಶ್ವರನ ಅಂಕಿತನಾಮ 'ಕಾಡಿನೊಳಗಾದ ಶಂಕರಪ್ರಿಯ' ಮತ್ತು ನಗೆಯ ಮಾರಿತಂದೆಯ ಅಂಕಿತನಾಮ 'ಆತುರ ವೈರಿ ಮಾರೇಶ್ವರ' ಎಂದು. ಇಡೀ ವಚನಸಾಹಿತ್ಯದಲ್ಲೇ ಬಹು ವಿಶಿಷ್ಟವಾದ ಅಂಕಿತನಾಮಗಳಿವು. ದೇವರನ್ನು ಕಾಡಿನೊಳಗಾದವನು ಎಂದು ಗ್ರಹಿಸಿದ ಕಾಡ ಸಿದ್ಧೇಶ್ವರ ಮತ್ತು ರಭಸಮತಿಯ ಮನವನ್ನು ಕಟ್ಟಿಹಾಕಿ 'ಆತುರ ವೈರಿ'ಯಾಗಬೇಕಾದ ಬಗೆಯನ್ನು ಪ್ರತಿಪಾದಿಸಿದ ನಗೆಯ ಮಾರಿತಂದೆ ನನ್ನ ಕಣ್ಣಿಗೆ ಕುವೆಂಪು ಅವರ ಪೂರ್ವಕರಂತೆ ಕಂಡುಬಂದಿದ್ದಾರೆ. ವಚನ ಸಾಹಿತ್ಯವನ್ನು ಕುವೆಂಪು ಓದಿಕೊಂಡಿದ್ದಾರೆಯೇ ಇಲ್ಲವೇ ಎಂಬ ಪ್ರಶ್ನೆ ನನಗಿಲ್ಲಿ ಅಪ್ರಸ್ತುತ. ಕಾಡಸಿದ್ಧೇಶ್ವರ ಮತ್ತು ನಗೆಯ ಮಾರಿತಂದೆಯ ಧಾತು ಮತ್ತು ಧೋರಣೆಗಳು ಕುವೆಂಪು ಅವರಲ್ಲೂ ಮುಂದುವರೆಯುತ್ತಿರುವುದು ನನಗಿಲ್ಲಿ ಪ್ರಸ್ತುತವೆನಿಸುತ್ತದೆ.

ಕುವೆಂಪು ಕಾವ್ಯದ ಧಾತು ಮತ್ತು ಧೋರಣೆಗಳನ್ನು ಕೆಲವೊಂದು ಕವಿತೆಗಳ ಮೂಲಕ ಮನಗಾಣುವುದು ಅಗತ್ಯವಾಗಿದೆ. 'ನನ್ನ ಮನೆ' ಮತ್ತು 'ಅನಿಕೇತನ' ಕವಿತೆಗಳು ಉಭಯ ವೈರುಧ್ಯವೆನ್ನ ಬಹುದಾದ ರಚನೆಗಳು. ಮೇಲುನೋಟಕ್ಕೆ ವಿರುದ್ಧ ಧ್ರುವಗಳಂತೆ ಕಾಣುವ ಈ ಕವಿತೆಗಳು ಅಖಂಡ ಸತ್ಯವೊಂದನ್ನು ಹೇಳುತ್ತಿವೆ. ಒಡಲು(= ಮ್ಯಾಟರ್)ಮತ್ತು ಚೇತನ (= ಮೈಂಡ್)ಗಳನ್ನು ಗಮನಿಸಿದರೆ, 'ನನ್ನ ಮನೆ' ಎಂಬ ಕವಿತೆಯು ಒಡಲ ಪಾಡು ಹಾಗೂ 'ಅನಿಕೇತನ' ಕವಿತೆಯು ಚೈತನ್ಯಗೀತೆ. 'ನನ್ನ ಮನೆ' ಕವಿತೆಯು ಕೇವಲ ಬಾಲ್ಯದ ಅನುಭವಕ್ಕೆ ಸಂಬಂಧಿಸಿದ್ದಲ್ಲ; ಮನೋಮಯ ಕೋಶದಲ್ಲಿ ಪ್ರತಿಷ್ಠಾಪನೆಗೊಂಡಿರುವ 'ನನ್ನ ಮನೆ'ಯಲ್ಲಿ ಈವರೆಗಿನ ಅನುಭವಗಳೆಲ್ಲ ಮಿಳಿತವಾಗಿವೆ: ಕಾಡುಮುತ್ತು ಕೊಡುತಲಿರುವ ಸೊಬಗವೀಡು ನನ್ನ ಮನೆ... ಬೆಂದು ಬಳಲಿದಾಗ ಬಂದು ನೀರು ಕುಡಿವ ನನ್ನ ಮನೆ... ಈ ಸಾಲುಗಳಲ್ಲಿರುವ ಪ್ರೀತಿಯ ಜಲ ಅನುಭವವೇದ್ಯ. ಇಂಥ ಪ್ರೀತಿಯ ಜಲವೇ ವಿಶ್ವವ್ಯಾಪಿ ಯಾಗಿ 'ಅನಿಕೇತನ'ವೆಂಬ ಚೈತನ್ಯಗೀತೆಯಾಗಿ ಹರಿದು ಬಂದಿದೆ. ಮೈಮನಗಳೆರಡಕ್ಕೂ ಸಲ್ಲುವ ಅಖಂಡ ಸತ್ಯವನ್ನು ದರ್ಶಿಸುತ್ತಿರುವ 'ನನ್ನ ಮನೆ' ಮತ್ತು 'ಅನಿಕೇತನ' ಎಂಬ ಕವಿತೆಗಳು ವಿರುದ್ಧ ಧ್ರುವಗಳೆನಿಸದೆ, ಒಂದು ಮತ್ತೊಂದರ ವಿಸ್ತರಣೆಯಾಗಿ ಕಾಣುತ್ತವೆ.

'ಬುದ್ಧದೇವ' ಮತ್ತು 'ವನಗಾಯಕ' – ಈ ಕವಿತೆಗಳನ್ನು ಕುವೆಂಪು ಕಾವ್ಯದ ಎರಡು ಕಣ್ಣುಗಳೆಂದು ಕರೆಯಬಹುದು. 'ಬುದ್ಧದೇವ' ಸಂಸ್ಕೃತಿಯ ಕಣ್ಣು; 'ವನಗಾಯಕ' ನಿಸರ್ಗದ ಕಣ್ಣು. ಕನ್ನಡ ಸಂಸ್ಕೃತಿಗೆ ಬುದ್ಧಮಾರ್ಗದ ಅಗತ್ಯವನ್ನು ಮನಗಾಣಿಸುವ 'ಬುದ್ಧದೇವ' ಕವಿತೆಯು ಅಂಬೇಡ್ಕರ್ ಅವರು ಬುದ್ಧಮಾರ್ಗವನ್ನು ಕಂಡುಕೊಳ್ಳುವುದಕ್ಕೂ ಮುಂಚೆಯೇ ರಚಿತವಾಗಿದೆಯೆಂಬುದು ಗಮನಾರ್ಹ. 'ವನಗಾಯಕ' ಜೀವಸಕ್ಕೆ ಅಗತ್ಯವಾದ ಸಹಜಯಾನವನ್ನು ಧ್ವನಿಸುವ ಕವಿತೆ. ಸಹಜಯಾನವನ್ನು ಮುಚ್ಚಿಹಾಕುವ ಶಕ್ತಿ ನಾಗರಿಕತೆಯ ಮಹಾಪ್ರಸ್ಥಾನಕ್ಕಿದೆ. ಇದನ್ನೊಂದು ಪರಿಚಿತ ಉದಾಹರಣೆಯ ಮೂಲಕ ಮನದಟ್ಟು ಮಾಡಿಕೊಳ್ಳಬಹುದು: ಕಬ್ಬು-ಬೆಲ್ಲ-ಸಕ್ಕರೆಗಳ ಕ್ರಿಯಾಸರಣಿಯನ್ನು ಗಮನಿಸಿದರೆ, ನಿಸರ್ಗಸಹಜವಾದ ಕಬ್ಬು ಸಹಜಯಾನದ ಪ್ರತೀಕ. ಕಬ್ಬನ್ನು ಅಗಿದು-ಜಗಿದು ತಿನ್ನುವುದು ಆರೋಗ್ಯಕ್ಕೆ ಸಹಕಾರಿ. ಇದರಿಂದ ಹಲ್ಲು-ಬಾಯಿ ಶುಚಿಯಾಗುತ್ತದೆ. ಅಗಿದು-ಜಗಿದು ನುಂಗಿದ ಕಬ್ಬಿನ ರಸವು ರಕ್ತವನ್ನು ಸೇರಿಕೊಳ್ಳುವಷ್ಟರಲ್ಲಿ ಅದರಲ್ಲಿದ್ದ ಅಪಾಯಕಾರಿ ಅಂಶಗಳೆಲ್ಲ ಪರಿಷ್ಕರಣೆಗೊಂಡು

ತ್ಯಾಜ್ಯವಸ್ತುಗಳಲ್ಲಿ ಲೀನವಾಗಿರುತ್ತವೆ. ಆದರೆ, ಬೆಂಕಿಯ ಸಂಪರ್ಕ ಪಡೆದ ಕಬ್ಬಿನರಸ ತನ್ನ ಸಹಜತೆಯನ್ನು ಕಳೆದುಕೊಂಡು ಬೆಲ್ಲ-ಸಕ್ಕರೆಯಾಗಿ ಮಾರ್ಪಟ್ಟು, ಸೇವಿಸಿದೊಡನೆಯೇ ನೇರವಾಗಿ ರಕ್ತಕ್ಕೆ ರವಾನೆಯಾಗುವುದರಿಂದ ಆರೋಗ್ಯಕ್ಕೆ ಹಾನಿಯಾಗುತ್ತದೆ. ಬೆಂಕಿಯ ಸಂಪರ್ಕ ಕಬ್ಬಿನರಸವನ್ನು ಕುಲಗೆಡಿಸುವಂತೆಯೇ, ನಾಗರಿಕತೆಯ ಸಂಪರ್ಕವು ನಿಸರ್ಗ ಸಹಜ ಪ್ರವೃತ್ತಿಗಳನ್ನು ಕುಲಗೆಡಿಸುತ್ತದೆ. ಇದನ್ನು ಹೀಗೆ ಸ್ಪಷ್ಟಪಡಿಸಬಹುದು: ನಿಸರ್ಗ ಸಹಜಜ್ಞಾನವನ್ನು ನಾಗರಿಕತೆಯ ಕೃತಕಜ್ಞಾನವು ಮುಚ್ಚಿ ಹಾಕುತ್ತದೆ. ನಿಸರ್ಗ ಸಹಜ ಬಿಂಬಜ್ಞಾನವನ್ನು ನಾಗರಿಕತೆಯಲ್ಲಿ ಕಲಿತ ಶಬ್ದಜ್ಞಾನವು ಮುಚ್ಚಿಹಾಕುತ್ತದೆ. ಆದ್ದರಿಂದಲೇ, ಅಲ್ಲಮ ಪ್ರಭು ಶಬ್ದದ ಲಜ್ಜೆ ಶಬ್ದ ಸೂತಕ ಎಂಬ ನುಡಿಗಳನ್ನು ಬಳಸಿದ್ದಾನೆ. ಮನುಷ್ಯನ ಸ್ವಭಾವಕ್ಕ 'ಸಾವಧಾನ'ವು(= ಸ್ಲೋ, ಲೀಜರ್ಲೀ ಪೇಸ್) ನಿಸರ್ಗ ಸಹಜವಾದುದು. ಆದರೆ, ಆಧುನಿಕ ನಾಗರಿಕತೆಯ ರಭಸಮತಿ ಮತ್ತು ಯಂತ್ರ-ತಂತ್ರಗಳ ವೇಗವು ನಮ್ಮ 'ಸಾವಧಾನ' ಬುದ್ಧಿಯನ್ನು ಮುಚ್ಚಿಹಾಕುತ್ತದೆ. ಈ ಎಲ್ಲ ದೃಷ್ಟಿಯಿಂದ ಕುವೆಂಪು 'ನಿಸರ್ಗಸಹಜತೆ'ಗೆ ಒಲಿಯುತ್ತಾರೆ:

೧. ಹೆ ಪುಣ್ಯಮತಿ ಮೂರ್ತಿ, ಮತದ ಮತಿಹೀನತೆಯು
ಸಾಕೆಮಗೆ; ಬೇಕು ಸನ್ಮತಿಯ ನಾಗರಿಕತೆಯು;
ನರನ ಸನ್ಮತಿಗಿಂತ ಬೇರೆಯ ಜಗದ್ಗುರುವೆ? – *ಬುದ್ಧದೇವ*

೨. ಕೇಳಿದರಲ್ಲದೆ ತಿಳಿಯದು ನಿನ್ನ
ಕಂಠದ ವೈಖರಿ, ತುದಿಯಲಿ ನನ್ನ
ಸಾವಿನ ಬಯಕೆಯು ನಿನ್ನಾ ಗಾನ;
ನಿನಗೆ ನಮೋ ಓ ಕಾಜಾಣ ! – *ವನಗಾಯಕ*

ಕುವೆಂಪು ಕಾವ್ಯವು ನಾಗರಿಕತೆಯ ವಿರೋಧಿಯಲ್ಲ! ನಾಗರಿಕತೆಯ ಹೆಸರಿನಲ್ಲಿ ಒಳನುಗ್ಗುವ ಪುರಾತನ ಮತ್ತು ಆಧುನಿಕ ವಿಕಾರಗಳನ್ನು ಒಟ್ಟೊಟ್ಟಿಗೆ ಕುವೆಂಪು ನಿರಾಕರಿಸುತ್ತಾರೆ. ಸನ್ಮತಿಯ ನಾಗರಿಕತೆ ಮತ್ತು ನರನ ಸನ್ಮತಿ ಎಂಬ ನುಡಿಗಳಲ್ಲಿ ನಿಸರ್ಗ ಸಹಜತೆಯ ಒಲವಿದೆ.

ನವಭಾರತದ ಶೈಕ್ಷಣಿಕ ಸಿಲಬಸ್ ಯಾವುದು? ಎಂಬ ಪ್ರಶ್ನೆಗೆ ಗಾಂಧಿಯ ಉತ್ತರ ಸುಸ್ಪಷ್ಟವಾಗಿತ್ತು: ಸ್ವತಂತ್ರ ಭಾರತವು ಯಾವ ದೇಶವನ್ನೂ ಅನುಸರಿಸಬಾರದು, ಭಾರತದ ಹಳ್ಳಿಗಾಡುಗಳೇ ನವಭಾರತದ ಶೈಕ್ಷಣಿಕ ಸಿಲಬಸ್ ಆಗಬೇಕು ಎಂಬ ಅಭಿಪ್ರಾಯ ಗಾಂಧಿಯವರಲ್ಲಿತ್ತು. ಆದರೆ, ಪಶ್ಚಿಮಮುಖಿಯಾದ ನೆಹರೂ ಸರ್ಕಾರದ ನೇತೃತ್ವದಲ್ಲಿ ಗಾಂಧಿವಾದವು ಮೂಲೆಗುಂಪಾಯ್ತು. ಸ್ವತಂತ್ರ ಭಾರತದ ಪ್ರಜೆಗಳು ಮೆಕಾಲೆಯ ಮಕ್ಕಳಾಗಿ ರೂಪುಗೊಳ್ಳುತ್ತಿದ್ದರು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಮೆಕಾಲೆಯ ಮಕ್ಕಳ ವಿಶ್ವವಿದ್ಯಾನಿಲಯಕ್ಕೆ 'ಕುಲಪತಿ'ಯೂ ಆಗಿದ್ದ ಕುವೆಂಪು ಅವರು ತಮ್ಮ ಸಾಹಿತ್ಯ ಸೃಷ್ಟಿಯಲ್ಲಿ ಮಲೆಯ ಮಕ್ಕಳನ್ನು ಪ್ರತಿಷ್ಠಾಪಿಸಿದರು. ಭಾರತದ ಹಳ್ಳಿಗಾಡುಗಳಲ್ಲೊಂದಾದ ಮಲೆನಾಡಿನ ಸಸ್ಯ ಪರಿಸರ, ಪ್ರಾಣಿ ಪರಿಸರ, ಮನುಷ್ಯ ಪರಿಸರವನ್ನೇ ತಮ್ಮ ಸಮಗ್ರ ಸಾಹಿತ್ಯದ ವಸ್ತುವನ್ನಾಗಿ ಮಾಡಿಕೊಂಡ ಕುವೆಂಪು ನಿಜವಾದ ಅರ್ಥದಲ್ಲಿ ಗಾಂಧಿವಾದಿಯಾಗಿದ್ದರು. ಮಲೆನಾಡಿನ ಭಾಷಿಕ ವೈವಿಧ್ಯತೆ, ಜೀವ ವೈವಿಧ್ಯತೆ, ಸಂಸ್ಕೃತಿ ವೈವಿಧ್ಯತೆಗಳ ಕೂಡಲಸಂಗಮವೆನಿಸಿದ 'ಹಸಿರು ಪಿರಮಿಡ್' ಕುವೆಂಪು ಸಾಹಿತ್ಯದ ಬಹು ಮುಖ್ಯ ಧಾತು ಮತ್ತು ಧೋರಣೆಯಾಗಿದೆ. ಈ ದೃಷ್ಟಿಯಿಂದ ತೇನೆ ಹಕ್ಕಿ ಮತ್ತು ಪೊಂಗುಳಿ ಅಥವಾ ಮಳೆ ಕೋಗಿಲೆ ಎಂಬ ಪಕ್ಷಿನಾಮಕ ಕವಿತೆಗಳನ್ನು ಪರಿಶೀಲಿಸಬಹುದು. ಇವೆರಡು ಕೇವಲ ಹಕ್ಕಿಯ ಕುರಿತು ಬರೆದ ಕವಿತೆಗಳಲ್ಲ. ಇಲ್ಲಿರುವ ಮತ್ತೊಂದು ಸಮಸ್ಯೆ ಎಂದರೆ, ಮಲೆಯ ಕವಿ ಕುವೆಂಪು ತಮ್ಮ

ಕಾವ್ಯದಲ್ಲಿ ಬಳಸಿರುವುದು ಮಲೆನಾಡಿನ ಗಿರಿಜನರ ಭಾಷೆಯ ಹೆಸರುಗಳನ್ನು. ತೇನೆಹಕ್ಕಿ, ಪೊಂಗುಳಿ ಅಥವಾ ಮಳೆಕೋಗಿಲೆ ಎಂಬ ಹೆಸರುಗಳು ಸ್ವತಃ ಮಲೆನಾಡಿನ ಶಿಷ್ಟ ಜನರಿಗೆ ಬಿಂಬಜ್ಞಾನವಾಗುವುದಿಲ್ಲ. ಇನ್ನು ಕನ್ನಡನಾಡಿನ ಬಯಲು ಸೀಮೆ, ಕರಾವಳಿ, ಉತ್ತರ ಕರ್ನಾಟಕದವರಿಗೆ ಈ ಹಕ್ಕಿಗಳ ಹೆಸರು ಕೇವಲ ಶಬ್ದಜ್ಞಾನವಾಗಿ ಉಳಿಯುವುದೇ ಹೊರತು, ಬಿಂಬಜ್ಞಾನವಾಗುವುದಿಲ್ಲ. ಮೆಕಾಲೆಯ ಮಕ್ಕಳಿಗೆ 'ಪಕ್ಷಿ' ಎಂಬ ಸಾಮಾನ್ಯ ಶಬ್ದ ಗೊತ್ತಿರುತ್ತದೆ, ಅಷ್ಟೇ! ಪಕ್ಷಿವೀಕ್ಷಣೆಯ ಹವ್ಯಾಸ ವುಳ್ಳವರಿಗೆ ಸಲೀಂ ಅಲಿ ಅವರ 'ಇಂಡಿಯನ್ ಬರ್ಡ್ಸ್' ಎಂಬ ಪುಸ್ತಕ ಆತ್ಮೀಯ ಸಂಗಾತಿಯಾಗುವುದರಿಂದ ಕುವೆಂಪು ಬಳಸಿದ ಗಿರಿಜನ ಭಾಷೆಯ ಹೆಸರುಗಳು ಇಂಗ್ಲಿಷ್ ಹೆಸರುಗಳೊಂದಿಗ ತಾಳೆಯಾಗದೆ, ತೇನೆ ಹಕ್ಕಿ ಯಾವುದು? ಪೊಂಗುಳಿ ಯಾವುದು? ಎಂಬ ಪ್ರಶ್ನೆ ಹಾಗೇ ಉಳಿದುಬಿಡುತ್ತದೆ. ಇಂಥ ಸಂದರ್ಭಗಳಲ್ಲಿ ಸಹೃದಯರಿಗೆ ಅವರವರ ಸ್ಥಳೀಯ ಭೂಗೋಳದಲ್ಲಿ ಸಾಧ್ಯವಾಗುವ ಬಿಂಬಜ್ಞಾನವೇ ಈ ಭಾಷಿಕ ವೈವಿಧ್ಯತೆಯನ್ನು ಬಗೆಹರಿಸಿಕೊಳ್ಳುವ ಸೇತುವೆಯಾಗುತ್ತದೆ. ಕೋಲಾರದಲ್ಲಿ 'ತೇನೆಹಕ್ಕಿ'ಯನ್ನು 'ಉತ್ತೀತಿ' ಎನ್ನುತ್ತಾರೆ. ಉತ್ತೀತಿ ಎಂಬುದು ಆ ಹಕ್ಕಿಯ ಕೂಗನ್ನು ನೆನಪಿಸುವ ಅನುಕರಣ ಶಬ್ದ. ಸಂಸ್ಕೃತದಲ್ಲಿ ಇದಕ್ಕೆ 'ಟಿಟ್ಟಿಭ' ಎಂದು ಹೆಸರು. ಇದು ಕೂಡ 'ವ್ವಿಟ್ಟಿಟಿವ್' ಎಂದು ಕೂಗುವ ಆ ಹಕ್ಕಿಯ ಅನುಕರಣ ಶಬ್ದ. ಇಂಗ್ಲಿಷಿನಲ್ಲಿ ಇದಕ್ಕೆ ರೆಡ್ ವಾಟಲ್ಡ್ ಲ್ಯಾಪ್‌ವಿಂಗ್ ಎಂದು ಕರೆಯುತ್ತಾರೆ. ಇಕಾಲಜಿಯನ್ನು ಬಲ್ಲವರು ಈ ಹಕ್ಕಿಯನ್ನು 'ಕಾಡಿನ ಕಾವಲುಗಾರ'ನೆಂದು ಕರೆಯುತ್ತಾರೆ. ಇಡೀ ಜೀವಜಾಲಕ್ಕೆ ಶತ್ರುಗಳ ಆಗಮನವನ್ನು ಸಾರಿ ಸಾರಿ ಹೇಳುವ ಹಕ್ಕಿಯೇ ತೇನೆ ಹಕ್ಕಿ. ಇದಕ್ಕೆ ಹಗಲು-ಇರುಳು ಭೇದವಿಲ್ಲ. ಇರುಳ ಹಕ್ಕಿಗಳು ಇರುಳಿನಲ್ಲೂ, ಹಗಲ ಹಕ್ಕಿಗಳು ಹಗಲಿನಲ್ಲೂ ಕೂಗಿಕೊಂಡರೆ, ತೇನೆಹಕ್ಕಿ ಹಗಲಿರುಳು ಎಡೆಬಿಡದೆ ಒಂದೇ ಸಮನೆ ಕೂಗುತ್ತಾ ಜೀವಜಾಲವನ್ನು ಎಚ್ಚರಿಸುತ್ತಿರುತ್ತದೆ. ನೆಲ-ಬಾನು, ಹಗಲು-ಇರುಳು ಎಂಬ ಭೇದವಿಲ್ಲದೆ ಸದಾ ಚಟುವಟಿಕೆಯಿಂದ ಕೂಡಿದ 'ಕಾಡಿನ ಕಾವಲುಗಾರ' ತೇನೆಹಕ್ಕಿಯ ಬುದ್ಧಿಜಾಗೃತಿಯನ್ನು ರೂಪಕ ಮಾಡಿಕೊಳ್ಳುವ ಕುವೆಂಪು ಕವಿಯೊಬ್ಬ 'ನಾಡಿನ ಕಾವಲುಗಾರ'ನಾಗಿ ನಿರ್ವಹಿಸಬೇಕಾದ ಸಾಂಸ್ಕೃತಿಕ ಜವಾಬ್ದಾರಿಯನ್ನು ಈ ಕವಿತೆಯಲ್ಲಿ ಬಿತ್ತರಿಸಿದ್ದಾರೆ:

> ನಿನ್ನ ಕಲೆಯ ನೆರಳ ಛಾಯೆ
> ನನ್ನ ಕಲೆ, ತೇನೆ ಹಕ್ಕಿ!
>   ನಿನಗೆ ಮುಕ್ತಿಯಾಗಿದೆ.
>
> ನುಡಿಯ ಬಲೆಯ ಸೆರೆಗೆ ಸಿಕ್ಕಿ
>   ನನಗೆ ದಾಸ್ಯವಾಗಿದೆ.
> ತ್ಯಾಗಿಯಂತೆ ನೆಲವನುಳಿಯೆ;
>   ಮಮತೆ ಮರಿಯ ಗೂಡಿದು
> ಭೋಗಿಯಂತೆ ನಭವ ಹಳಿಯೆ;
>   ಸಿರಿಯ ತವರು ಬೀಡದು !
>
> ಹಗಲಿನಲ್ಲಿ ನೆಲಕೆ ಸೇರಿ,
> ಇರುಳಿನಲ್ಲಿ ಬಾನ್ಗೆ ಹಾರಿ
> ಬಿಸಿಲು ತಂಪುಗಳನು ಮೀರಿ
>   ಸಮತೆಯಿಂದ ನಡೆವುದಂ
> ಕಲಿಸು ನನಗೆ ಮೊದಲು; ಕೊನೆಗೆ
>   ನೆಲಬಾನ್ಗಳ ಪಡೆವುದಂ !

ಈ ಕವಿತೆಯನ್ನು ಓದಿಕೊಂಡು, ಅನುಭವಿಸುತ್ತ ಪರಿಭಾವಿಸುತ್ತಿದ್ದಾಗ, 'ತೇನೆಹಕ್ಕಿ' ಎಂಬ ಶೀರ್ಷಿಕೆಗಿಂತ 'ಏಕಲವ್ಯನ ಪ್ರಾರ್ಥನಾಗೀತೆ' ಎಂಬ ಶೀರ್ಷಿಕೆಯೇ ಹೆಚ್ಚು ಸೂಕ್ತವೆನಿಸಿತು. 'ಕರ್ಣಾಟಭಾರತ ಕಥಾಮಂಜರಿ'ಗೆ ಸಹೃದಯರು 'ಗದುಗಿನ ಭಾರತ' ಎಂದು ಕರೆದಂತೆಯೇ, 'ತೇನೆಹಕ್ಕಿ' ಕವಿತೆಯನ್ನು ಸಹೃದಯತೆಯಿಂದ ನಾನು 'ಏಕಲವ್ಯನ ಪ್ರಾರ್ಥನಾಗೀತೆ' ಎಂದು ಕರೆಯುತ್ತೇನೆ.

'ಪೊಂಗುಳಿ ಅಥವಾ ಮಳೆ ಕೋಗಿಲೆ' ಕವಿತೆಯ ವಿಷಯಕ್ಕೆ ಬಂದರೆ, ಬಹುದೊಡ್ಡ ಗೊಂದಲವನ್ನೇ ಎದುರಿಸಬೇಕಾಗಿದೆ. ಬೆರಳ್ಗೆ ಕೊರಳ್ ನಾಟಕದಲ್ಲಿ ದ್ರೋಣನು ಏಕಲವ್ಯನನ್ನು ಕೇಡಿಗೆ ಸಿಲುಕಿಸುವ ಹುನ್ನಾರದಿಂದ 'ಪೊಂಗುಳಿಯನ್ನು ಹೊಡೆದುರುಳಿಸು' ಎಂದು ಪರೀಕ್ಷೆಯೊಡ್ಡುತ್ತಾನೆ. 'ಅಪರಾಧವಿಲ್ಲದ ಸಾಧುಪಕ್ಷಿಯನ್ನು ಹೊಡೆಯಲಾರೆ' ಎಂದು ಏಕಲವ್ಯ ಗುರುವಚನ ಧಿಕ್ಕರಿಸುತ್ತಾನೆ. 'ಪೊಂಗುಳಿ'ಗೆ ಇರುವ ಮತ್ತೊಂದು ಹೆಸರು 'ಮಳೆಕೋಗಿಲೆ...' ಹೆಚ್ಚು ಪರಿಚಿತವಾದ ಕಪ್ಪು ಕೋಗಿಲೆಗೂ, ಮಳೆ ಕೋಗಿಲೆಗೂ ಯಾವ ಸಂಬಂಧವೂ ಇಲ್ಲ. ಹಾಗಾದರೆ, ಪೊಂಗುಳಿ ಅಥವಾ ಮಳೆ ಕೋಗಿಲೆ ಯಾವುದು? ಇದಕ್ಕೆ ಕವಿ ಕೊಟ್ಟಿರುವ ವಿವರಣೆ ಇಷ್ಟು :

> ನೋಟಕದೂ ಒಂದು ಹದ್ದು!
> ಕವಿಗೊ? – ಚೈತ್ರ ಪಿಕದ ಸದ್ದು!
>
> ಆಲಿಸಯ್ಯ ಮಲೆಯ ಕವಿ;
> ಎನಿತು ಇಂಪು, ಏನು ಸವಿ;
> ದನಿಯ ಜೇನ್ಗೆ ಜಿಹ್ವೆ ಕಿವಿ!
>
> ಮಳೆ ಕೋಗಿಲೆ ಎಂಬ ಹೆಸರು
> ನಿನಗೆ ಕೊಸರೆ? ಅಲ್ಲ, ಮೊಸರು!

ಮಳೆ ಕೋಗಿಲೆಯು ಮಳೆ ಕಾಡುಗಳಲ್ಲಿ ಮಾತ್ರ ವಾಸಿಸುವ ಪಕ್ಷಿ. ಬಯಲು ಸೀಮೆಯ ಕೋಲಾರದಲ್ಲಿ ಈ ಹಕ್ಕಿ ಇಲ್ಲ. ನನಗೆ ಬಹು ದಿನಗಳವರೆಗೆ ಈ ಹಕ್ಕಿ ಯಾವುದೆಂದು ತಿಳಿದಿರಲಿಲ್ಲ. ಒಮ್ಮೆ ಮಳೆ ಕಾಡುಗಳಲ್ಲಿ ಚಾರಣ ಮಾಡುತ್ತಿದ್ದಾಗ, ಕಿವಿಗೆ ಕೇಳಿಬಂದ 'ಚೀರುಲಿ'ಗೆ ಆಕರ್ಷಿತರಾಗಿ ಅತ್ತ ತಿರುಗಿ ನೋಡಿದಾಗ ಸಲೀಂ ಆಲಿ ಭಾಷೆಯಲ್ಲಿ ಹೇಳುವುದಾದರೆ, 'ಮಲಬಾರ್ ಪೈಡ್ ಹಾರ್ನ್‌ಬಿಲ್' ಕಣ್ಣಿಗೆ ಬಿತ್ತು. ನಮ್ಮ ಜೊತೆಯಲ್ಲಿದ್ದ ಗಿರಿಜನ ದಂಪತಿಗಳು ಅದೊಂದು ಪರಿಚಿತ ದೃಶ್ಯವೆಂಬಂತೆ ಸ್ಪಂದಿಸುತ್ತಾ 'ಮಳೆ ಕೋಗಿಲೆ' ಎಂದು ನುಡಿದರು. ಆಗ ನನ್ನ ಸಮಸ್ಯೆ ಬಗೆಹರಿದು ನಿಧಿ ಸಿಕ್ಕಷ್ಟು ಸಂತೋಷವಾಯಿತು. ಇದೇ ಹಕ್ಕಿಯನ್ನು ತೇಜಸ್ವಿ ಅವರು 'ಕನ್ನಡ ನಾಡಿನ ಹಕ್ಕಿಗಳು' ಪುಸ್ತಕದಲ್ಲಿ ದಾಸಮಂಗಟ್ಟೆ ಎಂದು ಕರೆದಿದ್ದು ಮತ್ತೊಂದು ಪ್ರಭೇದವನ್ನು ಬೂದುಮಂಗಟ್ಟೆ ಎಂದು ಕರೆದಿದ್ದಾರೆ. ಮಲೆನಾಡಿನಲ್ಲಿ ಶಿಷ್ಟ ಜನರು ಮಂಗಟ್ಟೆ ಎಂದು ಕರೆಯುವ ಹಕ್ಕಿಯನ್ನೇ ಅದೇ ಮಲೆನಾಡಿನ ಗಿರಿಜನರು (= ಮಲೆ ಕುಡಿಯರು, ಜೇನುಕುರುಬರು) 'ಪೊಂಗುಳಿ ಅಥವಾ ಮಳೆ ಕೋಗಿಲೆ' ಎಂದು ಕರೆಯುತ್ತಾರೆ. ಈ ಜಾತಿಯ ಹಕ್ಕಿಯನ್ನೇ 'ಕೊಡಲಿ ಕೊಕ್ಕು, ಓಂಗಿಲೆ, ಕೊಕ್ಕಾನಕ್ಕಿ' ಎಂದು ಮುಂತಾಗಿ ಕರೆಯುವರು. ಗಿರಿಜನರು ಹೇಳುವ ಪ್ರಕಾರ ಮಳೆಕೋಗಿಲೆಯು ಒಣಗಿದ ಕೊಂಬೆಯ ಮೇಲೆ ಕುಳಿತು ಕೂಗಿದರೆ ಮಳೆ ಬರುತ್ತದೆಯೆಂಬ ನಂಬಿಕೆಯಿದೆ. ಈ ಜನಪದ ನಂಬಿಕೆಯಿಂದಲೂ 'ಮಳೆ ಕೋಗಿಲೆ' ಎಂಬ ಹೆಸರು ಬಂದಿದೆ. ಇದನ್ನು ಕೂಡ ಕುವೆಂಪು ರೂಪಕ ಮಾಡಿಕೊಂಡು ಮಾನವ ಜೀವನಕ್ಕೆ ಅನ್ವಯಿಸಿ ಹಾಡಿದ್ದಾರೆ :

ನಿನ್ನ ಉಲಿಹು ಸಗ್ಗದ ಕರೆ;
ಆಲಿಸುತಿದೆ ನಮ್ಮೀಧರೆ
    ಹಾರು, ಹಾಡು ಪೊಂಗುಳಿ!
ಬಾಳ ಕಣಿವೆಯಲ್ಲಿ ತೊಳಲಿ
ನಡೆವ ವೇಳೆ ನಾನು ಬಳಲಿ
    ಇಂತೆ ಬರಲಿ ನಿನ್ನುಲಿ
ಉಲ್ಲಾಸವನೆದೆಗೆ ಮನಕೆ
    ಇಂತೆ ತರಲಿ ಪೊನ್ನುಲಿ!
ಇಂತೆ ನಲಿ, ಇಂತೆ ಉಲಿ
    ಇಂತೆ ಬಾ, ಪೊಂಗುಳಿ!

'ಬರಲಿ ಜಡದ ಬಡತನಕ್ಕೆ ಜೀವದೈಸಿರಿ' – ಎಂಬ ಶೀರ್ಷಿಕೆಯ ಕವಿತೆಯೂ 'ಪೊಂಗುಳಿ ಅಥವಾ ಮಳೆಕೋಗಿಲೆ'ಯನ್ನು ಕುರಿತ ವರ್ಣನೆಯೇ ಆಗಿರುವುದನ್ನು ಆ ಕವಿತೆಯ ನಿಜದ ಓದಿನಿಂದ ಅರಿತುಕೊಳ್ಳಬಹುದು. ಆದ್ದರಿಂದಲೇ, ನಾನು ಆರಂಭದಲ್ಲೇ ತೇನೆ ಹಕ್ಕಿ ಮತ್ತು ಪೊಂಗುಳಿ ಅಥವಾ ಮಳೆ ಕೋಗಿಲೆ ಕವಿತೆಗಳು ಕೇವಲ ಹಕ್ಕಿಯನ್ನು ಕುರಿತು ಹಾಡಿದ ಕವಿತೆಗಳಲ್ಲವೆಂದು ಹೇಳಿರುವುದು.

ಕುವೆಂಪು ಸಮಗ್ರ ಸಾಹಿತ್ಯವನ್ನು ತನ್ನೊಳಗೆ ಗರ್ಭೀಕರಿಸಿಕೊಂಡಿರುವ ಬೀಜರೂಪಿ ಕವಿತೆಗಳನ್ನಾಗಿ 'ಹೀರೆಯಹೂವು' ಮತ್ತು 'ಗೊಬ್ಬರ'ಗಳನ್ನು ಅರಿತುಕೊಳ್ಳಬೇಕು. ಇವೆರಡು ಕವಿತೆಗಳಿಗೆ ತೊಡಿಸಿದ ಕಥನ ಶರೀರವೇ ಕುವೆಂಪು ಕಾದಂಬರಿಗಳು. ಕುವೆಂಪು ಸಮಗ್ರ ಸಾಹಿತ್ಯದ ವಸ್ತು ಯಾವುದು? ಎಂಬ ಪ್ರಶ್ನೆಗೆ 'ಹೀರೆಯ ಹೂವು' ಎಂಬುದೇ ಉತ್ತರ. ಹೀರೆಯ ಹೂವನ್ನು ಯಾರೂ ಕಣ್ಣೆತ್ತಿಯೂ ನೋಡುವುದಿಲ್ಲ. ಗುಡಿ ಸೇರದ, ಮುಡಿಯೇರದ ಹೀರೆಯ ಹೂವು ಯಾರಿಗೂ ಬೇಡವಾದ ಅಲಕ್ಷಿತ ವಸ್ತು. ಆದರೆ, ಹೂವಡಗಿ ಫಲದೋರುವ ಹೀರೆಯ ಕಾಯಿ ಎಲ್ಲರಿಗೂ ಬೇಕು. ಈ ವೈಪರೀತ್ಯವನ್ನು ಕುವೆಂಪು ಹೊಟ್ಟೆಯ ತತ್ವವನ್ನಾಗಿ, ಉಪಭೋಗ ಸಿದ್ಧಾಂತದ ಹಿನ್ನೆಲೆಯಲ್ಲಿ ನಿರೂಪಿಸಿದ್ದಾರೆ. ಈ ದೃಷ್ಟಿಯಿಂದ ಹೀರೆಯ ಹೂವು ಅಲಕ್ಷಿತ ಜನಸಮುದಾಯಗಳ, ಶ್ರಮಜೀವಿಗಳ ದುಡಿಮೆಗೆ ರೂಪಕವಾಗಿ ಕಾಣುತ್ತದೆ. ಇಂಥ ಹೀರೆಯ ಹೂವುಗಳನ್ನೇ ಕುವೆಂಪು ತಮ್ಮ ಸಮಗ್ರ ಸಾಹಿತ್ಯದ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ. 'ಬಡತನವು ಸಾಹಿತ್ಯದ ಸಾರ್ವಭೌಮವಸ್ತು' ಎಂದು ಸಾರಿ ಹೇಳಿದ ಬೇಂದ್ರೆ ನುಡಿಗೆ ಸಮಾನ ಧರ್ಮವೆಂಬಂತೆ ಹೀರೆಯ ಹೂವುಗಳನ್ನು ಅರಿತುಕೊಳ್ಳಬೇಕು.

ಹೀರೆಯ ಹೂವುಗಳೆಂದರೂ ಒಂದೇ! ಕೀಳು ಎಂದರೂ ಒಂದೇ! 'ಕೀಳಿಂಗಲ್ಲದೆ ಹಯನು ಕರೆಯದು ಕಾಣಾ' – ಎಂಬಂತೆ ಹೂವುಗಳೆಂಬ ಕೀಳಿಂಗೆ ಕುವೆಂಪು ಸಾಹಿತ್ಯವೆಂಬ ಹಯನು ಕೆಚ್ಚಲಾಗಿ ನಿಂತು ಮಾನವ ದಯಾಮೃತದ ಕರಾವು ಕೊಟ್ಟಿದೆ. ಕೀಳು ಡೋಹರ ಕಕ್ಕ, ಕೀಳು ಮಾದರ ಚನ್ನ ಕೀಳು ಓಹಿಲದೇವ, ಕೀಳು ಉದ್ಭಟಯ್ಯ, ಕೀಳಿಂಗಲ್ಲದೆ ಹಯನು ಕರೆಯದು ಕಾಣಾ ರಾಮನಾಥ ಎಂಬ ವಚನವನ್ನು ಹೀಗೆ ಪರಿವರ್ತಿಸಬಹುದು:

ಕೀಳು ನಿಂಗ, ಕೀಳು ಸೋಮ, ಕೀಳು ಕರಿಸಿದ್ಧ – ಗಿಡ್ಡಿ
ಕೀಳು ನಾಯಿಗುತ್ತಿ – ತಿಮ್ಮ, ಕೀಳು ಐತ – ಪೀಂಚಲು,
ಕೀಳು ಜಲಗಾರ, ಕೀಳು ಶೂದ್ರ ತಪಸ್ವಿ
ಕೀಳು ಮಂಥರೆ, ಕೀಳು ಕಾಜಾಣ
ಕೀಳಿಂಗಲ್ಲದೆ ಹಯನು ಕರೆಯದು ಕಾಣಾ ಕಿಸೋರ ಚಂದ!

ನಾಲ್ಕು

ಕುವೆಂಪು ಸಾಹಿತ್ಯ ಪರಿಶೀಲನೆಯಲ್ಲಿ ದಲಿತ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ಸ್ತ್ರೀವಾದಿ ಪ್ರಜ್ಞೆ, ಬಂಡಾಯ ಪ್ರಜ್ಞೆ, ಮುಸ್ಲಿಂ ಪ್ರಜ್ಞೆ, ಪರಿಸರ ಪ್ರಜ್ಞೆ, ಜಾನಪದ ಪ್ರಜ್ಞೆ ಎಂಬಂತೆ ಸೀಳು ಸೀಳಾಗಿ ನೋಡುವುದು ಸರಿಯಲ್ಲ. ಸೀಳು ವ್ಯಕ್ತಿತ್ವ (=ಸ್ಪ್ಲಿಟ್ ಪರ್ಸನಾಲಿಟಿ) ಮಾನಸಿಕ ರೋಗವಾಗಿರುವಂತೆಯೇ ಸೀಳು-ಸೀಳು ಸಂವೇದನೆಗಳೂ ಸಂಸ್ಕೃತಿ ಚಿಂತನೆಯ ರೋಗವಾಗಿದೆ.

ಸ್ವಯಂ ಚಾಲಿತ ಯಂತ್ರಜ್ಞಾನವು ಕೈಗಾರಿಕೀಕರಣಕ್ಕೆ ಆಧಾರ. ಇದರ ರಭಸಮತಿಯಲ್ಲಿ ಇಕಾಲಜಿಯ ಮಾರಣಹೋಮವೇ ಆಗಿಹೋಯ್ತು. ಉಪಗ್ರಹ ಚಾಲಿತ ತಂತ್ರಜ್ಞಾನವು ಜಾಗತೀಕರಣಕ್ಕೆ ಆಧಾರ. ಇದರ ರಭಸಮತಿಯಲ್ಲಿ ಇಕಾಲಜಿಯ ವಂಶನಾಶವೇ ಆಗುತ್ತಿದೆ. ಕೈಗಾರಿಕೀಕರಣ ಮತ್ತು ಜಾಗತೀಕರಣ – ಇವೆರಡೂ ಅವಧಿಯಲ್ಲಿ ತೀವ್ರ ನಿರ್ಲಕ್ಷ್ಯಕ್ಕೆ ಒಳಗಾದದ್ದು ಇಕಾಲಜಿಯೇ ಆಗಿದೆ. ಒಂದು ದೇಶದ ಎಕಾನಮಿಗೆ ಇಕಾಲಜಿ ಅಡಿಪಾಯವಾಗಿ ನಿಲ್ಲದಿದ್ದರೆ ಎಂಥ ಅನಾಹುತವಾಗುತ್ತದೆ ಎಂಬುದಕ್ಕೆ ನಾವು ಅನುಸರಿಸುತ್ತಿರುವ ಪ್ರಗತಿ ಮೀಮಾಂಸೆಯೇ ಪ್ರತ್ಯಕ್ಷ ನಿದರ್ಶನವಾಗಿದೆ. ಇದನ್ನು ಬಹು ಚೆನ್ನಾಗಿ ಮನಗಂಡಿದ್ದ ಕುವೆಂಪು ಆಧುನಿಕ ಸಮಾಜ ನಿರ್ಮಾಣಕ್ಕೆ ಅತ್ಯಗತ್ಯವಾದ ಇಕಾಲಜಿಯ ಮುಂಗಾಣ್ಕೆಯನ್ನು ತಮ್ಮ ಸಮಗ್ರ ಸಾಹಿತ್ಯದಲ್ಲಿ ನೀಡಿದ್ದಾರೆ. ಇಡೀ ಜೀವಜಾಲದ ನೆಟ್‌ವರ್ಕ್ ಆಧುನಿಕ ಸಮಾಜ ನಿರ್ಮಾಣಕ್ಕೆ ಯಾಕೆ ಅಗತ್ಯವೆಂಬುದನ್ನು ಸುಸ್ಪಷ್ಟವಾಗಿ ಮನಗಾಣಿಸುವ ಕುವೆಂಪು ಕಾವ್ಯದ ಧಾತು ಮತ್ತು ಧೋರಣೆಗಳು ನಿತ್ಯನೂತನವಾಗಿವೆ.



೧೬, ಶ್ರೀಗೌರಿ, ೪ನೇ ಕ್ರಾಸ್,
ಕನಕನಗರ, ಹೊಸಕೋಟೆ - ೫೬೨ ೧೧೪

ದಿನಾಂಕ ೮-೧-೨೦೧೧ರಂದು ಸಂಚಯ ಮತ್ತು ಸುಚಿತ್ರ ಕಲಾಕೇಂದ್ರ, ಬೆಂಗಳೂರು ಇವರು ಜಂಟಿಯಾಗಿ ಆಯೋಜಿಸಿದ್ದ 'ಸಾಹಿತ್ಯ ಸಂಜೆ' ಕಾರ್ಯಕ್ರಮದಲ್ಲಿ 'ಕುವೆಂಪು ಸಾಹಿತ್ಯ ಸರಣಿ' ಪ್ರಯುಕ್ತ – ಕುವೆಂಪು ಕಾವ್ಯ ಕುರಿತು ಮಾಡಿದ ಭಾಷಣವನ್ನು ಆಧರಿಸಿದ ಲೇಖನವಿದು.



ಅಕ್ಕಮಹಾದೇವಿ ವ್ಯಕ್ತಿ ಮತ್ತು ಅಭಿವ್ಯಕ್ತಿ

ಡಾ.ಮ.ನ. ಜವರಯ್ಯ

ಮೂಲತಃ ಸುಂದರಿಯಾಗಿದ್ದ ಅಕ್ಕಮಹಾದೇವಿಯನ್ನು ಕಂಡು ಕೌಶಿಕನೆಂಬ ದೊರೆ ವ್ಯಾಮೋಹಿತನಾಗಿದ್ದನೆಂಬುದು ಅಕ್ಕನನ್ನು ಕುರಿತ ಚರಿತ್ರೆಯಲ್ಲಿ ತುಂಬಾ ಜನಜನಿತವಾದ ಸಂಗತಿಯೇ ಆಗಿದೆ. ಆದರೆ, ವಾಸ್ತವವಾಗಿ ಆಕೆಯ ವೈವಾಹಿಕ ಜೀವನವೆಂಬುದು ಏನಾಗಿತ್ತೆಂಬುದು ಮಾತ್ರ ಇಂದಿಗೂ ನಿರ್ಧಾರಿತವಾಗಿ ಹೇಳಲಾಗದ ಸಂಗತಿಯೂ ಆಗಿದೆ. ಹರಿಹರ ಮತ್ತು ಆನಂತರದ ಶೂನ್ಯ ಸಂಪಾದನೆಗಳಲ್ಲೂ ಈ ಬಗ್ಗೆ ಖಚಿತವಾದ ಮಾಹಿತಿಗಳಾಗಲಿ ಪುರಾವೆಗಳಾಗಲೀ ಇರುವಂತಿಲ್ಲ. ಈ ಅಂಶವನ್ನು ಪ್ರಾಸ್ತಾಪಿಸುತ್ತಿರುವುದಕ್ಕೆ ಮುಖ್ಯವಾದ ಕಾರಣ, ಕಲ್ಪನಾತೀತವಾದ ಆಕೆಯ ಆಧ್ಯಾತ್ಮ ಜೀವನಪೂರ್ವದ ಕಾರಣಗಳು ಅಥವಾ ಪ್ರೇರಣೆಗಳು ಏನಿರಬೇಕೆಂಬುದು. ಕೆಲವರ ಪ್ರಕಾರ ಅಕ್ಕ ಮತ್ತು ಕೌಶಿಕನ ನಡುವೆ ವಿವಾಹವಾಗಿತ್ತು ಎಂಬುದು ಅಗಿರಲಿಲ್ಲವೆಂದು, ಮತ್ತೆ ಕೆಲವರು ವಿವಾಹವಾಗಿದ್ದರೂ ಅವರಿಬ್ಬರ ನಡುವೆ ದಾಂಪತ್ಯ ಜೀವನದ ಸಂಘರ್ಷವಿತ್ತು ಎಂಬುದು ಮಾತ್ರ ಅಂತಿಮವಾಗಿ ಪ್ರಾಪ್ತವಾಗುವ ಸಂಗತಿ. ಈ ಸಂಗತಿಯು ವಾಸ್ತವ ಸತ್ಯವೇ ಆಗಿದ್ದಿರಬೇಕೆಂದು ನಿರ್ಧರಿಸಲು ಮುಖ್ಯ ಕಾರಣ, ಪ್ರಾಯಶಃ ಅಕ್ಕನು ಪ್ರಾಪಂಚಿಕ ಜೀವನವನ್ನು ತಿರಸ್ಕರಿಸಿ ಸನ್ಯಾಸಿನಿಯಾಗಿ ಆಧ್ಯಾತ್ಮ ಜೀವನವನ್ನು ಪ್ರವೇಶಿಸಿರಬೇಕೆಂಬ ತೀರ್ಮಾನಕ್ಕೆ ಬರಲು ತುಂಬಾ ಬಲಿಷ್ಠವಾದ ಕಾರಣಗಳೇ ಇರುವಂತೆ ತೋರುತ್ತದೆ. ಅಲ್ಲದೆ ಹರಿಹರ, ಮತ್ತು ಆನಂತರದ ಶೂನ್ಯಸಂಪಾದನೆಕಾರರು ಚೆನ್ನಬಸವಾಂಕ, ಎಂ.ಆರ್. ಶ್ರೀನಿವಾಸಮೂರ್ತಿ ಮತ್ತು ಎಂ.ಚಿದಾನಂದಮೂರ್ತಿ ಮುಂತಾದವರು, ಕೌಶಿಕನೊಡನೆ ಅಕ್ಕಮಹಾದೇವಿಯ ವಿವಾಹವಾಗಿತ್ತೆಂದು ಹೇಳುತ್ತಾರೆ. ತದನಂತರದ ಶೂನ್ಯಸಂಪಾದನೆಕಾರರು, ವಿರೂಪಾಕ್ಷ ಪಂಡಿತ, ಯಳಂದೂರು ಹರೀಶ್ವರ, ರಾಚಕವಿ, ಆರ್.ಸಿ. ಹಿರೇಮಠ, ಮತ್ತು ಎಚ್.ತಿಪ್ಪೇರುದ್ರಸ್ವಾಮಿ ಮೊದಲಾದವರೂ ಸಹ ಕೌಶಿಕ ಮತ್ತು ಅಕ್ಕಮಹಾದೇವಿಯ ನಡುವೆ ಸಮರಸ

ದಾಂಪತ್ಯ ಜೀವನವೆಂಬುದು ಇರಲಿಲ್ಲವೆಂಬ ತೀರ್ಮಾನಕ್ಕೆ ಬರುತ್ತಾರೆ(ಕನ್ನಡ ಸಾಹಿತ್ಯ ಚರಿತ್ರೆ, ಪು. ೪೮೪). ಹಾಗಾಗಿ, ಈ ಚರ್ಚೆಯಲ್ಲಿ ಸತ್ಯವನ್ನು ಹುಡುಕುವುದು ಅಸಾಧ್ಯವೆನಿಸಿದರೂ, ಅಕ್ಕನು ಶಿವನನ್ನೇ ಪತಿಯನ್ನಾಗಿ ಸ್ವೀಕರಿಸಿದಳೆಂಬುದಕ್ಕೆ ಅಕ್ಕನ ವಚನಗಳಲ್ಲೇ ಆಧಾರಗಳಿವೆ. ಆದರೆ, ಶಿವನೊಡನೆ ಅಕ್ಕನ ದಾಂಪತ್ಯ ಜೀವನ ವಾಸ್ತವ ಸತ್ಯವೆ ಎಂಬ ಪ್ರಶ್ನೆಗಿಂತ, ಅಕ್ಕನು ಶಿವನೊಡನೆ ಆಧ್ಯಾತ್ಮ ಜೀವನ ಅಥವಾ ಭಕ್ತಿ ಜೀವನವನ್ನೇ ನಡೆಸಿದಳು ಎಂಬ ತೀರ್ಮಾನವೇ ಅಂತಿಮವಾದುದು ಎಂದೆನಿಸುತ್ತದೆ. ಆದರೆ, ಅಕ್ಕನು ಈ ಸಾಂಸಾರಿಕ ಜೀವನನ್ನು ತಿರಸ್ಕರಿಸಲು ಕಾರಣವೇನೆಂಬ ಪ್ರಶ್ನೆಗೆ, ಪ್ರಾಯಶಃ ಗಂಡ-ಹೆಂಡಿರ ನಡುವೆ ಪರಸ್ಪರ ಅರ್ಥವಂತಿಕೆ ಅಸಾಧ್ಯವಾದುದೇ ಕಾರಣವಾಗಿರ ಬೇಕೆಂಬುದಕ್ಕೆ, ಲೌಕಿಕ ಪತಿಯೊಂದಗಿನ ಜೀವನನ್ನು ತಿರಸ್ಕರಿಸುವ ಅಕ್ಕನ ಹಲವಾರು ವಚನಗಳಲ್ಲಿ ಈ ಪ್ರಶ್ನೆಗೆ ಉತ್ತರ ಶೋಧಿಸುವುದೇ ಸೂಕ್ತ ಎಂದೆನಿಸುವಂತಿದೆ.

ಅಕ್ಕಮಹಾದೇವಿಯು ವಸ್ತ್ರವಿರಕ್ತಳಾದ ಒಂದು ಕಾಲ್ಪನಿಕ ಸಂಗತಿಯನ್ನು ಆಧರಿಸಿ, ಡಾ.ಎಚ್.ತಿಪ್ಪೇರುದ್ರಸ್ವಾಮಿಯವರು ಕಟ್ಟಿಕೊಡುವ ಮತ್ತೊಂದು ಎಪಿಸೋಡ್ ಇಲ್ಲಿ ಚರ್ಚಾರ್ಹ ಎಂದೆನಿಸುತ್ತದೆ (ಅದೇ. ಪು. ೪೮೫) ಪತ್ನಿಯೊಡನೆ ಸರಿಯಾಗಿ ನಡದುಕೊಳ್ಳದೇ ಹೋದಂತಹ ಪತಿ ಕೌಶಿಕನನ್ನು ತಿದ್ದುವ ಸಲುವಾಗಿ ಅಕ್ಕಮಹಾದೇವಿಯು ಅವನ ಅರಮನೆಗೆ ಹೋಗಿರಬೇಕೆಂದು , ಅಲ್ಲಿ ಅವನು ಅವಳ ಸೆರಗನ್ನು ಹಿಡಿದು ಎಳೆದಾಡಿ ಅನುಚಿತವಾಗಿ ನಡೆದುಕೊಂಡ ಕಾರಣ, ಅವಳು ತನ್ನ ಮೈಮೇಲಿದ್ದ ಸೀರೆಯನ್ನೇ ತೊರೆದು ಬಿಸಾಡಿ ಹೋಗಿರಬೇಕೆಂಬ ಈ ಎಪಿಸೋಡ್ ಸತ್ಯಕ್ಕೆ ಹೆಚ್ಚು ಹತ್ತಿರುವೂ ಚರ್ಚಾರ್ಹವೂ ಆದುದೆನಿಸುತ್ತದೆ. ಈ ಘಟನೆಯಲ್ಲಿ ಇನ್ನೂ ಎರಡು ಮಹತ್ವದ ಸಂಗತಿಗಳು ಅಡಗಿರುವಂತೆ ತೋರುತ್ತದೆ. ಮೊದಲನೆ ಸಂಗತಿಯೆಂದರೆ ಅಕ್ಕಮಹಾದೇವಿಯು ಹುಟ್ಟಿನಿಂದ ರಾಜಮನೆತನಕ್ಕೆ ಸೇರಿದವಳಾಗಿರಬೇಕೆಂಬುದು ಇದರಿಂದ ದೃಢಪಡುತ್ತದೆ. ಹಾಗೆಯೇ, ಎರಡನೆ ಸಂಗತಿಯೆಂದರೆ, ಗಂಡನಾದವನು ನೀಡುವ ಯಾವುದೇ ರೀತಿಯ ಕಿರುಕುಳಗಳನ್ನೆಲ್ಲಾ ಸಹಿಸಿಕೊಂಡು ಬದುಕುವಂಥ ದುರ್ಬಲ ಮತ್ತು ಸಾಂಪ್ರದಾಯಿಕ ಮನಸ್ಥಿತಿಯ ಹೆಣ್ಣು ಅಕ್ಕಮಹಾದೇವಿ ಆಗಿರಲಿಲ್ಲವೆಂಬುದಾಗಿ ಕಲ್ಪಿಸಿಕೊಳ್ಳುವುದಕ್ಕೂ ಆಕೆಯ ವಚನಗಳೇ ಮೂಲ ಆಧಾರವೆಂದು ತೋರುತ್ತದೆ. ಅಕ್ಕಮಹಾದೇವಿಯು ಲೌಕಿಕ ಜೀವನದ ಪುರುಷನನ್ನು ಜರಿಯುತ್ತ ಮತ್ತು ತಿರಸ್ಕರಿಸುತ್ತ ನಡೆಯುವುದನ್ನು ಶಿವನನ್ನು ಮಾತ್ರ ತನ್ನ ಪತಿಯೆಂದು ಬಣ್ಣಿಸಿ, ಆರಾಧಿಸುವ ಚಿತ್ರಣವು ಅಕ್ಕನ ವಚನಗಳ ಸಾಮಾನ್ಯ ಓದಿನಿಂದಲೂ ಅವುಗಳನ್ನು ಕುರಿತ ಪ್ರಾಯೋಗಿಕ ವಿಮರ್ಶೆಯಿಂದಲೂ ದೃಢಪಡುತ್ತದೆ.

ಅಕ್ಕಮಹಾದೇವಿಯನ್ನು ವಿವಾಹವಾಗಿದ್ದವನು ಕೌಶಿಕನೆಂಬ ಕಸಪಯ್ಯ ನಾಯಕನ ಜೀವನದ ಸುತ್ತಲೂ ಹಲವಾರು ರಾಜಕೀಯ ಕಗ್ಗಂಟುಗಳು ಚರಿತ್ರೆಯಲ್ಲಿ ಕಂಡುಬರುತ್ತವೆ. ಅದರಲ್ಲಿ ಬಿಜ್ಜಳನ ಮೊದಲ ಮಗನಾದ ವಜ್ರದೇವನ ಮಗನಾದ ಕರ್ಣನನ್ನು ಬಿಜ್ಜಳನ ವಿರುದ್ಧವೇ ಎತ್ತಿಕಟ್ಟಿ ಅವನ ರಾಜ್ಯವನ್ನೇ ಅಪಹರಿಸುವ ಪ್ರಯತ್ನ ಮಾಡಿ ವಿಫಲನಾದ ಎಂಬುದಾಗಿ ಚರಿತ್ರೆ ಹೇಳುತ್ತದೆ. (ಕ.ಸಾ.ಚ. ಪು. ೪೮೭) ಕೌಶಿಕ ಅಥವಾ ಕಸಪಯ್ಯ ಜೈನನೆಂತಲೂ ಅದೇ ಚರಿತ್ರೆ ಹೇಳುತ್ತದೆ. ಅವನ ಜೀವನದ ಸುತ್ತಲೂ ಹರಡಿಕೊಳ್ಳುವ ಈ ರೀತಿಯ ರೋಚಕ ಚರಿತ್ರೆಯನ್ನು ನೋಡಿದರೆ, ಅಕ್ಕಮಹಾದೇವಿಯು ಪತಿಯನ್ನಾಗಿ ಅವನನ್ನು ತಿರಸ್ಕರಿಸಲು ಇದೂ ಒಂದು ಬಲವಾದ ಕಾರಣವಾಗಿರಬಹುದೆ ಎಂದೆನಿಸುತ್ತದೆ. ಕೌಶಿಕನನ್ನು ಹಾಗೆ ತಿರಸ್ಕರಿಸಲು ಇದೂ ಒಂದು ಬಲವಾದ ಕಾರಣವಾಗಿರಬಹುದೆ ಎಂದೆನಿಸುತ್ತದೆ. ಕೌಶಿಕನನ್ನು ಹಾಗೆ ತಿರಸ್ಕರಿಸಬಹುದಾದ ಅಕ್ಕಮಹಾದೇವಿಯು ತದನಂತರ ಕಲ್ಯಾಣಕ್ಕೆ ಹೋದನಂತರ

ಅವಳಿಗೆ ಶಿವಶರಣರ ಬೆಂಬಲ ದೊರೆತದ್ದು ಮಾತ್ರವಲ್ಲದೆ, ಕಲ್ಯಾಣದ ಅಧಿರಾಜನಾದ ಬಿಜ್ಜಳನು ತದನಂತರದ ರಾಜಕೀಯ ಬೆಳವಣಿಗೆಯಲ್ಲಿ ಕೌಶಿಕನನ್ನೂ, ಅವನಿದ್ದ ಅಧಿಕಾರದಿಂದ ತೆಗೆದು ಹಾಕಿರಲೂ ಬಹುದೆಂಬುದಾಗಿಯೂ ತಿಳಿದುಬರುತ್ತದೆ. ಚರಿತ್ರೆಯಲ್ಲಿ ದಾಖಲಾಗಿರುವ ಇಂತಹ ವಿವರಗಳನ್ನೆಲ್ಲಾ ಪರಿಶೀಲಿಸಿದ ಬಳಿಕ, ಪ್ರಾಯಶಃ ಅಕ್ಕಮಹಾದೇವಿಯ ದಾಂಪತ್ಯ ಜೀವನವೆಂಬುದು ಸಾಕಷ್ಟು ಸಂಘರ್ಷಗಳಿಂದಲೇ ನಡೆದಿರಬೇಕೆಂಬುದು ದೃಢಪಡುತ್ತದೆ. ಅಲ್ಲದೆ, ಅಕ್ಕಮಹಾದೇವಿಯ ವಚನಗಳಲ್ಲಿ ವ್ಯಕ್ತವಾಗಿರುವ ಲೋಕಜೀವನ ಕುರಿತ ವೈರುಧ್ಯಗಳ ವಿರುದ್ಧದ ಅವಳ ವಿಡಂಬನೆ ಮತ್ತು ಆಕ್ರೋಶಗಳಿಗೆಲ್ಲ ಆಕೆಯ ವ್ಯಕ್ತಿಜೀವನದ ಹೋರಾಟವೇ ಮೂಲ ಕಾರಣವಾಗಿರಬೇಕೆಂದು ತೋರುತ್ತದೆ.

ಪತಿಯಾದ ಕೌಶಿಕನ ಬಗೆಗೆ ಅಸಮಾಧಾನಗೊಂಡಿದ್ದರಬಹುದಾದ ಅಕ್ಕಮಹಾದೇವಿಯ ಸೆರಗಿಡಿದು ಎಳೆದಾಡಿಬಹುದಾದ ಪತಿಯ ವರ್ತನೆಯಿಂದ ಬೇಸತ್ತುಹೋಗಿ, ತನ್ನ ಮೈಮೇಲಿನ ವಸ್ತ್ರಸಮಸ್ತವನ್ನೂ ತಿರಸ್ಕರಿಸಿದ ಅಕ್ಕಮಹಾದೇವಿಯು ದಿಗಂಬರೆಯಾದ ಘಟನೆಯಂತೂ, ಆಕೆಯ ವಚನಗಳಲ್ಲಿ ಅನ್ಯ ರೂಪದಲ್ಲಿ ವ್ಯಕ್ತವಾಗಿರುವುದನ್ನೇ ಕಾಣಬಹುದಾಗಿದೆ:

"ಕೈಸಿರಿಯ ದಂಡವ ಕೊಳಬಹುದಲ್ಲದೆ
ಮೈಸಿರಿಯದಂಡವ ಕೊಳಲುಂಟೆ?
ಉಟ್ಟಂತ ಉಡಿಗೆ ತೊಡಿಗೆಯನ್ನೆಲ್ಲಾ ಸೆಳೆದುಕೊಳಳಬಹುದಲ್ಲದೆ
ಮುಚ್ಚಿ ಮುಸುದಿರ್ದ ನಿರ್ವಾಣವ ಸೆಳೆದುಕೊಳ್ಳಬಹುದೆ?
ಚನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ
ಉಡಿಗೆ ತೊಡಿಗೆಯ ಹಂಗೇಕೋ ಮರುಳೆ?" *(ವಚನ-೧೨೪)*

(ಅಕ್ಕನ ವಚನಗಳು: ಡಾ. ಎಲ್. ಬಸವರಾಜು)

ಸಾಕಷ್ಟು ಪ್ರಬುದ್ಧವಾಗಿಯೇ ರಚಿಸಲಾಗಿರುವ ಅಕ್ಕನ ಈ ವಚನವನ್ನು ಪ್ರಾಯೋಗಿಕ ವಿಮರ್ಶೆಗೆ ಒಳಪಡಿಸುವುದರಿಂದ ಕೆಲವು ಚಿಂತನಾರ್ಹ ಅಂಶಗಳು ಧ್ವನಿತವಾಗುವಂತೆ ತೋರುತ್ತದೆ. ಉಡಿಗೆ ಮತ್ತು ತೊಡಿಗೆಗಳ ಹಂಗನ್ನು ತೊರೆದಿರುವ ಅಕ್ಕಮಹಾದೇವಿ ದಿಗಂಬರೆಯಾದುದು ಆ ಕುರಿತ ಚರಿತ್ರೆಯಲ್ಲಿ ಜನಜನಿತವಾದ ಸಂಗತಿ. ಅವಳು ಹಾಗೆ ದಿಗಂಬರೆಯಾದ ಪ್ರತಿಮೆಯಿಂದ ಸಾಹಿತ್ಯಕವಾಗಿ ಇಲ್ಲಿ ಎರಡು ಅಂಶಗಳು ಧ್ವನಿತವಾಗುತ್ತವೆ. ಮೊದಲನೆಯದಾಗಿ, ಪತಿಯು ನೀಡಿರಬಹುದಾದ ಹಿಂಸೆ ಅಥವಾ ದೌರ್ಜನ್ಯದ ವಿರುದ್ಧದ ಬಂಡಾಯದ ಅರ್ಥ ಅದರಲ್ಲಿ ಅಡಗಿದೆ. ಎರಡನೆಯದಾಗಿ, ವಿರಕ್ತ ಅಥವಾ ಸನ್ಯಾಸಿ ಜೀವನದ ಹಾದಿ ಹಿಡಿದ ಅಕ್ಕಮಹಾದೇವಿಯೂ ಹುಟ್ಟಿನಿಂದ ಜೈನಮತಸ್ಥಳಾಗಿರಬಹುದೆ ಎಂತಲೂ ಅನಿಸುತ್ತದೆ. ಆಕೆಯ ಪತಿಯೆನ್ನಲಾಗುವ ಕೌಶಿಕ ಅಥವಾ ಕಸಪಯ್ಯ ನಾಯಕನು ಮೂಲತಃ ಜೈನಮತಸ್ಥ ಎಂತಲೂ ಹೇಳಲಾಗಿರುವುದರಿಂದಲೂ ಈ ಊಹೆಯನ್ನು ಮಾಡಬಹುದಾಗಿದೆ. ಹಾಗೆ ದಿಗಂಬರೆಯಾದ ನಂತರ "ಚೆನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ ಉಡಿಗೆ ತೊಡಿಗೆಯ ಹಂಗೇಕೋ ಮರುಳೆ?" ಎಂದು ಇಡೀ ಮಾನವ ಲೋಕವನ್ನೇ ಛೇಡಿಸುತ್ತಾಳೆ. ಚೆನ್ನ ಮಲ್ಲಿಕಾರ್ಜುನನ ಬೆಳಗನ್ನೇ ಉಟ್ಟುಕೊಂಡ ಆಕೆಯು ಅನುಭವ ಮಂಟಪದಲ್ಲಿ ತುಂಬಾ ಪ್ರಭಾವಿ ಶರಣೆಯೇ ಆಗಿದ್ದಳೆಂಬುದಾಗಿ ತಿಳಿದುಬರುತ್ತದೆ. ಆದರೆ, ಅಕ್ಕಮಹಾದೇವಿಯನ್ನು ಕುರಿತ ಹರಿಹರನ ರಗಳೆಯಲ್ಲಿ ಈ ಎಪಿಸೋಡ್ ಬಿಟ್ಟುಹೋಗಿರುವುದಕ್ಕೆ ಏನೋ ಬಲವಾದ ಕಾರಣವೇ ಇರಬೇಕೆಂತಲೂ

ತೋರುತ್ತದೆ. ಆದರೂ ಅಕ್ಕಮಹಾದೇವಿಯನ್ನು ಕಾಮದ ಪರೀಕ್ಷೆಗೆ ಗುರಿ ಮಾಡಿದ ಕಿನ್ನರಿ ಬೊಮ್ಮಯ್ಯನ ಪ್ರಸಂಗದಲ್ಲಿ ಪತಿಯನ್ನು ತೊರೆದು ವಿರಕ್ತಳಾಗಲು ಬಯಸಿಬಂದ ಅಕ್ಕಮಹಾದೇವಿಯಂಥ ಯಾವುದೇ ಹೆಣ್ಣು ಎದುರಿಸಬೇಕಾಗಿಬರಬಹುದಾದ ಸಾಮಾಜಿಕ ಸಂಘರ್ಷವೇ ಆಗಿದೆ. ಅಲ್ಲದೆ, ಅನುಭವ ಮಂಟಪದಲ್ಲಿ ಕಾಣಿಸಿಕೊಂಡ ಬಹುತೇಕ ಶರಣೆಯರು ಪತಿಯುಳ್ಳವರೇ ಆಗಿದ್ದಾರೆ. ಆದರೆ, ಅಕ್ಕಮಹಾದೇವಿ ಮಾತ್ರ ಪತಿಯನ್ನು ತೊರೆದು ಶರಣೆಯಾದವಳು ಎಂಬುದಾಗಿ ತಿಳಿದುಬರುತ್ತದೆ.

ಅಕ್ಕಮಹಾದೇವಿಯು ತನ್ನ ಲೌಕಿಕ ಜೀವನವನ್ನು ಅಥವಾ ಸಂಸಾರವನ್ನು ತೊರೆದು ಬಸವಕಲ್ಯಾಣವನ್ನು ಪ್ರವೇಶಿಸಿದ ನಂತರ, ಸ್ವತಃ ಅನುಭವ ಮಂಟಪದ ಶರಣ ಸಮೂಹವೇ ತೀವ್ರ ಸಂಕಷ್ಟಕ್ಕೆ ಗುರಿಯಾಗಿರಲೇಬೇಕು. ಏಕೆಂದರೆ, ಅಕ್ಕಮಹಾದೇವಿಯು ಕೇವಲ ಸಂಸಾರವನ್ನಷ್ಟೇ ತೊರೆದು ಬಂದವಳಲ್ಲ, ಸಂಸಾರವೆಂಬ ತನ್ನ ದಾಂಪತ್ಯ ಜೀವನವನ್ನೇ ಧಿಕ್ಕರಿಸಿದುದರ ಪ್ರತೀಕವಾಗಿ ದಿಗಂಬರೆಯಾಗಿ ಕಲ್ಯಾಣವನ್ನು ಪ್ರವೇಶಿಸಿದಳು. ಆಕೆಯು ಹಾಗೆ ಕಲ್ಯಾಣವನ್ನು ಪ್ರವೇಶಿಸುವ ಮೊದಲು ಅನುಭವ ಮಂಟಪವನ್ನು ಸಮಾಜ ಹೇಗೆ ನೋಡುತ್ತಿತ್ತು ಮತ್ತು ಅನುಭವ ಮಂಟಪದ ಬಗೆಗೆ ಸಮಾಜದ ದೃಷ್ಟಿ ಮತ್ತು ಧೋರಣೆ ಹೇಗಿತ್ತು ಎಂಬುದು ಈ ಬಗೆಗೆ ಮೊದಲ ಪ್ರಶ್ನೆ. ತದನಂತರದ ಪ್ರಶ್ನೆಯೆಂದರೆ, ಅಕ್ಕನು ಅನುಭವ ಮಂಟಪವನ್ನು ಹಾಗೆ ಪ್ರವೇಶಿಸಿದ ಬಳಿಕ ಅದೇ ಸಮಾಜವು ಅನುಭವ ಮಂಟಪದ ಬಗೆಗೆ ತಳೆದ ಅಥವಾ ತಳೆಯಬೇಕಾಗಿ ಬಂದ ದೃಷ್ಟಿ ಮತ್ತು ಧೋರಣೆ ಏನೆಂಬುದು. ಏಕೆಂದರೆ ಬೌದ್ಧಿಕ ಶ್ರೇಷ್ಠ ಚಿಂತನೆಗೂ ಮಾನವನ ಔನ್ನತ್ಯಕ್ಕೂ ಹೆಸರಾಗಿದ್ದಂತಹ ಅನುಭವ ಮಂಟಪವನ್ನು ಅಕ್ಕಮಹಾದೇವಿಯು ದಿಗಂಬರೆಯಾಗಿ ಪ್ರವೇಶಿಸಿದ ನಂತರ, ಅನುಭವ ಮಂಟಪದಲ್ಲಿ ಮಾತ್ರವಲ್ಲದೆ, ಇಡೀ ಆ ಪ್ರದೇಶದಲ್ಲೇ ಸಾಮಾಜಿಕ ಅಲ್ಲೋಲ ಕಲ್ಲೋಲವೇ ಉಂಟಾಗಿದ್ದರೆ, ಅದರಲ್ಲಿ ಆಶ್ಚರ್ಯವೂ ಇಲ್ಲ, ಉತ್ಪ್ರೇಕ್ಷೆಯಂತೂ ಸಾಧ್ಯವೇ ಇಲ್ಲ.

ಇಷ್ಟೆಲ್ಲಾ ಆದ ನಂತರವೂ ಅಕ್ಕಮಹಾದೇವಿಯು ಅನುಭವ ಮಂಟಪವನ್ನು ಪ್ರವೇಶಿಸಿದ ನಂತರ ಆಕೆಯು, ಅಪಾರವೂ ಅನುಪಮವೂ ಆದಂತಹ ತೃಪ್ತಿಯನ್ನೇ ಪಡೆದಿದ್ದಳು ಎಂಬುದಕ್ಕೆ ಆಕೆಯ ವಚನಗಳಲ್ಲೇ ಆಧಾರಗಳಿವೆ:

> ''ಕಲ್ಯಾಣವೆಂಬುದಿನ್ನಾರಿಗೂ ಹೋಗಬರದು ಅಸಾಧ್ಯವಯ್ಯ
> ಆಶೆ ಆಮಿಷಗಳನಳಿದವಾಗಲ್ಲದೆ ಕಲ್ಯಾಣದತ್ತಲಡಿಯಿಡಬಾರದು
> ಒಳಹೊರಗು ಶುದ್ಧವಾದಂಗಲ್ಲದೆ ಕಲ್ಯಾಣವ ಹೋಗಬಾರದು
> ನಾನೆಂಬುದ ಹರಿದವಂಗಲ್ಲದೆ ಕಲ್ಯಾಣವ ಹೋಗಬಾರದು
> ಒಳಗು ತಿಳಿದು ಚೆನ್ನಮಲ್ಲಿಕಾರ್ಜುನಂಗೊಲಿದು
> ಉಭಯಲಜ್ಜೆಯಳಿದೆನಾಗಿ ಕಲ್ಯಾಣವ ಕಂಡು
> ನಮೋ ನಮೋ ಎನುತಿರ್ದೆನು'' (ವ. ೧೫೪)

ಶರಣೆಯಾಗಿ ಒಂದು ವ್ಯಕ್ತಿ ನೆಲೆಯಲ್ಲಿ ನಿಂತವಳಾದ ಅಕ್ಕಮಹಾದೇವಿಯ ಈ ವಚನದ ಅಭಿವ್ಯಕ್ತಿಯೊಳಗಿನ ಅರ್ಥ ಮತ್ತು ತಾತ್ಪರ್ಯ ಮುಖ್ಯವಾದುದು. ತನ್ನ ಮುಂದಿನ ಬದುಕಿನ ಹಾದಿಯನ್ನು ಆಯ್ದುಕೊಂಡ ಮಹಾದೇವಿ ಅನುಭವ ಮಂಟಪದಲ್ಲಿ ಏನನ್ನು ನಿರೀಕ್ಷಿಸಿದ್ದಳೆಂಬುದನ್ನು ತನ್ನ ಈ ವಚನದಲ್ಲಿ ವ್ಯಕ್ತಪಡಿಸಿದ್ದಾಳೆ. ಆಶೆ ಮತ್ತು ಆಮಿಷಗಳಂಥ ಅಹಂಕಾರಗಳಿಂದ ವಿಮುಕ್ತವಾದ ವಾತಾವರಣವನ್ನು ಕಲ್ಯಾಣದಲ್ಲಿ ಬಯಸಿದ್ದಳು. ಕಲ್ಯಾಣವೆಂಬುದು ನಿರಂಹಕಾರ ಮತ್ತು ನಿರ್ಮತ್ಸರದ ಶುದ್ಧಾತ್ಮಗಳು

ಕಲ್ಯಾಣದಲ್ಲಿರುವಂತಾಗಲಿ ಎಂಬ ತನ್ನ ಅಭೀಪ್ಸೆಯನ್ನು ಅಕ್ಕಮಹಾದೇವಿ ತನ್ನೊಳಗೇ ನಿರೀಕ್ಷಿಸುತ್ತಾಳೆ, ಆ ಸ್ಥಿತಿಗೆ ತನ್ನನ್ನೇ ಪರೀಕ್ಷೆಗೆ ಒಡ್ಡಿಕೊಳ್ಳುತ್ತಾಳೆ.

''ಶೂನ್ಯಸಂಪಾದನೆ''ಗಳಲ್ಲಿ ಚಿತ್ರಣಗೊಂಡಿರುವ ಅಕ್ಕಮಹಾದೇವಿಯ ಇನ್ನೊಂದು ಮಹತ್ವದ ಚಿತ್ರಣ ಚಿಂತನಾರ್ಹವಾದುದು. ಕಲ್ಯಾಣದ ಅನುಭವ ಮಂಟಪವನ್ನು ಪ್ರವೇಶಿಸಿದ ಅಕ್ಕಮಹಾದೇವಿಯನ್ನು ಅಲ್ಲಮನು ಅನೇಕ ರೀತಿಯ ಪರೀಕ್ಷೆಗೆ ಒಳಪಡಿಸಿದನು ಎಂಬ ಗಂಭೀರ ಚಿತ್ರಣವನ್ನು ''ಶೂನ್ಯ ಸಂಪಾದನೆ''ಗಳಲ್ಲಿ ಬಿಂಬಿಸಲಾಗಿದೆ. ಅದೇ ಚಿತ್ರಣದಲ್ಲಿ, ಅಲ್ಲಮನು ಒಡ್ಡಿದ ಎಲ್ಲಾ ರೀತಿಯ ಪರೀಕ್ಷೆಗಳನ್ನೂ ದಿಟ್ಟತನದಿಂದಲೂ, ಆತ್ಮವಿಶ್ವಾಸದಿಂದಲೂ ಅನನ್ಯ ಆಧ್ಯಾತ್ಮ ಶಕ್ತಿಯಿಂದಲೂ ಎದುರಿಸಿ ನಿಂತಳು ಎಂಬರ್ಥವನ್ನು ಧ್ವನಿಸುತ್ತವೆ. ಅಂದರೆ, ಅನುಭವ ಮಂಟಪದಲ್ಲಿ, ಅನ್ಯ ಶರಣೆಯರಿಗೆ ಇದ್ದಷ್ಟು ಸರಳವಾದ ಆಧ್ಯಾತ್ಮದ ವಾತಾವರಣ ಅಕ್ಕಮಹಾದೇವಿಗೆ ಇರಲಿಲ್ಲವೆಂಬುದು ಸಾಕಷ್ಟು ಸರಳವಾಗಿಯೇ ಗ್ರಹೀತವಾಗುತ್ತದೆ. ಅನುಭವ ಮಂಟಪದಲ್ಲಿ ಎಷ್ಟೋ ಮಂದಿ ದಾಂಪತ್ಯ ಜೀವನದಿಂದಲೇ ಬಂದಂತಹ ಶರಣೆಯರಿದ್ದರು. ಆದರೆ, ಅಕ್ಕಮಹಾದೇವಿಯ ದಾಂಪತ್ಯ ಜೀವನವನ್ನು ಧಿಕ್ಕರಿಸಿ ಬಂದವಳು. ಆ ಕಾರಣಕ್ಕಾಗಿಯೇ ಆನಂತರದ ಅವಳ ಜೀವನವೆಂಬುದು ಹಿಡಿಯಬೇಕಾದ ಹಾದಿ ಯಾವುದೆಂಬುದು ಅಕ್ಕಮಹಾದೇವಿಗೆ ಮಾತ್ರವಲ್ಲದೆ, ಅನುಭವ ಮಂಟಪದ ಮುಂದಿದ್ದ ಒಂದು ಗಂಭೀರವಾದ ಸವಾಲೇ ಅದಾಗಿತ್ತು.

ಅಕ್ಕಮಹಾದೇವಿಯ ವ್ಯಕ್ತಿಜೀವನದ ಇನ್ನೊಂದು ಮುಖ್ಯ ಘಟನೆ ಗಮನಾರ್ಹವೆನಿಸುತ್ತದೆ. ಕಲ್ಯಾಣದ ಕ್ರಾಂತಿಕಾರಿ ಚಟುವಟಿಕೆಗಳ ಒಂದು ಕಾಲಘಟ್ಟದಲ್ಲಿ ಪುರೋಹಿತ ಸಂಸ್ಕೃತಿ ಮೂಲದಕ ಕೆಲವು ಪಟ್ಟಭದ್ರರು ಆ ಪ್ರದೇಶದಲ್ಲಿ ಎಬ್ಬಿಸಿದ್ದ ದೊಂಬಿ ಮತ್ತು ಲಭೆಗಳ ಪರಿಣಾಮವಾಗಿ, ಹಲವಾರು ಶರಣರು ಕಲ್ಯಾಣವನ್ನು ಬಿಟ್ಟು ಹೋಗಬೇಕಾಯಿತು ಎಂಬುದಾಗಿಯೂ ಚರಿತ್ರೆ ಹೇಳುತ್ತದೆ. ತತ್ಪರಿಣಾಮವಾಗಿ, ಕಲ್ಯಾಣವನ್ನು ತೊರೆದು ಹೋದ ಅಕ್ಕನು ಶ್ರೀಶೈಲದತ್ತ ನಡೆದಿರಬೇಕು ಎಂದು ಅದೇ ಚರಿತ್ರೆ ಹೇಳುತ್ತದೆ. ಅಲ್ಲದೆ ಅಲ್ಲಮನ ಸೂಚನೆಯಂತೆ ಆಕೆಯು ಕಲ್ಯಾಣವನ್ನು ತೊರೆದು ಶ್ರೀಶೈಲದ ಕದಳಿಯತ್ತ ಸಾಗಿದಳು ಎಂತಲೂ ತಿಳಿದುಬರುತ್ತದೆ. (ಕ.ಸಾ.ಜ. ಪು. ೪೯೧).

ಇನ್ನೊಂದು ಗಮನಿಸಲೇಬೇಕಾದಂಥ ಸಂಗತಿ ಎಂದರೆ, ಅಕ್ಕಮಹಾದೇವಿಯು ಅನ್ಯ ಶರಣರಿಗಿಂತ ವಯಸ್ಸಿನಲ್ಲಿ ಕಿರಿಯವಳು. ಆದರೆ, ಆಕೆಯ ಯೌವನವಾಸ್ಥೆ ಸಹಜವಾದ ದೈಹಿಕ ಶಕ್ತಿ ಮಾನಸಿಕ ಭದ್ರತೆ ಮತ್ತು ಬೌದ್ಧಿಕ ಶಕ್ತಿಯಿಂದ ಅವಳು ಗಳಿಸಿದ ಆಧ್ಯಾತ್ಮದ ಅನುಭವದ ಪ್ರಖರತೆಯನ್ನು ಇಡೀ ಶರಣ ಸಮುದಾಯವೇ ನೋಡಿ ನಿಬ್ಬೆರಗಾಗಿ ನಿಂತುಬಿಟ್ಟಿತು. ತದನಂತರದ ಕಾಲಕ್ರಮದಲ್ಲಿ ಅವಳಿಗಿಂತಲೂ ವಯಸ್ಸಿನಲ್ಲಿ ಹಿರಿಯರೇ ಆಗಿದ್ದಂತಹ ಅಲ್ಲಮ ಮತ್ತು ಬಸವಾದಿ ಪ್ರಮುಖರು ಅಪಾರ ಗೌರವದಿಂದಲೇ ಆಕೆಯನ್ನು 'ಅಕ್ಕ' ಎಂದೇ ಕರೆದರು. ಆನಂತರ ಮಹಾದೇವಿಯ ಹೆಸರು ''ಅಕ್ಕಮಹಾದೇವಿ'' ಎಂಬುದಾಗಿ ಪರಿವರ್ತನೆಗೊಂಡಿತು. ಆಕೆಯ ಮೂಲಕ ಹೆಸರು ''ಮಹಾದೇವಿ'' ಎಂದಷ್ಟೇ ಇದ್ದಿತು. ಬಸವಣ್ಣನಂತೂ ತನ್ನದೊಂದು ವಚನದಲ್ಲಿ ''ಮಹಾದೇವಿ ಅಕ್ಕನೆಂಬ ಭಕ್ತೆಗೆ ಆವ ಹೊರೆಯೂ ಇಲ್ಲ ಪ್ರಭುವೆ' ಎಂತಲೇ ಸಂಬೋಧಿಸುತ್ತಾನೆ. ಅಲ್ಲಮಪ್ರಭುವಂತೂ ಮತ್ತೆ ಮುಂದೆ ಹೋಗಿ ತನ್ನದೊಂದು ವಚನದಲ್ಲಿ,

''ಅಂತರಂಗದ ಪ್ರಭೆ ಬಹಿರಂಗವಲ್ಲ ತಾನೆಯಾಗಿ
ಗೋಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ
ಮಹಾದೇಪಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂಬೆನು''

ಸಾರಿಕಾಯು

ಅಲ್ಲಮ ಬಸವಣ್ಣ ಇಬ್ಬರೂ ಸಹ ಅಕ್ಕಮಹಾದೇವಿಯನ್ನು ಅನುಪಮ ಗೌರವ ಮತ್ತು ಭಕ್ತಿಯಿಂದಲೇ ಸ್ಮರಿಸುತ್ತಾರೆ. ಈ ಇಬ್ಬರು ಹಿರಿಯ ಶರಣರ ವಚನಗಳಲ್ಲೂ ''ಮಹಾದೇವಿ ಅಕ್ಕ'' ಎನ್ನುತ್ತಾರೆಯೇ ಹೊರತು. ''ಅಕ್ಕಮಹಾದೇವಿ'' ಎನ್ನುವುದಿಲ್ಲ ಅಂದರೆ. ಮೂಲತಃ ಮಹಾದೇವಿ ಎಂಬ ಆಕೆಯ ಹೆಸರನ್ನು ಅಕ್ಕಮಹಾದೇವಿ ಎಂಬುದಾಗಿ ಪರಿವರ್ತಿಸಿ ''ಅಕ್ಕ'' ಎಂಬ ಸಂಬಂಧವಾಚಕ ಪದವನ್ನು ಆಕೆಯ ಹೆಸರಿನ ಪೂರ್ವದಲ್ಲಿ ಬಳಸುತ್ತ ಆನಂತರದ ಕಾಲಘಟ್ಟದಲ್ಲಿ ಆ ಹೆಸರು 'ಅಕ್ಕಮಹಾದೇವಿ' ಎಂಬುದಾಗಿ ವಚನ ಸಾಹಿತ್ಯ ಚರಿತ್ರೆಯಲ್ಲಿ ನಡೆದು ಬಂದಿರುವುದು ಜನಜನಿತವಾಗಿಯೇ ಇದೆ. ಅಕ್ಕಮಹಾದೇವಿಯನ್ನು ಕುರಿತ ಚೆನ್ನಬಸವಣ್ಣನ ವಚವಂತೂ ವಿನೂತನ ಅರ್ಥ ಮತ್ತು ವಿಶಿಷ್ಟ ಧ್ವನಿಗಳಿಂದಲೇ ತುಂಬಿರುವ ವಚನವೆನಿಸುತ್ತದೆ:

''ಅಜಕಲ್ಪಕೋಟಿ ವರ್ಷದವರೆಲ್ಲರೂ ಹಿರಿಯರೆ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ?
ನಡುಮುರಿದು ಗುಡುಗೂಡಿ ತಲೆ ಅಡುಗಿದವರೆಲ್ಲ ಹಿರಿಯರೆ?
ನರೆತೆರೆ ಹೆಚ್ಚಿ ಮತಿಗೆಟ್ಟು ಒಂದನಾಡ ಹೋಗಿ
ಒಂಬತ್ತನಾಡುವ ಅಜ್ಞಾನಿಗಳೆಲ್ಲ ಹಿರಿಯರೆ?
ಅನುಭವನರಿದ ಘನವ ಬೆರಸಿ ಹಿರಿದು ಕಿರಿದೆಂಬ
ಭೇದವ ಮರೆತು. ಕೂಡಲಸಂಗಯ್ಯನಲ್ಲಿ
ಬೆರೆಸಿ ಬೇರಿಲ್ಲದಿಪ್ಪ ಹಿರಿಯತನ
ನಮ್ಮ ಮಹಾದೇವಿಯಕ್ಕಂಗಾಯಿತು ಕೇಳಾ ಪ್ರಭುವೆ''

ಚೆನ್ನಬಸವಣ್ಣನ ಈ ವಚನದ ಆರಂಭದಿಂದ ಅಂತ್ಯದವರೆಗೂ ನಡೆದು ಸಾಗುವ ಪ್ರಶ್ನಾರ್ಥಕ ಚಿನ್ಹೆಗಳು ಇಲ್ಲಿ ತುಂಬಾ ಗಮನಾರ್ಹ. ಸಮಾಜದಲ್ಲಿ ವಯೋಧರ್ಮದಿಂದ ವಯಸ್ಸಾದವರನ್ನೆಲ್ಲಾ ಹಿರಿಯರು ಎಂಬುದನ್ನು ಚೆನ್ನಬಸವಣ್ಣನು ಒಪ್ಪುವುದಿಲ್ಲ. ಬದಲಾಗಿ, ಜ್ಞಾನ ಮತ್ತು ಅನುಭಾವದಲ್ಲಿ ಬೌದ್ಧಿಕ ಶ್ರೇಷ್ಠತೆಯನ್ನೇ ಮೆರೆದ ಮಹಾದೇವಿಯನ್ನು ಮಾತ್ರ 'ಅಕ್ಕ'ನೆಂದೂ ''ಕೂಡಲಸಂಗಯ್ಯನಲ್ಲಿ ಬೆರೆಸಿ ಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹಾದೇವಿ ಅಕ್ಕಂಗಾಯಿತು ಕೇಳಾ ಪ್ರಭುವೇ'' ಎಂಬುದಾಗಿ ಮಹಾದೇವಿ ಅಕ್ಕನ ಹಿರಿತನವನ್ನು ಚೆನ್ನಬಸವಣ್ಣನು ಕೂಡಲಸಂಗಯ್ಯನ ಸಮಕ್ಷಮದಲ್ಲೇ ಘೋಷಿಸುತ್ತಾನೆ.

ಇನ್ನು-ಅಕ್ಕಮಹಾದೇವಿಯ ವಚನಗಳ ಬಗೆಗೆ ನೇರವಾಗಿಯೂ ಸ್ಪಷ್ಟವಾಗಿಯೂ ಹೇಳಬೇಕಾದ ಮಾತೆಂದರೆ, ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಚರಿತ್ರೆಯ ಶಬ್ದಲೋಕದಲ್ಲಿ ಪ್ರಪ್ರಥಮ ಕವಯತ್ರಿ ಅಕ್ಕಮಹಾದೇವಿ. ಈ ವರೆಗೆ ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸಲಾಗಿರುವ ಅಕ್ಕನ ಒಟ್ಟು ವಚನಗಳು ೩೬೩ ಎಂತಲೂ, ಹೆಚ್ಚಿಗೆ ದೊರೆತ ವಚನಗಳು ೧೦ ಎಂತಲೂ ''ಅಕ್ಕನ ವಚನಗಳು'' ಎಂಬ ಶೀರ್ಷಿಕೆಯಲ್ಲಿ ಹಿರಿಯ ವಿದ್ವಾಂಸರಾದ ಡಾ. ಎಲ್. ಬಸವರಾಜು ಅವರು ಸಂಪಾದಿಸಿ ೧೯೬೬ರಲ್ಲೇ ದಾಖಲಿಸಿದ್ದಾರೆ.

ಅಕ್ಕಮಹಾದೇವಿಯ ವಚನಗಳಲ್ಲಿ ಗಮನಿಸಬೇಕಾದ ಮುಖ್ಯವಾದ ಸಂಗತಿ ಎಂದರೆ. ಆಕೆಯ ಎಷ್ಟೋ ವಚನಗಳಲ್ಲಿ ಆಕೆಯ ಆತ್ಮಕಥೆಯ ಸ್ಕೆಚ್‌ಗಳು ಆ ವಚನಗಳ ಒದಿನ ಓಘದಲ್ಲೇ ಸೃಷ್ಟಿಯಾಗುತ್ತವೆ. ವಿರಕ್ತಿ ಅಥವಾ ಅನುಭಾವ ಮಾತ್ರವಲ್ಲದೆ ಲೋಕದ ಡೊಂಕುಗಳನ್ನು ಕುರಿತ ವ್ಯಂಗ್ಯ ವಿಡಂಬನೆ, ಲೋಕಜೀವನವನ್ನು ತಿದ್ದುವ ಅಮಿತವಾದ ಕಳಕಳಿ, ಪ್ರಾಕೃತಿಕ ಸೌಂದರ್ಯ

ಮುಂತಾದುವೆಲ್ಲಾ ಚಿತ್ರಣಗೊಂಡಿವೆ. ಆಶ್ಚರ್ಯದ ಸಂಗತಿ ಎಂದರೆ, ಈಗ್ಗೆ ಎಂಟುನುರು ವರ್ಷಗಳ ಹಿಂದೆಯೆ ಕನ್ನಡ ಭಾಷೆಯನ್ನು, ಅದೂ ಪಾಂಡಿತ್ಯ ಮೂಲದ ಪ್ರಭುನಿಷ್ಠ ಸಾಹಿತ್ಯ ರಚನೆಯ ಕಾಲದಲ್ಲಿ, ಇಷ್ಟೊಂದು ಸರಳಗೊಳಿಸಿ, ಆದರೆ, ಪರಿಣಾಮ ತೀವ್ರತೆಯ ವಚನಗಳನ್ನೇ ರಚಿಸಿರುವ ಹಿಂದೆ ದುಡಿದಿರಬಹುದಾದ ಮೂಲಚೇತನವೇನು ಎಂಬುದನ್ನು ಶೋಧಿಸಿ ನೋಡಿವುದು ಅಗತ್ಯವಿದೆ.

ಅಕ್ಕ ಮಹಾದೇವಿಯು ವ್ಯಕ್ತಿಯಾಗಿ ಅವಳದು ಎಷ್ಟೊಂದು ಸಂಕೀರ್ಣವಾದ ವ್ಯಕ್ತಿತ್ವವೋ, ಅವಳ ಅಭಿವ್ಯಕ್ತಿ ಕೂಡ ಅಷ್ಟೇ ಸಂಕೀರ್ಣವೂ ಧ್ವನಿಪೂರ್ಣವೂ ಆದುದೆನಿಸುತ್ತದೆ.

"ತರಣಿಯಹುಳು ತನ್ನ ಸ್ನೇಹದಿಂದ ಮನೆಯ ಮಾಡಿ
ತನ್ನನೂಲು ತನ್ನನ್ನೇ ಸುತ್ತಿಸುತ್ತಿ ಸಾವತೆರನಂತೆ
ಮನಬಂದುದ ಬಯಸಿ ಬಯಸಿ ಬೇವುತ್ತಿರುವೆನಯ್ಯ
ಅಯ್ಯ ಎನ್ನ ಮನದ ದುರಾಶೆಯ ಮಾಣಿಸಿ
ನಿಮ್ಮತ್ತ ತೋರ ಚೆನ್ನಮಲ್ಲಿಕಾರ್ಜುನ" (ವ.೧೭)

ಅಕ್ಕನು ಹೆಣ್ಣಾಗಿ ಸುಖವನರಸುತ ಪರಿಪರಿಯಾಗಿ ದುಃಖಿಸುವ ರೀತಿಯನ್ನೂ ಅನನ್ಯ ಚಿಂತನೆಯ ಅರ್ಥಗಳನ್ನೂ ಈ ವಚನದಿಂದ ಹೊರತೆಗೆಯಬಹುದಾಗಿದೆ. ತರಣಿಯ ಹೆಣ್ಣು ಗೂಡು ಕಟ್ಟಿಕೊಳ್ಳುವುದು ತನ್ನ ರಕ್ಷಣೆಗಾಗಿ. ಆದರೆ, ಹಾಗೆ ಕಟ್ಟಿಕೊಂಡ ಆ ಗೂಡಿನಲ್ಲಿ ತಾನು ಸುಖವಾಗಿಯೂ ಸುಕ್ಷಿತವಾಗಿಯೂ ಇದ್ದೇನೆಂಬುದು ಕೇವಲ ಭ್ರಮೆ ಮಾತ್ರ. ಆ ಹುಳು ವಾಸಿಸುತ್ತಿರುವುದೇ ರಕ್ಷಣೆ ರಹಿತ ಗೂಡಿನಲ್ಲಿ. ಹಾಗಾಗಿಯೇ "ಮನಬಂದುದದ ಬಯಸಿ ಬಯಸಿ ಬೇವುತ್ತಿರುವೆನಯ್ಯ" ಎಂಬ ಮಾತಿನಲ್ಲಿ ವ್ಯಕ್ತಿಯ ಜೀವ ಮತ್ತು ದೇಹ ಚೂರು ಚೂರೇ ಹೇಗೆ ಸವೆಯುತ್ತಿದೆ ಎಂಬುದನ್ನು ಈ ವಚನವು ತುಂಬಾ ಅರ್ಥಪೂರ್ಣವಾಗಿ ಧ್ವನಿಸುತ್ತದೆ. ಪುರುಷ ಸುಖದಿಂದ ವಂಚಿತಳಾದ ಮಹಿಳೆ ಅಕ್ಕನು ಚೆನ್ನಮಲ್ಲಿಕಾರ್ಜುನನಲ್ಲಿ ಆ ಸುಖವನರಸುತ್ತಾಳೆ. ಆಕೆಯ ಮಾತಿನಲ್ಲಿ ಅವಳ ವ್ಯಕ್ತಿನಿಷ್ಠೆ ಮಾತ್ರವಲ್ಲದೆ, ನಂಬಿಕೆ ಮತ್ತು ತತ್ವನಿಷ್ಠೆಗಳು ಕೂಡ ಅಡಕವಾಗಿವೆ. ಆಕೆಯ ವ್ಯಕ್ತಿಜೀವನದ ನೋವು ಮತ್ತು ಯಾತನೆಗಳು ಆನುಭಾವಿಕ ಅನುಭವವೆನಿಸಿ, ಲೈಂಗಿಕ ಪ್ರತಿಮಾವಿಧಾನದಲ್ಲಿ ವ್ಯಕ್ತವಾಗಿರುವುದನ್ನು ಗಮನಿಸಬೇಕು.

ಯಾವ ಶಬ್ದದಲ್ಲೂ ಹೇಳಲಾಗದ ಅಕ್ಕನ ವ್ಯಕ್ತಿ ಜೀವನದಲ್ಲಿ ತುಂಬಿರುವ ನೋವು ನಿರಾಶೆ ಮತ್ತು ಅವುಗಳನ್ನೆಲ್ಲಾ ಮೆಟ್ಟಿ ನಿಲ್ಲಲೇಬೇಕು, ಮೆಟ್ಟಿ ನಿಂತೇ ನಿಲ್ಲುವೆನು ಎಂಬ ಅಗಾಧವಾದ ಪ್ರತಿಮೆಯನ್ನೇ ಕಟ್ಟಿಕೊಡುವ ಈ ಕೆಳಗಿನ ವಚನವೂ ಚಿಂತನಾರ್ಹವಾದುದು.

"ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಗಂಜಿದೊಡೆಂತಯ್ಯ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಂಡೆಂತಯ್ಯ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿ ನಿಂದೆಗಳು ಬಂದರೆ
ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು" (ವ.೧೦೬)

ಸಾಂಕೇತ

ಅಕ್ಕಮಹಾದೇವಿಯ ಈ ವಚನ ತುಂಬಾ ಪ್ರಸಿದ್ಧವಾದುದು ಮತ್ತು ವಚನ ಸಾಹಿತ್ಯ ವಿಮರ್ಶೆಯಲ್ಲಿ ಬಹಳ ಮಂದಿ ವಿಮರ್ಶಕರನ್ನು ಆಕರ್ಷಿಸಿದೆ. ಈ ವಚನದಲ್ಲಿ ಪ್ರಯೋಗವಾಗಿರುವ ''ಬೆಟ್ಟ'' ''ಮೃಗ'' ''ಸಮುದ್ರ'' ಮತ್ತು ''ಸಂತೆ'' ಇವೆಲ್ಲವೂ ಒಂದು ರೀತಿಯ ಅರ್ಥವನ್ನು ಧ್ವನಿಸಿದರೆ, ಅವುಗಳಿಗೆಲ್ಲಾ ''ಅಂಜದಿರುವ'' ಮಾನವನ ದಿಟ್ಟ ಮತ್ತು ಧೈರ್ಯದ ಮನಸ್ಥಿತಿಯನ್ನು ಧ್ವನಿಸುತ್ತವೆ. ಇದೇ ವಚನದಿಂದ ಹೊರಡುವ ಮತ್ತೊಂದು ಅರ್ಥವೂ ಅಷ್ಟೇ ಮುಖ್ಯ. ಮಾನವನ್ನು ಹೆದರಿಸುವ ಸಮಾಜವೇ ಒಂದಿದೆ. ಅಂತಹ ಸಮಾಜಕ್ಕೆ ಹೆದರದೆ, ಧೀಶಕ್ತಿ ಪ್ರದರ್ಶಿಸಿ ಧೈರ್ಯದ ಮನಸ್ಥಿತಿಯ ಪ್ರದರ್ಶನ ಮಾಡುವ ಮತ್ತೊಂದು ಎದುರಾಳಿ ಶಕ್ತಿ ಎಂದೆನಿಸುತ್ತದೆ. ಅಂತಹ ಧೀಶಕ್ತಿಯನ್ನೂ ಆತ್ಮವಿಶ್ವಾಸವನ್ನೂ ಮಹಾದೇವಿ ಅಕ್ಕನು ತನ್ನ ಈ ವಚನದಲ್ಲಿ ವ್ಯಕ್ತಪಡಿಸಿದ್ದಾಳೆ. ತಾನು ಬದುಕಲೇಬೇಕಾಗಿ ಬಂದಂತಹ ಸಮಾಜವನ್ನು ಬೆಟ್ಟ ಮೃಗ ಸಮುದ್ರ ಮತ್ತು ಸಂತೆ ಎಂಬುದಾಗಿ ಆಕೆಯು ವರ್ಣಿಸಿರುವುದನ್ನು ನೋಡಿದರೆ, ಪ್ರಾಯಶಃ ಸನ್ನಡತೆಹೀನ ಪತಿಯನ್ನೂ ಸಂಸಾರವನ್ನೂ ಆಕೆಯು ಧಿಕ್ಕರಿಸಿ ಹೊರಬಂದ ನಂತರ ಸಮಾಜದಲ್ಲಿ ಸಾಕಷ್ಟು ಅಪನಿಂದೆಗಳನ್ನೇ ಆಕೆಯು ಅನುಭವಿಸಿರಬೇಕು. ಆ ರೀತಿಯ ಅಪನಿಂದೆಗಳಿಗೆಲ್ಲಾ ದಿಟ್ಟ ಮತ್ತು ಪರಿಣಾಮಕಾರಿ ಉತ್ತರ ಕೊಡುವುದ ಆಕೆಗೆ ಅನಿವಾರ್ಯವೂ ಆಗಿರಬಹುದು. ಅಷ್ಟೆಲ್ಲಾ ಆದ ನಂತರವೂ ''ಲೋಕದೊಳಗೆ ಹುಟಿದ ಬಳಿಕ ಸ್ತುತಿ ನಿಂದೆಗಳು ಬಂದರೆ ಮನದಲ್ಲಿಕೋಪವ ತಾಳದೆ ಸಮಾಧಾನಿಯಾಗಿರಬೇಕು'' ಎಂಬ ತನ್ನ ಅಂತಿಮ ನುಡಿಯ ಮೂಲಕ ಸಮಾಜದ ಅವಿವೇಕವನ್ನೇ ತಿದ್ದುತ್ತಾಳೆ.

ಮಾನವನನ್ನು ಕಂಡು ಮಾನವನೇ ಅಮಾನವನಂತೆ ನಡೆದುಕೊಳ್ಳುವ ಅವನ ಅವಿವೇಕತನವನ್ನು ತಿದ್ದು ಬೌದ್ಧಿಕ ಶ್ರೇಷ್ಠತೆಯನ್ನು ಮಹಾದೇವಿ ಅಕ್ಕ ತನ್ನ ವಚನದಲ್ಲಿ ಮೆರೆದಿದ್ದಾಳೆ ಆದರೆ, ಸಮಾಜ ಅವಳನ್ನು ಎಷ್ಟೇ ಟೀಕಿಸಿ ನಿಂದಿಸಿದರೂ ಆಕೆ ಹೆದರಿರುವ ಒಂದೇ ಒಂದು ಚಿತ್ರವೂ ಅಕ್ಕನ ಮುನ್ನೂರ ಐವತ್ತು ವಚನಗಳಲ್ಲಿ ಎಲ್ಲೂ ಕಾಣುವುದೇ ಇಲ್ಲ. ಆಕೆಯ ವಚನಗಳಲ್ಲಿ ದಿಟ್ಟತನ ಮತ್ತು ವ್ಯವಸ್ಥೆಯ ಅವಿವೇಕದ ವಿರುದ್ಧದ ಬಂಡಾಯವೇ ವಚನಗಳಲ್ಲಿನ ಸ್ಥಾಯೀಭಾವ ಎಂಬುದು ಮಾತ್ರ ಸಾಧಾರ ಸತ್ಯವೇ ಆಗಿದೆ. ಅದಕ್ಕೆ ಏಕೈಕ ಕಾರಣ, ಅನುಭವ ಮಂಟಪ ಆಕೆಯ ಹಿಂದಿನ ಒಂದು ಅಜೇಯ ಶಕ್ತಿಯೇ ಆಗಿತ್ತು. ''ಲೋಕದಲಿ ಹುಟ್ಟಿದ ಬಳಿಕ ಸುತ್ತಿನಿಂದೆಗಳು ಬಂದರೆ ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು'' ಎಂಬ ಅಕ್ಕನ ವಚನದ ಈ ಕೊನೆಯ ಸಾಲುಗಳಲ್ಲಿ ಮತ್ತೊಂದು ಮುಖ್ಯವಾದ ಅಥವೂ ಧ್ವನಿತವಾಗುತ್ತದೆ. ಅಕ್ಕಮಹಾದೇವಿಯು ವೈಯಕ್ತಿಕವಾದ ಸುಖ ಅಥವಾ ಸಂಸಾರವನ್ನು ತಿರಸ್ಕರಿಸಿದಳೇ ಹೊರತು ಸಮಾಜವನ್ನು ಅಲ್ಲ. ಲೋಕಜೀವನವನ್ನೂ ಅಲ್ಲವೆಂಬುದೇ ಆಕೆಯ ಅಭಿವ್ಯಕ್ತಿಯ ಹಿಂದಿನ ಸೈದ್ಧಾಂತಿಕ ಶಕ್ತಿ.



ನಂ. ಎಂ-೧೩, ೨ನೇ ಕ್ರಾಸ್, ೨ನೇ ಮೇನ್
ಇ ಮತ್ತು ಎಫ್ ಬ್ಲಾಕ್, ರಾಮಕೃಷ್ಣನಗರ
ಎರಡನೇ ಹಂತ, ಮೈಸೂರು - ೫೭೦ ೦೨೨



ಭಾವತಂತುಗಳಲ್ಲಿ ಬೆಸೆಯುವ ಅಮೂರ್ತದ ಅಭಿಲಾಷೆ

ಜಯಂತ ಕಾಯ್ಕಿಣಿಯವರ ಕಾವ್ಯಲೋಕ

ಸುಮತಿ ಶೆಣೈ

ಕಥನ, ಲಘು ಪ್ರಬಂಧ, ಅಂಕಣ ಬರಹ, ಭಾಷಣ, ವ್ಯಕ್ತಿ ಚಿತ್ರಣಗಳಂಥ ಕವನೇತರ ಸಾಹಿತ್ಯ ಪ್ರಕಾರಗಳಲ್ಲಿ ಸ್ಪಷ್ಟವಾದ ಕಾವ್ಯಗುಣವನ್ನು ಹೊಮ್ಮಿಸಿ ಭಿನ್ನ ಸಂವೇದನಾ ಲಯವನ್ನು ಕನ್ನಡ ಸಾಹಿತ್ಯಕ್ಕೆ ನೀಡಿದವರು ಜಯಂತ ಕಾಯ್ಕಿಣಿಯವರು. ಈ ಕಾವ್ಯಗುಣವೇ ಅವರ ಎಲ್ಲಾ ವಿಧದ ಸಾಹಿತ್ಯಸೃಷ್ಟಿಗಳನ್ನು ಏಕಸೂತ್ರದಲ್ಲಿ ಜೋಡಿಸುವ ಪರಿಕರ ಎನ್ನಬಹುದೇನೋ. ಜಯಂತ ಕಾಯ್ಕಿಣಿಯವರು ಬರೆದ ಬಹುಪಾಲು ಕಥೆಗಳಲ್ಲಿ, ಲೇಖನಗಳಲ್ಲಿ ಕನಿಷ್ಟ ಒಂದು ಪ್ಯಾರಾದಲ್ಲಾದರೂ ಕವನದ ನಿರೂಪಣಾ ಧಾಟಿಯಿರುವುದು ಗಮನಕ್ಕೆ ಬರದಿರದು. ವಿಶೇಷವೆಂದರೆ, ಕೆಲವು ಕವನದಲ್ಲಿಯೂ ಒಂದೆರಡು ಸಾಲುಗಳು ಹೊಸ ಕಥಾಸನ್ನಿವೇಶವನ್ನು ಓದುಗನ ಮನದಲ್ಲಿ ಕಾವ್ಯಮಯವಾಗಿಯೇ ಹಾಯಿಸಬಲ್ಲ ವಿಚಾರಗಳು ಇಲ್ಲದಿಲ್ಲ. ಒಂದು ಸಾಮಾನ್ಯ ಘಟನೆಯಾಗಲೀ, ರಮ್ಯತೆಯ ನಿರೂಪಣೆಯಲ್ಲಾಗಲಿ, ಭೀಕರ ಸನ್ನಿವೇಶದಲ್ಲಾಗಲಿ, ಅದರಲ್ಲಿ ಅಡಕವಾಗಿರುವ ಎಲ್ಲಾ ಭಾವತಂತಿಗಳನ್ನು ಪೋಣಿಸಿ ಸಾಹಿತ್ಯದೀಪ್ತಿಯನ್ನು ಬೆಳಗಿಸುವ ಕ್ರಮ ಅವರದು. ಓದುಗನ ಭಾವಸ್ಪಂದನದಲ್ಲಿ ಮಾತ್ರ ಸಫಲತೆಯನ್ನು ಕಾಣಬೇಕಾದ ಅವರ ಕಾವ್ಯಪ್ರಪಂಚದ ಅನೇಕ ಮಜಲುಗಳನ್ನು ಮತ್ತು ಸಂವೇದನಾ ವಿಕಾಸ ಅವಲೋಕಿಸುವ ಪ್ರಯತ್ನ ಇಲ್ಲಿದೆ.

'ಕವಿತೆಗಳೆನೋ ತಲೆ ಹೋಳಾಗುವಂಥ ಪ್ರಶ್ನೆಗಳನ್ನು ಕೇಳುವುದಿಲ್ಲ' ಎಂದು ಕವನದ ಸಾಲುಗಳಲ್ಲೇ ಹೇಳಿದ ಜಯಂತ ಕಾಯ್ಕಿಣಿಯವರ ಕವಿತೆಗಳಲ್ಲಿ ಎಂದೋ ವಿಚಲಿತಗೊಳಿಸಿದ ಸಮಸ್ಯೆಯೊಂದು, ತಬ್ಬಿಬ್ಬಾಗಿಸುವ ಅಚಾತುರ್ಯವೊಂದು, ಆಗಾಗ ದಿಗಿಲಾಗಿಸುವ ಸನ್ನಿವೇಶವೊಂದು, ಅರ್ಥೈಸಲಾಗದ ರೂಢಿಗತ ವಿಚಾರವೊಂದು, ಸಹಿಸಲಾಗದ ಶೋಷಣೆಯೊಂದು ಕಾವ್ಯದ ಲಾಸ್ಯವನ್ನು ಪಡೆಯುತ್ತದೆ.. ಅಷ್ಟೇ ಅಲ್ಲದೇ ಗಮನಿಸದೇ ಬಿಟ್ಟ ಅಕ್ಕರೆ, ತಿಳಿನಗು, ಆಪ್ತ ಮಾತು ಆಪ್ಯಾಯಮಾನತೆಗಳು ಅವರು

ಬಳಸುವ ಕಾವ್ಯವಸ್ತುಗಳಿಗೆ ಎರಕ ಹೊಯ್ಯುತ್ತಿರುತ್ತವೆ. ಈ ಅನುಭವ ಎಲ್ಲೋ ಆಗಿ ಹೋಗಿದೆಯೆನಿಸು ವಂತೆ, ಆಗಿಹೋದರೂ ಇಷ್ಟು ಸ್ಪಷ್ಟ ಸಂಗತಿ ನಮ್ಮ ಮನದ ಮೆಲ್ದರಕ್ಕೆ ಬರುವಲ್ಲಿ ಸೋತಿತೇಕೆ ಎಂದು ಪರಿತಪಿಸುವಂಥ ಆಪ್ತ ವಿಷಯಗಳನ್ನು ಅವರ ಕವನಗಳು ಸಮ್ಮೆದುರು ತರುತ್ತವೆ.. ಕಾವ್ಯವಸ್ತು ರೋಸಿ ಹೋದ ಡ್ರೈವರ್‌ನ ಬಗ್ಗೆಯಾಗಲೀ ಬಸಳೆ ದಂಟಿನ, ಕೊಳೆಗೇರಿಯಲ್ಲಿ ಕುಳಿತ ಪುಟಾಣಿ, ಮೇಳದ ವೇಷಧಾರಿಯ ಬಗ್ಗೆಯಾಗಲೀ ಅಲ್ಲಿ ಮನಕ್ಕೆ ಹಿತ ಕೊಡುವ, ಸಾಧಾರಣವಾಗಿ ಗುರುತಿಸಲಾಗದ ಭಾವದ ತಂತುವೊಂದು ಇದ್ದೇ ಇರುತ್ತವೆ. ಕವಿತೆಯ ಸಾಲುಗಳಲ್ಲಿ ಥಟ್ಟನೇ ರೂಪು ತಳೆಯುವ ಈ ಪರಿಚಿತ ಅಂಶವೇ ಕವನವನ್ನು ಗಟ್ಟಿಯಾಗಿ ನೈಜತೆಯ ಚೌಕಟ್ಟಿನಲ್ಲಿ ಬಂಧಿಸಿಡುತ್ತದೆ. ಯಾವುದೇ ಗಹನ ತತ್ವಗಳ ಗೋಜಿಗೆ ಹೋಗದ ಕಾಯ್ಕಿಣಿಯವರ ಕಾವ್ಯಕ್ಕೆ ಅವುಗಳ ಆತ್ಮೀಯತೆಯ ಪ್ರಭಾವಳಿಯೇ ಸತ್ವ.. ಆ ಪರಿಚಿತ ಕಾವ್ಯಾವರಣದಲ್ಲಿಯೇ ಸಲೀಸಾಗಿ ಅಮೂರ್ತದ ಮೇರೆಯತ್ತ ತೇಲಿಸುವ ಪರಿ. ಕಟು ಪ್ರಾಯೋಗಿಕ, ವಾಸ್ತವಿಕ ವಿಚಾರಗಳಲ್ಲಿನ ಕಂಡೂ ಕಾಣದ ಅದೃಶ್ಯ ಬಿಂದುಗಳನ್ನು ಕವಿತೆಯಲ್ಲಿ ಸರಾಗವಾಗಿ ಜೋಡಿಸುವ ವಿಧಾನ..

'ಹಿಗ್ಗು' ಕವಿತೆಯಲ್ಲಿ ''ಯಾವುದರಿಂದೀ ಬದುಕು ಆತ್ಮೀಯ'' ಎಂದು ಕೌತುಕಗೊಳ್ಳುವ ಜಯಂತ ಕಾಯ್ಕಿಣಿಯವರು ಅಕ್ಕರೆ ಆಪ್ಯಾಯತೆಗಳಿಗೆ ಸಂಬಂಧಿಸಿದ ಕ್ಷಣಗಳನ್ನು ಹೆಚ್ಚಾಗಿ ತಮ್ಮ ಕಾವ್ಯಚಿತ್ತದಿ ಹಸನಾಗಿಸಿ ಶಬ್ದರೂಪ ನೀಡಿದಂತಿರುತ್ತವೆ.. ಕವಿ ಆಯ್ದುಕೊಳ್ಳುವ ಸರಳ ಸನಿವೇಶಗಳಿಗೆ ವ್ಯತಿರಿಕ್ತವಾದ ವಿಕ್ಷಿಪ್ತ ಕ್ಷಣಗಳೂ ಅಲ್ಲಲ್ಲಿ ಕಂಡು ಬರುವುದಿದೆ.. ಬಾವಿಕಟ್ಟೆಯಲ್ಲಿ ನೀರಿಗೆ ಬರುವ ತರುಣಿಯ ನವಿರು ವಿವರಣೆಯಲ್ಲೆ 'ಸ್ವಪ್ನದ ಗಾಯ', 'ರಕ್ತತಾರಕ' 'ಕವಿತೆಯ ಆತ್ಮಹತ್ಯೆ'ಯಂಥ ನುಡಿಗಳು ತಲೆಯೆತ್ತುತ್ತವೆ. ಕಾಯ್ಕಿಣಿಯವರ ಕಾವ್ಯಪ್ರಯಾಣದ ಆರಂಭದ ಸಂಕಲನ ''ರಂಗದಿಂದೊಂದಿಷ್ಟು ದೂರ''ದಿಂದ ಇತ್ತೀಚಿನ 'ಒಂದು ಜಿಲೇಬಿ' ಸಂಕಲನದವರೆಗಿನ ಕವನಗಳನ್ನು ಅವಲೋಕಿಸಿದಾಗ ಕವಿಧ್ವನಿಯ ಸದಾಶಯವಿರುವುದು ಇಂದ್ರಿಯಜನ್ಯ ಅನುಭವಗಳಲ್ಲಿ ಅವರು ಕಾಣುವ ಅಗೋಚರ ಸೆಲೆಗಳ ಮಾಯಾಬಲೆಗಳಲ್ಲಿ. ಹೆಚ್ಚಿನ ಕವಿತೆಗಳಲ್ಲಿ ಈ ಅಮೂರ್ತ-ಅದೃಶ್ಯ ಸೆಲೆಗಳನ್ನು ಬಿಂಬಿಸುವ ಸಾಲಿನಲ್ಲಿ ಕವಿಯ ಮೆಲುಧ್ವನಿಯಿರುತ್ತದೆ. ಕವಿತೆಯ ಸೂಚಿತ ಅರ್ಥದ ಮೆಲುದನಿಯದು. ಕಾಯ್ಕಿಣಿಯವರ ಕಾವ್ಯದಲ್ಲಿ ಈ ಮೆಲುದನಿಯೇ ಎಲ್ಲಕ್ಕಿಂತ ಮೇಲು.

ಜಯಂತ್ ಕಾಯ್ಕಿಣಿಯವರ ಕಾವ್ಯಾಭಿವ್ಯಕ್ತಿಯಲ್ಲಿ ಪ್ರಮುಖವಾಗಿ ಪ್ರಧಾನವಾಗಿ ಕಂಡುಬರುವು ದೇನೆಂದರೆ, ಅನುಭವಿಸುವಾಗ ಮಹತ್ವ ಅರಿಯಲಾಗದ ಬಾಲ್ಯದ ಅಮಾಯಕ ಸನ್ನಿವೇಶಗಳು ಬೆಳೆದು ಪ್ರಬುದ್ಧರೆನಿಸಿಕೊಂಡಾಗ ಎದುರಾಗುವ ನಿರ್ಭಾವುಕ, ವಿಕೃತ ಕ್ಷಣಗಳಲ್ಲಿ ದಿಢೀರ್ ಆಗಿ ಕಾಣಿಸಿ ಕೊಳ್ಳುವುದು. ಅಮಾನುಷ ಕೃತ್ಯಗಳ ಎಡೆಯಲ್ಲಿ ಹುದುಗಿದ ಅಮಾಯಕ ಭಾವಪಲ್ಲವಿಯನ್ನು ಕವಿ ಅರಸುತ್ತಿರುತ್ತಾರೆ. ''ಹೆದ್ದಾರಿ ಚಾಲಕನ ಗುನುಗು'' ಕವನದ 'ಅಜ್ಜನ ಕಿವಿ,ಮಾಮನ ಹಣೆ, ಅಮ್ಮನದೇ ಹೊಳೆಗಣ್ಣು ಪಡೆದು ಬಂದ ತಮ್ಮನೇ ಹಿಡಿದಿರುವನೇ ಗನ್ನು' ಮತ್ತು 'ಮೋಡ' ಕವಿತೆಯ

ನಿದ್ದೆ ಹೋದ ಕೊಲೆಗಡುಕನ ಕನಸಲ್ಲಿ
ಸಂಚರಿಸುತ್ತದೆ ಅವನ ಬಾಲ್ಯದ ಅಂಗಿ

ಇಂಥ ಸಾಲುಗಳೇ ಕವಿಯ ಸ್ಥಿರಭಾವಗಳಿದೆಯನ್ನಬಹುದು. ಜಯಂತರ ಕಾವ್ಯದಲ್ಲಿ, ವಿಷಯ ಯಾವುದೇ ಇರಲಿ, ಅಲ್ಲಿ 'ಹಿತವಾದ ಗತ' ವೊಂದು ಸುಳಿದಾಡುತ್ತಿರುತ್ತದೆ. ಇಂಥ ವಿಚಾರಸರಣಿಯ ಕವಿತೆಗಳು "Life should be lived forward but understood backwards" ಎಂಬ ಉಕ್ತಿಯ ಸಮರ್ಥ

ನಿದರ್ಶನಗಳು . ತವರು ಮನೆಯಿಂದ ದೀರ್ಘಕಾಲದವರೆಗೂ ಗಂಡನ ಮನೆಗೆ ಮರಳದ ಅಕ್ಕನ ಪಾತ್ರ ಕಾವ್ಯವಸ್ತುವಾಗಿರುವ ''ಮೊಡಗಳು ಬಾಗಿಲಲ್ಲೇ'' ಕವನದಲ್ಲಿ ಬದುಕಿನ ಜಂಜಡಗಳಿಂದ ರೋಸಿದ ಅಕ್ಕ ಅಲ್ಲಿ ಕೇಳುವಳು,

ಅಮ್ಮ ನಾನು ಚಿಕ್ಕೋಳಿದ್ದಾಗ ಎಲ್ಲಿ ಜಾರಿ ಬಿದ್ದಿದ್ದೆ
ಅಮ್ಮ ನಾನು ಪೀಪಿಗೆಂದು ಹೇಗೆ ನಿನ್ನ ಕಾಡಿದ್ದೆ

ವರ್ತಮಾನದ ಕಠೋರತೆಯನ್ನು ದುರದೃಷ್ಟವನ್ನು ಕಾವ್ಯದ ಲಯದಲ್ಲಿ ಸಮತೋಲನಗೊಳಿಸಲು ಹದಗೆಟ್ಟ ಪರಿಸ್ಥಿತಿ, ಹಿಂಸಾತ್ಮಕ ಘಟನೆಗಳಿಗೆ ಆಪ್ಯಾಯಮಾನದ ಮೆರುಗು ನೀಡುವ ಹಲವು ಸಂದರ್ಭಗಳು ಕಾಯ್ಕಿಣಿಯವರ ಕಾವ್ಯಪ್ರಪಂಚದಲ್ಲಿವೆ.. ಮನಕ್ಕೆ ನಾಟದ ಹೀನಾಯ ಘಟನೆಯಲ್ಲಿ ಮಾರ್ದವ ಭಾವಗಳನ್ನು ಶೋಧಿಸಿ ಕಾವ್ಯರೂಪ ನೀಡುವುದು ನಿಚ್ಚಳವಾಗಿ ಕಾಣುವುದು. ಬಹುಶಃ ಈ ವಿರೋಧಿ ಭಾವಗಳನ್ನು ಸರಿತೂಗಿಸುವುದು ನಿಜವಾದ ಕಾವ್ಯಕ್ಕೆ ಮಾತ್ರ ಸಾಧ್ಯವೇನೋ. ಕೆಲವೊಮ್ಮೆ ಇಂಥ ವಿರೋಭಾವಗಳ ಸೂಕ್ಷ್ಮ ಗ್ರಹಿಕೆಯೇ ಕವಿತೆಯ ಉಗಮದ ಗಳಿಗೆ. ಭಾವನೆಗಳ ಸಂಘರ್ಷ ಹೆಚ್ಚಾದಂತೆ ಕಾಯ್ಕಿಣಿಯವರ ಕವನದ ಪಾತಳಿ ಒಂದಕ್ಕೊಂದು ನೇರವಾಗಿ ಸಂಬಂಧಿಸದ ವಲಯಗಳಲ್ಲಿ ಸಾಗುತ್ತದೆ. ಈ ನಿಟ್ಟಿನಲ್ಲಿ ಅವರ 'ಒಂದು ಸರೀ ಕಡ್ಡಿಗಾಗಿ' ಮತ್ತು 'ಒಂದು ಜಿಲೇಬಿ' ಕವನಗಳನ್ನು ಪರಾಮರ್ಶಿಸು ವುದು ಸೂಕ್ತ. ಸೆರೆಮನೆಯಿಂದ ಹೊರ ಬಿಟ್ಟ ಕೈದಿಗಳಲ್ಲೂ 'ಸ್ಟಾಫರೂಮಿನಿಂದ ಮಾಸ್ತರರಿಗೆ ತಂದುಕೊಟ್ಟ ಚಾಕ್ ಪೀಸ್' ಗಳಂಥ ಆಪ್ತವಸ್ತುಗಳನ್ನು ಕಲ್ಪಿಸಿಕೊಂಡ ಕವಿ ಹರಿಹರ ಬಸ್‌ಸ್ಟಾಂಡಿನಲ್ಲಿ ಒಂದು ಸರೀ ಕಡ್ಡಿಗಾಗಿ ಇಡೀ ಪೆಟ್ಟಿಗೆಯನ್ನೇ ಜಾಲಾಡಿದವನ ಅಮಾಯಕತೆಯನ್ನು ಕಣ್ಮುಂದೆ ತರುತ್ತಾರೆ. ಇಂಥ ಸರಳ ಚಿತ್ತಾರಗಳನ್ನು ಆಧಾರವಾಗಿಟ್ಟುಕೊಂಡು ರಸಸ್ಫೂರ್ತಿ ಪಡೆದ ಜಯಂತ ಕಾಯ್ಕಿಣಿಯುವರ ಕವನಗಳು ಮೂಲತಃ ದೃಶ್ಯಾತ್ಮಕ ರಚನೆಗಳು. ಅಂದರೆ ಕವಿಯ ಕಾವ್ಯದಲ್ಲಿ ಯಾವುದೇ ಪ್ರತಿಮೆ, ಸಂಕೇತಗಳಿಲ್ಲದ ಕಡೆಗಳಲ್ಲೂ ಹೆಚ್ಚಿನ ಸಾಲುಗಳಲ್ಲಿ ದೃಶ್ಯಗಳ ಸರಣಿ ಚಿತ್ರಿತಗೊಂಡಿರುತ್ತವೆ. ಕ್ಷುಲ್ಲಕವಲ್ಲದ ಸರಳ ಅನುಭವಗಳು ಕವಿಯ ಮೂಲ ಕಾಳಜಿಯಾಗಿವೆ.

'ಒಂಟಿ ಕಿರಿಗೆಗಾಗಿಯಾದ್ರೂ ಬಂದು ಬಿಡೆ' ಎಂಬಂಥ ಸೊಲ್ಲುಗಳಲ್ಲಿ ಕವಿಯ ಪ್ರಬಲ ಜೀವನ ದೃಷ್ಟಿ-ಆಶಯಗಳು ಸ್ಪಷ್ಟವಾಗುತ್ತದೆ. ಹೀಗೆ ಕವಿ ಆಪ್ತ ಮತ್ತು ನಿರ್ಲಿಪ್ತ ಭಾವಗಳನ್ನು ಅಕ್ಕಪಕ್ಕದಲ್ಲಿಟ್ಟು ಸಮತೋಲನ ಯತ್ನಿಸುವ ವಿಧಾನ ಕಂಡುಬರುತ್ತದೆ..

'ಒಂದು ಜಿಲೇಬಿ' ಕವನದಲ್ಲಿ ನಿರ್ಲಿಪ್ತ ಆಧುನಿಕ ಯುವಕನಿಗೆ ತಾಯಿ ಕೌಟುಂಬಿಕ ಮೌಲ್ಯ, ಮಮಕಾರ ತಿಳಿಹೇಳುವ ಸಂವಾದೀ ತುಣುಕುಗಳಿವೆ. |

ನಿನ್ನಪ್ಪ...ಅವರಿಗೆ ದಾವಣಗೆರೆ ಸರ್ಕಾರಿ ಆಸ್ಪತ್ರೆ
ಹಾಯುವಾಗೆಲ್ಲ ಪ್ರತಿ ಸಲಾನೂ ಖುಷಿಯಂತೆ
ನಮ್ಮ ಬಾಬು ಹುಟ್ಟಿದ್ದು ಇಲ್ಲೇ ಅಂತ
ಪಕ್ಕದವರಿಗೆ ಹೇಳ್ತಾರಂತೆ

ಕಾಯ್ಕಿಣಿಯುವರ ಕವನಗಳಲ್ಲಿ ಇಂಥ ಆಡುಮಾತಿನ ಲಯದೊಂದಿಗೆ, ಕೊನೆಯ ಲೋಕಲ್‌ಗಳು, ಕವಿಸಮಯ, ಪಂಜರದ ಹುಡುಗಿ, ಇಂಥ ನುಡಿಗಟ್ಟುಗಳು ತಲ್ಲಣ, ಕರುಣೆ, ಆಪ್ಯಾಯತೆಗಳ ಭಾವಾವರಣವನ್ನು ಕಲ್ಪಿಸಿ ಕವಿತಾಸಾರವನ್ನು ಹೀರಲು ಓದುಗನನ್ನು ಅಣಿಗೊಳಿಸುತ್ತವೆ. ಈ ಮೇಲಿನಂಥ

ಸಂಚಯ

ನುಡಿಗಳು ತಳಹದಿ ಮರೆತು ತಾಂತ್ರಿಕತೆಯ ನೆರಳಲ್ಲಿ ಯಾಂತ್ರಿಕವಾಗಿ ಶುಷ್ಕಜೀವಿಗಳಾಗುತ್ತಿರುವ ಯುವಜನತೆಯನ್ನು ಬಡಿದೆಬ್ಬಿಸುವಂತಿವೆ. ಕಾಲದ ನವತಿರುವುಗಳಲ್ಲಿ ಜಾರುತ್ತಿರುವ ಪೊಳ್ಳು ಜೀವನ ವಿಧಾನಕ್ಕೊಂದು ತಪ್ಪಿರುವಿನ ಅರಿವನ್ನು ತಿಳಿಸೋ ಪ್ರಯತ್ನವೇ ಸರಿ. ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣಗಳ ಅಬ್ಬರದಲ್ಲಿ ಹಿಂದೇಟು ಹಾಕುತ್ತಿರುವ ಮನುಷ್ಯೀಕರಣದತ್ತ ಒಲವು ತೋರುವ ಈ ಕಾವ್ಯಾನ್ವೇಷಣೆ ಅಗತ್ಯವಾದ ಏನನ್ನೋ ಹೇಳಿದಂತಿಲ್ಲವೆ?. ಪ್ರತಿಯೊಬ್ಬ ಸಾಹಿ ಲೇಖಕನೂ ಮನುಷ್ಯಕೇಂದ್ರಿತ ಅಂಶಗಳನ್ನು ಮನಗಾಣಿಸಲು ಸೃಜನಶೀಲ ಬರಹದಲ್ಲಿ ತೊಡಗುವುದು. ಆದ್ದರಿಂದ ಪ್ರತಿ ಲೇಖಕನ ಮಾನವಕೇಂದ್ರಿತ ನಿಲುವಿನ ಭಿನ್ನತೆಯನ್ನು ಗುರುತಿಸಬೇಕಾದುದು ಅವಶ್ಯಕ. ಜಯಂತ ಕಾಯ್ಕಿಣಿಯವರ ಕಾವ್ಯಮಾಲಿಕೆಯಲ್ಲಿ ಮನುಜತೆಯ ನಿಲುವು ಮನುಜೇತರ ಸಂಗತಿಗಳಲ್ಲಿ ನೋಡುವುದು ಸಮರ್ಪಕ. ಅವರ 'ಬೊಬ್ಬಿ', ಮತ್ತು 'ಎಲೆಗೆ' ಕವನಗಳತ್ತ ಗಮನ ಹರಿಸಬಹುದು.. 'ಎಲೆಗೆ' ಯಲ್ಲಿ ಹಸಿರೆಲೆಯು ತರೆಗೆಲೆಯಾಗಿ ತನ್ನ ಪುಟ್ಟ ಬದುಕಿನ ವಿವಿಧ ಪರಿವರ್ತನೆಗಳ ಹಂತ ದಾಟಿ, ಮೈ ನೆರಿಗೆಗಟ್ಟಿ ಕೊನೆಗೊಮ್ಮೆ ತೊಟ್ಟು ಕಳಚಿ ಜೀಳುವ ನಿರೂಪಣೆ ಕವಿಯು ಮನುಷ್ಯೇತರದಲ್ಲಿ ಮಾನವಸಹಜ ಅವಸ್ಥೆಗಳನ್ನು, ಅವಸಾನವನ್ನು ಕಾಣಿಸುವ ಒಂದು ಪರಿಕಲ್ಪನೆ. ಮನುಷ್ಯತ್ವದ ಪ್ರತೀಕಗಳು ಸರ್ವವ್ಯಾಪಿಯಾದುದು. ಮನುಷ್ಯ ರೂಪ ಹೊಂದಿದ ಮಾತ್ರಕ್ಕೇ ಮಾನವೀಯತೆ ಆತನಿಗಷ್ಟೇ ಮೀಸಲಾಗಿರುವುದಲ್ಲ, ಮಾನವರೊಂದಿಗೆ ಬಾಳುವ ಇತರ ಜೀವಾದಿಗಳಲ್ಲೂ ಮಾನವೀಯ ಸಿಂಚನವಿದೆಯೆಂಬ ಕವಿಭಾವದ ಸುಳಿವು ಸಿಗುವುದು ''ಬೊಬ್ಬಿ'' ಕವನದಲ್ಲಿ. ನಿಷ್ಠಾವಂತ ನಾಯಿಯ ರಸಕ್ಷಣಗಳನ್ನು, ವಿರಸಗಳನ್ನು ಹೊರಗೆಡಹುವ ಇಲ್ಲಿ –

ಋತುಸಮಯಕ್ಕೆ ಗೆಳತಿ ಸಿಕ್ಕರೆ ಸಾಕು ನೆಗೆದು
ಹಾಕಿದ ಅನ್ನದ ಜತೆ ನಿಮ್ಮನ್ನೂ ಉಪೇಕ್ಷಿಸುತ್ತದೆ
ಆಗ ಬೇಜಾರು ಪಟ್ಟಿದ್ದೀರಾ?

ಎಂಬ ಮಾನವ ಸಹಜ ಹಂಬಲಗಳ ಪ್ರಸ್ತಾಪವಿದೆ. ಮನುಷ್ಯರಂತೆ ಭಾವಾವೇಶಕ್ಕೊಳಗಾಗುವ, ಕ್ಷಮೆಯಾಚಿಸುವ, ಕಂಬನಿಗರೆಯುವ ಆಪ್ತ ನಾಯಿಮರಿಯ ಮುದ್ದು ವೈಖರಿಗಳಿವೆ. ಬಾಲನೆಟ್ಟಗಿರುವ ನಾಯಿಯನ್ನು ಮೌಢ್ಯತೆಯಲ್ಲಿ ಕೊಲ್ಲಬೇಕಾದ ಪ್ರಸಂಗದಲ್ಲಿ ಕವಿ ತಥಾಕಥಿತ ಮನುಜನ ಮನುಷ್ಯತ್ವವನ್ನೇ ತೀಕ್ಷ್ಣವಾಗಿ ಪ್ರಶ್ನಿಸುವರು ಕವಿ.

ಹಿರಿದ ಕೋವಿಯೆದುರಿನ ಕಣ್ಣುಗಳನ್ನು ನಿಟ್ಟಿಸಿದಿರಾ?
ಆ ಕಣ್ಣುಗಳಲ್ಲಿ-ಎಲ್ಲೋ ಮುರಿದ ಹಡಗುಗಳ-ಕಂತುವ ಸಂಜೆಗಳ
ಮಳೆಯಲ್ಲಿ ತೋಯ್ದ ಮಸಣಗಳ ಸದ್ದು ಏಳಲಿಲ್ಲವೆ?

ಮನುಷ್ಯನ ದೈಹಿಕ ಭೌತಿಕ ಹೊಂದಾಣಿಕೆಗಳೇ ಕಾಡುವುದೇ ವಿನಹ ಮನುಷ್ಯನನ್ನೆಂದೂ ದೈವತ್ವದೊಂದಿಗೆ ಸಮೀಕರಿಸುವುದಿಲ್ಲ. ದೈವತ್ವದ ಸಾಂಪ್ರದಾಯಿಕ ಪರಿಕಲ್ಪನೆಯೇ ಕಾಯ್ಕಿಣಿಯವರ ಕಾವ್ಯಸಂಗ್ರಹದಲ್ಲಿ ಸ್ಥಾನ ಪಡೆಯದಿರುವುದು ಮನಸಾರ್ಹ. ಜಯಂತರ ಕವನದಲ್ಲಿ ದೇವರೆಂದರೆ ಇಂದ್ರಿಯ ಗ್ರಹಿಸುವ ನಗಾರಿ ಸದ್ದು, ದೇವಳದ ಸಾಲು ಪಣತಿಗಳು, ಮನಮೋಹಕ ಹೂಮಾಲೆಗಳು.ಇವುಗಳಿಂದ ಹೊರತಾದ ದೈವತ್ವದ ವಿಚಾರಗಳ್ಯಾವವೂ ಕವಿಸಂವೇದನೆಗಳಲ್ಲಿ ಪ್ರಕಟ ಪಟ್ಟಿಲ್ಲ. ಅಪ್ಪಟ ಭೌತಿಕ ಛಾಯೆಯಲ್ಲಿರುವ ಕಾವ್ಯವಸ್ತುಗಳಲ್ಲಿ ಕಠಿಣ ನಿಗೂಢತೆಯಿರಬಹುದು, ಯೋಚನಾಲಹರಿಯಲ್ಲಿ ಶುದ್ಧ ಭ್ರಮಾವಾಸ್ತವವಿರಬಹುದು. ಆದರೆ ಪರಲೋಕ, ಪರಮಾತ್ಮಗಳಂಥ

ಆಧ್ಯಾತ್ಮಿಕತೆಯ ಸುಳಿವಿಲ್ಲ, ಕಣ್ಣಿಗೆ ಕಾಣುವ ರೋಚಕ ಅಂಶಗಳೇ ಪೂರ್ತಿ ಆವರಿಸಿಕೊಂಡಿದೆ. 'ಅ ಕಾರ' ಕವನದಲ್ಲಿ ದೇಹದ ಕಂಬನಿ, ಬೆವರು ಮತ್ತು ರಕ್ತಗಳಂಥ ಜೀವದ್ರವ್ಯಗಳ ಕಾರ್ಯಕಾರಣ ಸಂಬಂಧಗಳ ಬಗ್ಗೆ ಕವಿಗೆ ಕೌತುಕ. ಈ ಜೀವದ್ರವ್ಯಗಳ ಪರಸ್ಪರ ಸಾಮರಸ್ಯ ಮತ್ತು ಸಂಘರ್ಷ ಗಳಲ್ಲುಂಟಾಗುವ ಅನುಭವಗಳೇ ಜಯಂತರ ಕಾವ್ಯದ್ರವ್ಯಗಳು. ಅರ್ಥಾತ್ ಕಂಬನಿಗರೆಯುವ, ಬೆವರು ಸುರಿಸುವ, ರಕ್ತಸಂಬಂಧಗಳ, ಮಾಯೆ ಮಮಕಾರಗಳ ಹಿಂದಿರುವ ದೃಢ ಸತ್ಯಗಳು ಇಲ್ಲಿ ಮೂಲದ್ರವ್ಯಗಳಾಗಿವೆಯೆನ್ನುವುದು ಸಮಂಜಸ.

ಮನುಷ್ಯನ ದೇಹಪ್ರಕೃತಿ ಮೈತ್ರಿ ಸಾಧಿಸುವ ವಲಯವೇ ಕಾಯ್ಕಿಣಿಯವರ ಕಾವ್ಯದಲ್ಲಿ ಪ್ರಕೃತಿ, ನಿಸರ್ಗಗಳಾಗಿ ಮೂಡಿ ಬಂದಿದೆ. ಮನುಷ್ಯನಿರುವ ತಾಣಗಳಲ್ಲಿನ ವಾತಾವರಣದಲ್ಲಿ ಕಾಯ್ಕಿಣಿಯವರ ಸಂವೇದನೆಗಳ ಜಾಡಿದೆ. ಕಾವ್ಯ ಕಾಡುಮುಖಿಯಲ್ಲ, ನಾಡುಮುಖಿ. ಇಲ್ಲಿ ಪ್ರಕೃತಿಯೆಂದರೆ ಕಗ್ಗಾಡು, ಕಣಿವೆ, ಪ್ರಪಾತಗಳಲ್ಲ. ಕವಿಯ ಸಹಜ ಸಂವೇದನೆಗಳಿಗೆ ಕಾಡು, ಕಣಿವೆಗಳಂಥ ನಿರ್ಜನ ಪರಿಸರ 'ಪರಕೀಯ' ಅಂತರದಲ್ಲಿರುವುದು ಕಾರಣವಿರಬಹುದು. ಜಯಂತರ ಕವಿತೆಗಳಲ್ಲಿ ನಿಸರ್ಗವೆಂದರೆ ಪ್ರತಿಯೊಬ್ಬರ ಬದುಕಿನ ಅನೂಹ್ಯ ಸಂಗಾತಿಗಳಾದ ಮಳೆ, ಗಗನ, ಸೂರ್ಯ, ಚಂದ್ರ,, ಕಡಲು, ತಾರೆಗಳಾದಿ ವಿಶ್ವ ಹವಾಮಾನದ ಕ್ರೋಢಿಕರಣ. ಜೀವನಶೈಲಿಯ ಪ್ರತಿಕತಿಯೇ ಪ್ರಕೃತಿ. ರಣಸೆಖೆಗೆ ಬೆಂದು ಕೆಂಪಾಗಿ ಮುಳುಗುವ ಸೂರ್ಯ, ಕಡಲ ನೀರಿನಲ್ಲಿ ತಂಗಾಳಿ ಹೆಜ್ಜೆ ತಂಗಾಳಿಗೆ ಬೀಳುವ ಹೂವಿನ ಗಾಯ ಇಂಥ ಅಭಿವ್ಯಕ್ತಿಗಳೆಲ್ಲ ಮನುಷ್ಯ ಬದುಕಿನ ಸಂದರ್ಭಗಳನ್ನು ಪ್ರತಿಫಲಿಸುವಂಥವು. ಶಹರದ ಜನನಿಬಿಡ ಬಿರುಸಿನ ಚಟುವಟಿಕೆಗಳಿಂದ ಕೂಡಿದ ವಾತಾವರಣವೂ ಕವಿಯ ಒಟ್ಟು ಪ್ರಕೃತಿ-ಪರಿಸರ ಪರಿಕಲ್ಪನೆಗಳಲ್ಲಿ ಸೇರುತ್ತವೆ.

'ನಿವೇದನೆ'ಯಲ್ಲಿ 'ಗೊತ್ತೆ ಎಷ್ಟೊಂದು ಝರಿಗಳು ನಿನಾದ ಜಿನುಗಿ ಎಲ್ಲೋ ಕಲ್ಲು ಬೆಟ್ಟಗಳ ನೀರವ ಏಕಾಂತದಲ್ಲಿ....' ಇಂಥ ಅಪರೂಪದ ಸಾಲುಗಳನ್ನು ಹೊರತುಪಡಿಸಿದರೆ, ಕಾಯ್ಕಿಣಿಯವರ ಕಾವ್ಯಚಿತ್ತದಲ್ಲಿ ಪ್ರಕೃತಿ ಕಣ್ಣಿಗೆಟುಕುವ, ಶರೀರ ಸ್ಪಂದಿಸುವ ಆವರಣ. ಮನುಷ್ಯ ಸಮಾಜದಿಂದ ಬೇರ್ಪಟ್ಟು ನಿಶ್ಯಬ್ಧದಲ್ಲಿರುವ ಪರಿಸರವಲ್ಲ, ಮಹಾನಗರದ ಧೂಳಿನ ವಾತಾವರಣ, ಬೃಹತ್ ಜನಸಂದಣಿ, ವಾಹನಗಳ ಡೀಪೋ, ಹೊಲದಾರಿಯಲ್ಲಿ ಚಂಡೆಶಬ್ಧಗಳಂಥ ವಾಸ್ತವಿಕ ದೃಶ್ಯಗಳು ಕಾವ್ಯವಾತಾವರಣ ಸೃಷ್ಟಿಸುತ್ತವೆ.

ಎಲ್ಲ ಕವಿಗಳ ಸೃಷ್ಟಿಶೀಲತೆಯಲ್ಲಿ ವಿಶೇಷ ಪಾತ್ರ ವಹಿಸುವ ಹಕ್ಕಿಗಳ ಪ್ರತಿಮೆ ಕಾಯ್ಕಿಣಿಯವರ ಕವಿತೆಗಳಲ್ಲಿ ನವೀನ ಕೋನದಲ್ಲಿ ಕಾಣಬಹುದು. ಹಕ್ಕಿಗಳಿಲ್ಲಿ ಮನುಷ್ಯನಿಗೆ ನಿಲುಕದ ದೂರಗಳಲ್ಲಿ ಹಾರಾಡುವ ಗಗನವಿಹಾರಿಗಳಲ್ಲ. ಕವಿಯ ಕಾವ್ಯಾಗಸದಲ್ಲಿ ಹಕ್ಕಿಗಳೆಂದರೆ ಮನುಷ್ಯನ ಪಕ್ಕದಲ್ಲೇ ಚಲಿಸಿ, ಬದುಕಿನಲ್ಲಿ ಬೆರೆತ ರೆಕ್ಕೆಮಿತ್ರರು. ಹಕ್ಕಿಗಳು ಬಾನಸಮೀಪವಿರದೆ ಬಾಳಸಮೀಪವಿರುತ್ತವೆ. ಈ ವಿನೂತನ ವಿಚಾರಲಹರಿಯು ಕವಿಯ ಜೀವನಮುಖಿ ಕಾಳಜಿಯನ್ನು ಪ್ರಮಾಣೀಕರಿಸುತ್ತದೆ.

'ಸೂರ್ಯದಳ' ಕವನದಲ್ಲಿ ರೈತರು ವಲಸೆ ಹಕ್ಕಿಗಳೊಂದಿಗೆ ಸನ್ನೆ ಮಾತಿನಲ್ಲಿ ತೊಡಗುವ ಕಲ್ಪನೆಯಿದೆ. ಇನ್ನೊಂದು ಕಡೆ ಅವು ಮನೆಯ ಗೋದಾಮಿನೊಳಗಣ ನುಸುಳುವ' ಜೀವಿಗಳಾಗಿವೆ. ಹಕ್ಕಿಗಳನ್ನು ಸಂಕೇತವಾಗಿ ಬಳಸಿದಲ್ಲೂ ಅವು ಗರಿ ಬಿಚ್ಚಿ ಹಾರಿ ದಿಗಿಲುಗೊಳಿಸುವ ಎತ್ತರಕ್ಕೇರುವುದಿಲ್ಲ. 'ಒಂದೇ ಪಕ್ಷಿ' ಯಲ್ಲಿ ಪಕ್ಷಿಯೊಂದು ಸಹೃದಯತೆಗೆ, ಸಾಂತ್ವನಗಳ ಸಂಕೇತವಾಗಿದೆ. ಕೈದಿಯನು 'ಕಿಟಕಿಯಲ್ಲಿ ಮೈಮರೆಸಲು, ದಾದಿಯರಿಗೆ ಜಾಗರದ ಕನಸಾಗಲು' ಒಂದೇ ಪಕ್ಷಿ ಸಾಕು ಎಂಬ ಕವಿಯ

ಅಭಿಲಾಷೆಯು ಕಾವ್ಯಭೂಮಿಕೆಯಲ್ಲಿ ಆ ಪ್ರತಿಮೆಯ ಆಶಯವನ್ನು ನಿಖರಗೊಳಿಸುತ್ತವೆ. 'ಸಂಜೆ' ಕವಿತೆಯಲ್ಲಿ ಒಂದು ಹಕ್ಕಿಯೇ ಸಂಜೆಯ ರೂಪ ತಾಳಿ ಬಂದಾಗ ಹಕ್ಕಿಯನ್ನು ಅವುಚಿಕೊಳ್ಳುವ ಭ್ರಮೆಯಲ್ಲಿರುವ ವಾಚಕನಿದ್ದಾನೆ. 'ರೆಕ್ಕೆ ಹೆಜ್ಜೆ' ಕವಿತೆಯಲ್ಲಿ ಇವೆಲ್ಲವುಗಳಿಗಿಂತ ವಿಸ್ತೃತವಾದ ನೋಟಗಳಿವೆ.

> "ಅರೆ ಹಕ್ಕಿಯೊಂದು ಓಡ್ತಾ ಇದೆ ನೆಲದ ಮೇಲೆ
> ಮುಂಡ ಹಟವೆ ರೆಕ್ಕೆವಾತವೆ
> ದೋಸ್ತರಿಲ್ಲವೆ ಅದಕೆ ಗಗನಪಥದಲಿ"

ಎಂಬ ಸಾಲುಗಳಿಂದ ಆರಂಭಗೊಂಡ ರೀತಿ ನೋಡಿದರೆ ಕವಿ ಹಕ್ಕಿಯನ್ನು ಸಂಪೂರ್ಣ ನೆಲಕ್ಕಷ್ಟೇ ಸೀಮಿತಗೊಳಿಸುವುದೇ ಎಂಬ ನೀರಸ ಭಾವ ಕಾಡುತ್ತದೆ.ಆದರೆ ಕವನಾಂತ್ಯದಲ್ಲಿ ಪ್ರತಿಮೆ ಅನಿರೀಕ್ಷಿತ ಮಟ್ಟಕ್ಕೇರುತ್ತದೆ. ವಿಕೃತ ವಾಸ್ತವದಲ್ಲಿ ಹಾದು ಹೋದ ಹಕ್ಕಿಯು ಅದರ ಮೂಲ ತಾಣವಾದ ಬಾನಲ್ಲಿರುವುದೇ ಸರಿಯೇನೋ ಎಂಬ ಜಿಜ್ಞಾಸೆಗೊಳಗಾದ ಕವಿ ಒಂದು ಜೀವ ತನ್ನ ಮೂಲ ಅಸ್ತಿತ್ವವನ್ನು ಮರೆಯದೇ ಪರಿಪೂರ್ಣತೆ ಹೊಂದಬೇಕಾದ ಅನಿವಾರ್ಯತೆಯ ಮೇಲೆ ಬೆಳಕು ಚೆಲ್ಲುತ್ತಾರೆ. ಬೈಬಲ್‌ನ ವಾಕ್ಯ "In the beginning a word, in the end a symbol" ಭಾವಾರ್ಥದಲ್ಲಿ ಇಲ್ಲಿ ಹಕ್ಕಿ ಮನುಷ್ಯನ ಅಸ್ತಿತ್ವಾನ್ವೇಷಣೆಯ ದ್ಯೋತಕವಾಗುತ್ತದೆ. ಅಭಿಜಾತ ಸ್ವರೂಪದ ಅಗತ್ಯತೆ, ಅನನ್ಯತೆಗಳ ಮಹತ್ವ ವ್ಯಕ್ತವಾಗಿದೆ.

> 'ಆಕಾಶದಿಂದಲೇ ನೋಡಬಹುದಿತ್ತೇನೋ ಇದನ್ನು
> ಆಗ ಕಾಣುತಿತ್ತು ಕವಿತೆಯೊಂದು
> ಗಗನಕ್ಕೇರಿದರೆ ರೆಕ್ಕೆಗಳು ತಂತಾನೇ ಬೀಸುತ್ತವೆ'

—ಎನ್ನುವುದರಲ್ಲಿ ಯಾವುದೇ ವಸ್ತುವಿನ ಮೂಲ ತಾಣದ ಮಹತ್ವದರಿವು ಕವಿಗಿರುವುದು ತಿಳಿದು ಬರುತ್ತದೆ. ಅಲ್ಲದೆ ಕಾಯ್ಕಿಣಿಯವರ ಕಾವ್ಯಕಣಜದಲ್ಲಿ ಕೆಲವು ನಿರ್ದಿಷ್ಟ ಬಗೆಯ ಪ್ರಕಾರಗಳನ್ನು ಗುರ್ತಿಸಬಹುದು. 'ಸರಪಳಿ' ಮತ್ತು 'ನನಗೇನೆನ್ನಲಿ' ಕವಿತೆಗಳು ವಿಷಾದಮಯ ಘಟನೆಗಳನ್ನು ಹುದುಗಿಸಿಕೊಂಡ ಬ್ಯಾಲಡ್ ಅಥವಾ ಲಾವಣಿ ಪದ್ಯಗಳು.ಲಾವಣಿಗಳು ಲೇಖಕನನ್ನು ಬಾಧಿಸುವ ತೀಕ್ಷ್ಣ ಕ್ಷೋಭೆಗಳನ್ನು ತೋರ್ಪಡಿಸುವವು ಅಥವಾ ತೀವ್ರ ಹತಾಶೆಗೊಳಗಾದ ಪರಕೀಯ ಅನುಭವಗಳೂ ಕವಿಕಲ್ಪನಾ ಜಾಡಿನಲ್ಲಿ ಹೊಸ ರೂಪ ತಾಳುತ್ತದೆ. 'ಸರಪಳಿ' ಯಲ್ಲಿ ತನ್ನ ಮಾಸ್ತರರ ಇಬ್ಬರು ಮಕ್ಕಳು ದುರ್ಮರಣಕ್ಕೀಡಾದ ಸನ್ನಿವೇಶ, 'ನನಗೇನೆನ್ನಲಿ' ಯಲ್ಲಿ ಕಠ್ರನೇ ಸುಟ್ಟು ಹೋದ ಬೆಳ್ಳನೆ ಮಗುವಿನ' ಅವಘಡದಲ್ಲಿ ಕವಿ ತನ್ನ ಅಸಹಾಯಕತೆ ಹೇಳಿಕೊಂಡಿರುವುದು ಮನೋಜ್ಞವಾಗಿದೆ.

ಜಯಂತ ಕಾಯ್ಕಿಣಿಯವರ ಕಾವ್ಯಭೂಮಿಕೆಯ ವ್ಯಕ್ತಿಚಿತ್ರಣಗಳು ಒಡಮರೂಪದ ಸಾಲುಗಳಲ್ಲಿ ಖ್ಯಾತನಾಮರ ವ್ಯಕ್ತಿತ್ವಗಳ ರಂಜನೀಯ ಮುಖಗಳನ್ನು ಹಿಡಿದಿಡುತ್ತವೆ. ಈ ವ್ಯಕ್ತಿ ಚಿತ್ರಕಗಳಲ್ಲಿ ಸಮಗ್ರ ವ್ಯಕ್ತಿತ್ವವನ್ನೂ ಕೆದಕಿ ಕಾವ್ಯಮಯವಾಗಿಸಬೇಕೆಂಬ ಹಟವಿಲ್ಲ. ಮಂಜೇಶ್ವರ ಗೋವಿಂದ ಪೈ ಯವರ ಬಗೆಗಿನ 'ನೇರಿಳೆ ಬಣ್ಣದ ಶಾಯಿ' ಮತ್ತು ಶಿವರಾಮ ಕಾರಂತರ ಬಗೆಗಿನ 'ತೀರದ ಭಾರ್ಗವ' ಇವೆರಡು ಚರಮಗೀತೆಗಳು. 'ರೂಪಾಯಿ ಆಣೆ ಪೈ ಆಣೆ ಲೆಕ್ಕಕ್ಕೇ ಸೈ' ಎನಿಸಿಕೊಂಡ ಸಮುದಾಯದಿಂದ ಧಿಗ್ಗನೆದ್ದು ಸಾಹಿತ್ಯ ಕಾಯಕದಲ್ಲಿ ತೊಡಗಿದ ಗೋವಿಂದ ಪೈಯವರ ಧೀಮಂತಿಕೆಯನ್ನು ಕವಿ ಕಾಣುವ ಪರಿಯೇ ಬೇರೆ. ಸಾಹಿತಿಯೋರ್ವನನ್ನು ರೂಢಿಗತ ಸಾಮುದಾಯಿಕ ಪೂರ್ವಾಗ್ರಹಗಳಿಂದ ಬೇರ್ಪಡಿಸಿ

ರಾಷ್ಟ್ರಕವಿಯ ಸಾಧನಗಾಥೆಯನ್ನು ಬಿಂಬಿಸುವರು. ಶಿವರಾಮ ಕಾರಂತರ ಕಲಾಸಾಧನೆಯ ಆಯಾಮಕ್ಕೆ ಈ ವ್ಯಕ್ತಿಚಿತ್ರಣದಲ್ಲಿ ಪ್ರಾಶಸ್ತ್ಯ..ದೇಹಾಂತಗೊಂಡ ಕಾರಂತರನ್ನು ಕುರಿತು 'ಒಬ್ಬರೇ ರೆಕ್ಕೆಗಳನ್ನು ಕಟ್ಟಿಕೊಳ್ಳುತ್ತಿದಾರೆ ಚೌಕಿಯಲಿ' ಎನ್ನುವರು.ಕವಿ ಬಾಲವನದ ಕೊಂಬೆಯಲ್ಲಿರುವ ಒಂಟಿ ಖಾಲಿ ಜೋಕಾಲಿ ಕಂಡು ವ್ಯಸನ ಪಡುತ್ತಾರೆ.

ಕನ್ನಡದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸುನೀತಗಳ ಮೂಲಕ ವ್ಯಕ್ತಿಚಿತ್ರಣ ನೀಡಿದ ಹಿರಿಯ ಕವಿ ಚೆನ್ನವೀರ ಕಣವಿಯವರ ಬಗ್ಗೆಯೇ ಕವಿ ಚಿತ್ರಿಸಿದ್ದು ವಿಶೇಷ . ಅದೂ ಕೂಡ ಕಣವಿಯವರ 'ಸುನೀತ' ಗಳ ಒಲವನ್ನು ಹೇಳುವ ಕವಿತೆಯಾಗಿರುವುದೊಂದು ವೈಶಿಷ್ಟ್ಯ.

'ಪಪ್ಪನಿಗೆ' ಕವನ ಶೀರ್ಷಿಕೆ ಸೂಚಿಸುವಂತೆ ಜಯಂತರು ತನ್ನ ತಂದೆ ಡಾ.ಗೌರೀಶ ಕಾಯ್ಕಿಣಿ ಯವರನ್ನು ಕುರಿತು ಬರೆದಿರುವುದರಲ್ಲಿ ಮಾತ್ರ ವೈಯುಕ್ತಿಕ, ಕೌಟುಂಬಿಕ ಆಯಾಮಗಳೂ ಸೇರಿ ಕೊಂಡಿವೆ. ಪಪ್ಪ 'ನನ್ನ ಪಾಲಿಗೆ ಹಸಿರಿನ ಹಾಗೆ, ನೀಲಿಯ ಹಾಗೆ' ಎಂಬ ಒಡಮ ರೂಪಿ ಸಾಲುಗಳಲ್ಲಿ ತನ್ನನ್ನಾವರಿಸಿದ ಪ್ರೀತಿಯ ಪಪ್ಪನ ಬಗೆಗಿರುವ ನಂಟಿನ ನಿವೇದನೆಯಿದೆ.'ಧ್ರುವಗಳಾಗುತ್ತವೆ ತಾನೆಷ್ಟು ಬರೆದರೂ' ಎಂದು ಗೌರೀಶರ ಉದಾತ್ತತೆಯೆದುರು ತಾನೇನೂ ಅಲ್ಲವೆಂದು ಸ್ವಗತಿಸುವರು. ಸಾಹಿತ್ಯ ಕ್ಷೇತ್ರ ಮಾತ್ರವಲ್ಲದೆ ಜನಮಾನಸದಿಂದ ಮರೆಯಾದ ಹಿಂದಿ ಚಿತ್ರರಂಗದ ಪ್ರಖ್ಯಾತ ಗಾಯಕ ತಲತ್ ಮೆಹಮೂದ್ ಬಗ್ಗೆಯೂ ಕವಿ —

ಬೆಳದಿಂಗಳ ಹೊಳೆಯೆಡೆಗೆ ನಡೆದಿರುವ ಸಂತ
ಎದೆ ತೆರೆದು ಹಾಡಿದವಗೆ ದಣಿವೆಲ್ಲಿ

ಎಂದು ತೊಂಬತ್ತರ ದಶಕದಲ್ಲಿ ಬರೆದ 'ತಲತ್ ನೀನೇಕೆ ಹಾಡುತ್ತಿಲ್ಲ?' ಕವಿತೆಯಲ್ಲಿ ಅಭಿಮಾನ ಪೂರ್ವಕ ನುಡಿಗಳಾಡಿ ಕೊನೆಗಾಲದಲ್ಲಿ ಹಾಡುವ ಅವಕಾಶ ಸಿಗದ ಮಾಜಿ ಗಾಯಕನ ಬಗ್ಗೆ ಭಾವೀ ಗೀತರಚನಕಾರನ ಸಹೃದಯತೆಯಿದೆ.

'ಮದುವೆ ಮಂಟಪದಲ್ಲಿ ನಿನ್ನೆ' ಮತ್ತು 'ಚುಂಬನ' ಆಂಗ್ಲ ಸಾಹಿತ್ಯದಲ್ಲಿ ಡಾಗರೆಲ್(ಬಗದಾಳ) ಅನಿಸಿಕೊಳ್ಳುವ ವ್ಯಂಗ್ಯ, ವಿನೋದಗಳ ಸಮಪಾಕದಲ್ಲಿ ನಗೆಯುಕ್ಕಿಸುವ ಕಿರುಗವನಗಳು.ಮದುವೆ ಮನೆಯ ಘನ ಆಡಂಬರ,ಗೊಡ್ಡು ಸಿರಿವಂತಿಕೆಗಳನ್ನು ಅಪಹಾಸ್ಯ ಮಾಡುವ ಕವಿತೆ.

'ಚುಂಬನ' ಅಪಘಾತದಂಥ ಭೀಕರ ಘಟನೆಯ ದುರಂತದ ತೀವ್ರತೆಯನ್ನು ಲಘುಗೊಳಿಸಿ ಸಮಾಧಾನಪಡುವಂಥ ಬ್ಲ್ಯಾಕ್ ಹ್ಯೂಮರ್ ಶ್ರೇಣಿಯ ಪದ್ಯ.

ಈ ಹಿಂದೆ ಹೇಳಿದಂತೆ ಕಾವ್ಯವಸ್ತುವಿಗೆ ಆತುಕೊಂಡಿರುವ ಗತದೊಂದಿಗೇ ಅವ್ಯಾಹತ 'ಗತಿ' ಯೂ ಇರುತ್ತದೆ. ಜಯಂತರ ಕವನಗಳಲ್ಲಿ ವಿಷಯಾದಿಗಳು ಚಲನಗತಿಯಲ್ಲಿರುತ್ತವೆ. ಚಲನದಲ್ಲಿರುವ ಸ್ತಬ್ಧತೆ ಮತ್ತು ಸ್ತಬ್ಧತೆಯಲ್ಲಿರುವ ಚಲನೆ ಕಾಯ್ಕಿಣಿಯವರ ಕಾವ್ಯದ ಸೂಕ್ಷ್ಮ ಓದಿನಲ್ಲಿ ಎದ್ದು ಕಾಣುವುದಲ್ಲದೇ ಅವರ ಕಾವ್ಯಾಭಿವ್ಯಕ್ತಿಗೆ ವೈಯುಕ್ತಿಕ ಛಾಪು ನೀಡಿದ ಅಂಶವೆನ್ನಬಹುದು.ಅಲ್ಲದೇ ಜಯಂತರ ಕವನಗಳಿಗೊಂದು ಧಾವಂತ ನೀಡಿದೆ. ಆರಂಭದ 'ಬಸಳೆ-ನಾನು' ದಲ್ಲಿ ಬಸಳೆಯಂತೆ ಕಡಿದಷ್ಟೂ ಚಿಗುರುವ ವೈಖರಿಯನ್ನು ವ್ಯಕ್ತಿಗತ ನೆಲೆಯಲ್ಲಿ ಧ್ವನಿಸಿದ ಕವಿಯ ಮುಂದಿನ ಕವಿತೆಗಳಲೆಲ್ಲ ಅದೇ ಜೀವದಾಯಕತೆ ನಳನಳಿಸುತ್ತದೆ.'ಗೊಬ್ಬರ ಗುಲಾಬಿಯಾಗಿಸುತ್ತ ಮಣ್ಣು ಮೊಗ್ಗಾಗಿಸುವುದರತ್ತ ಒಲಪಿರುವ ಚೇತೋಹಾರಕ ನಿಲುಪಿನ ಕಾವ್ಯಸೃಷ್ಟಿಯಿದು.

ಸಂಕಯ

‘ಬಟನ್ ಮೂಲ’,’ಒಂದೇ ಚಂದ್ರ’,’ಇಲ್ಲಿ ಒಂದು ರಾತ್ರಿ’,’ಅಘನಾಶಿನಿ ತಡಿಯಲ್ಲಿ ಸಂಪಿಗೆ ಮರ’,’ನಡಿಗೆ’ ಗಳಲ್ಲದೇ ಹೆಚ್ಚಿನೆಲ್ಲ ರಚನೆಗಳಲೂ ಕಾವ್ಯಸಂಗತಿ, ಸಾಲುಗಳಲ್ಲಿ ಚಲನಗತಿಯು ಅಂತಸ್ಥವಾಗಿದೆ. ಜಯಂತರ ಅದೃಶ್ಯದ ಹುಡುಕಾಟದಲ್ಲಿ ಚತುರ ಹುಡುಗಾಟವಿದೆ. ಬಟನ್ ಮೂಲ ಕವಿತೆಯಲ್ಲಿ ಸ್ತಬ್ಧವಾದ, ನಿಂತ ಕೆಟ್ಟು ಹೋದ ಟೆಂಪೊದಿಂದ ಹೊರಜೀಳುವ ಬಟನ್ ಮೊಲ ತನ್ನನು ತಯಾರಿಸಿದ ಮಾತೃಸ್ವರೂಪಿಯನ್ನು ಹುಡುಕಿಕೊಂಡು ಹೋಗುವ ಚಿತ್ರಾರವಿದೆ.ಸ್ತಬ್ಧದಿಂದ ಸಾಗುವ ಕಾವ್ಯಧಾತು ತನ್ನ ಮೂಲ ಜಾಡನ್ನು ಅರಸಲು ಹೋಗುವುದರ ವ್ಯಾಪಕಾರ್ಥಗಳು ನಿಚ್ಚಳವಾಗಿದೆ.

> ಕತ್ತು ಚಾಚಿ ಅತ್ತಿತ್ತ ನೋಡಿ ಮನೆ ತುಂಡುಗಳ ಮೂಸುತ್ತ
> ಚಂಗನೆ ಟೆಂಪೋದಿಂದ ನೆಗೆದು ನಡುಬೀದಿಯಲ್ಲಿ ಓಡುತ್ತಿದೆ
> ಪೋಣಿಸಿದ ತಾಯನ್ನು ಅರಸಿಕೊಂಡು

ಈ ಚಲನಶೀಲತೆಯ ಸಂಗತಿಗಳ ಪುರಾವೆ ನೀಡುತ್ತಾ ಹೋಗುವುದು ಇಲ್ಲಿ ಉದ್ದೇಶವಲ್ಲ. ಬದಲಾಗಿ ಕವನದ ಪರಿಮಿತಿಯಲ್ಲಿ ವಸ್ತು ಚಲನೆಯು ಒಂದು ನಿರ್ದಿಷ್ಟ ಪರಿಮಿತಿಯಲ್ಲಿರುತ್ತವೆಂಬ ಅಂಶವನ್ನು ಪರಿಗಣಿಸುವುದು. ಚಲನಗತಿಯ ಕಾವ್ಯವಸ್ತು ಸಹೃದಯ ಪ್ರತಿಸ್ಪಂದನದಲ್ಲಿ ಅಮಿತ ಅರ್ಥಸಾಧ್ಯತೆಗಳನ್ನು ತೆರೆಸುತ್ತವೆ. ಕಥೆ, ಕಾದಂಬರಿಗಳ ಶಿಲ್ಪದ ವ್ಯಾಪಕತೆಯಲ್ಲಿ ಸಿಗುವ ವಿಸ್ತಾರ ಪರಿಪೂರ್ಣತೆ ಕವನದಲ್ಲಿ ಲಭಿಸಲಾರದು. ಕಾಯ್ಕಿಣಿಯವರ ಕಾವ್ಯ ಸಂಗತಿಗಳ ವೇಗಕ್ಕೆ ತಕ್ಕ ಕ್ಷಿಪ್ರಗತಿಯ ಭಾವಸ್ಪಂದನ ಮಾತ್ರ ಕವಿಸೂಚಿತಾರ್ಥಗಳನ್ನು ನೀಡುತ್ತವೆ.

‘ಒಂದು ಚಂದ್ರ’ದಲ್ಲಿ ಕವಿಗಳ ಮನೆಯಂಕಣದ ಬಣ್ಣದ ಬೀಸಣಿಗೆಯಿಂದ ಹೊರಬಂದು ಬೀದಿಗಿಳಿದ ಚಂದ್ರಮನ ವಿನೋದಮಯ ನಿರೂಪಣೆಯಿದೆ. ಊರಿನ ಭೌತಿಕ ಪರಿಸರವನ್ನು ದಾಟಿ, ಗೋರಿ, ಗುಹೆಗಳಾಚೆಯ ಮುರ್ಕಿಯಲ್ಲಿ—

> ಯಾರಿಲ್ಲ ಎಂದು ಖಾತ್ರಿ
> ಆದದ್ದೇ
> ಕಪ್ಪು ಕನ್ನಡಕ ಬಿಗಿದುಕೊಂಡು
> ಗಪ್ ಚಿಪ್ ಕಾಮಿನಿಯರ ಕೇರಿ
> ಹೊಕ್ಕುಬಿಟ್ಟ

ಅಣಕು ಮಿಶ್ರಿತ ವಿನೋದದ ಧಾಟಿಯ ಈ ರಚನೆಯಲ್ಲಿ ನಮ್ಮ ನಡುವಿನ ವ್ಯಕ್ತಿಗಳ ಕಳ್ಳಾಟಿಕೆಗಳ ಪ್ರತಿಮೆಯಾಗಿ ಚಂದ್ರನಿರುವುದೇ ವಿನಹ ಗಗನಸಂಚಾರಿಯಾಗಲ್ಲ. ಗಗನವಿಹಾರಿಯನ್ನು ಬದುಕಿನತ್ತ ಆಹ್ವಾನಿಸಿ ಪ್ರತೀಕವಾಗಿಸುವ ಪ್ರಯತ್ನವಿದೆ. ಕವಿಗೆ ಮರ-ಸಸಿಗಳ ಸ್ತಬ್ಧತೆ ಕಾಡುತ್ತದೆ ‘ಹಕ್ಕಿ ಕೂರದ ಕೊರಗು’ ಮತ್ತು ‘ಸಹವಾಸ’ ಕವಿತೆಗಳಲ್ಲಿ ಆ ತಟಸ್ಥದಲ್ಲಿ ಸಂಚಲನ ಕಾಣುವ ತವಕವಿದೆ. ಜುಹು ಪಾರ್ಕ್‌ನಿಂದ ತಂದ ಸಸಿ ಆಪ್ತಕ್ಷಣಗಳ ಒಡನಾಡಿಯಾಗಿ, ಕವನಾಂತ್ಯದಲ್ಲಿ ‘ನಾನು ನಡೆದು ಹೋಗುತ್ತಿದ್ದಾಗಲೇ ಹೇಳದೇ ಮನೆಯಿಂದ ಸಸ್ಯ ಹೊರಟುಹೋಯಿತು’ ಎನ್ನುವ ಪ್ರಸ್ತಾಪವಿದೆ. ’ಆ ಕಿಟಕಿ’ ಕವಿತೆಯಲ್ಲಿ ನಿಶ್ಚಲತೆ, ನಿಗೂಢತೆಗೆ ಸಂಬಂಧಪಟ್ಟ ವಿಚಾರಗಳಲ್ಲೂ ಕವಿ ‘ಓಡಿದ ಪೋರ ಓಡುತ್ತಲೇ ಇರುವನೇ ಬೇರೆ ದಾರಿಗಳಲ್ಲಿ’ ಎಂಬ ಅನಂತ ಚಲನೆಯನ್ನು ಧ್ವನಿಸುತ್ತಾರೆ.’ಅಘನಾಶಿನಿ ತಡಿಯಲ್ಲಿ ಸಂಪಿಗೆ ಮರ’ದಲ್ಲಿ ಹರಿಯುವುದು, ತೇಲುವುದು, ಬೀಳುವುದು ಏರಿಳಿಯುವುದು ಇಂಥ ವೈವಿಧ್ಯಮಯ ಚಲನಕ್ರಿಯೆಗಳಿವೆ. ಈ ಕ್ರಿಯಾದ್ರವ್ಯಗಳಿಂದಲೇ ಜಯಂತರ ಕವನಗಳಲ್ಲಿ ಸಂಚಲನವುಂಟಾಗುತ್ತವೆ. ಒಟ್ಟಿನಲ್ಲಿ ಪ್ರಚ್ಛನ್ನ ಶಕ್ತಿಯಲ್ಲಿ ಶೋಧಿಸಿದ ಚಲನಶಕ್ತಿಯೇ ಜಯಂತರ ಕಾವ್ಯಶಕ್ತಿಯಾಗಿದೆ.

ಕವನಗಳಿಗೆ ಸೊಗಸು ಮತ್ತು ಶ್ರೇಷ್ಠತೆ ನೀಡುವ ಕಾವ್ಯಶಕ್ತಿಯ ಗಳಿಕೆಯೊಂದು ಸುದೀರ್ಘ ಪ್ರಕ್ರಿಯೆ. ಕವಿಯ ಗ್ರಹಿಕೆ ಮತ್ತು ಸಂವೇದನೆಗಳು ನವಪಥದತ್ತ ಹೊರಳಿ ವಿಕಸಿಸುವಾಗ ಈ ಕಾವ್ಯಶಕ್ತಿಯೂ ಬೆಳೆಯುತ್ತದೆ. ಕವಿಮುಖೇನ ಕಾಣಬೇಕಾದ ಈ ವಿಕಾಸಪ್ರಜ್ಞೆ ಕಾವ್ಯಶಕ್ತಿ ಮತ್ತು ಕವಿಯ ಭಾವ ವಿಕಾಸಗಳೆರಡರ ಸಮಾಗಮ.

ಕಾಯ್ಕಿಣಿಯವರ ಮೊದಲ ಸಂಕಲನ 'ರಂಗದಿಂದೊಂದಿಷ್ಟು ದೂರ'ದಲ್ಲಿ ವಿಚಾರವಂತಿಕೆಯ ಹಿನ್ನೆಲೆಯಾದಂಥ ಆಹ್ಲಾದಕಾರಿ ಭಾವಪ್ರಧಾನ ಕವನಗಳಿವೆ. ಬದುಕಿನ ಗಂಭೀರತೆಯನ್ನು ತುಸು ಬದಿಗಿಟ್ಟು ಕಾವ್ಯ ಆಸ್ವಾದಿಸಬೇಕೆನ್ನುವ ಕಾಯ್ಕಿಣಿಯವರು ಕಾವ್ಯಕ್ಕೆ ಜೀವಶಕ್ತಿ ಒದಗುವ ವಿಷಯದಲ್ಲಿ ಗಂಭೀರ ಚಿಂತನೆ ನಡೆಸಿದಂತಿದೆ. ಬೇಂದ್ರೆಯವರ ಮಾತಿನಂತೆ ಕಾವ್ಯಪರಂಪರೆ ಕವಿಯ ಜೀವಜೀವಾಳದಲ್ಲಿ ಬೆರೆಯಬೇಕೆಂಬ ಕಾವ್ಯನಿಷ್ಠೆಯನ್ನು ಆಶಿಸುವಂಥ 'ಕವಿತೆ' ಗಳನ್ನು ಕಾವ್ಯವಸ್ತುವಾಗಿಸಿದ ಸಾಕಷ್ಟು ಕವನಗಳಿವೆ. ಒಬ್ಬ ಕವಿ ಕಾವ್ಯ ಸಾರ್ಥಕತೆ ಪಡೆಯಲು ಮನಗಾಣಬೇಕಾದ ಕಾವ್ಯನಿಷ್ಠೆಯ ಬಗ್ಗೆ ಕಾಯ್ಕಿಣಿಯವರ ಅತ್ಯಂತ ಸರಳ ನುಡಿಗಳಿವೆ. ಕಾವ್ಯಾಧ್ಯಯನದ ದೃಷ್ಟಿಯಿಂದಲೂ ಪರಿಶೀಲಿಸಬೇಕಾದ ರಚನೆಗಳಿವು.

ಅತಿ ಸಣ್ಣ ವಯಸ್ಸಿನಲ್ಲಿ ಬರೆದ 'ಅಸ್ತಿತ್ವ' ಕವನದಲ್ಲಿ ಕಾಯ್ಕಿಣಿಯವರ ಕಾವ್ಯಕೃಷಿಯ ಮೂಲ ಸೆಲೆಗಳನ್ನು ಸೂಕ್ಷ್ಮವಾಗಿ ಗ್ರಹಿಸಬಹುದು. ಅಲ್ಲಿ ವಾಚಕ ತಾನೊಂದು ಬುಗುರಿಯಾಗಿ ಗುರುತ್ವಕೇಂದ್ರದ ಸುತ್ತ ತಿರುಗುತ್ತಿದ್ದರೆ ಮಾತ್ರ ತನಗೊಂದು ಅಸ್ತಿತ್ವ ಅಥವಾ ಗುರಿ ಎನ್ನುವ ಧೃಢ ಆಶಯ ತಾಳುವುದಿದೆ. ಕವಿಗೆ ತನ್ನೆಲ್ಲ ಗ್ರಹಿಕೆಗಳನ್ನು ಯಾವುದಾದರೊಂದು ರೂಪದಲ್ಲಿ ವ್ಯಕ್ತಪಡಿಸಬೇಕೆಂಬ ಅಂತರಂಗದ ಒತ್ತಾಸೆ. ಸಾಹಿತ್ಯದ ಪರಿಸರದಲ್ಲೇ ಬೆಳೆದ ಕವಿ ಕಾಯ್ಕಿಣಿಯವರಿಗೆ ಸಾಹಿತ್ಯಿಕ ಅಭಿವ್ಯಕ್ತಿಯೇ ತನ್ನ ಇರುವನ್ನು ಶೋಧಿಸುವ ಸರಾಗ ಮಾಧ್ಯಮವಾಯಿತು. ಸಾಹಿತ್ಯಸೃಷ್ಟಿಯೇ ಈ ಶೋಧನೆಯ 'ಗುರಿ', ಕಥನ-ಕವನಗಳೇ ಆ ಗುರಿ ಸೇರುವ ದಿಕ್ಸೂಚಿಗಳಂತೆ, ಸಾಹಿತ್ಯಿಕ ನೆಲೆ ಒದಗಿಸಿದ್ದು. ಹೀಗೆ ತನ್ನ ಜೀವಾಳದ ಗ್ರಹಿಕೆ, ಸುಳಿವ ಭಾವಗಳನ್ನು ಅನುಭವವಾಗಿಸುವ ಛಂದಯುಕ್ತ ಚಾತುರ್ಯದ ಪದಬಳಕೆಯ ರಚನೆಗಳಲ್ಲಿ ತೊಡಗಿದ್ದು ಅವರ ಆರಂಭಿಕ ಕವನಗಳಲ್ಲಿ ಕಾಣುವುದು.

'ಮೂರನೇಯತ್ತೆಯ ಮಳೆ' ಮತ್ತು 'ಆತಂಕ' ಕವಿತೆಗಳನ್ನು ಕವಿಯ ಭಾವ ವಿಕಾಸದ ಆರಂಭಿಕ ಮಾದರಿಯೆನ್ನಬಹುದು. ಎರಡೂ ಕವಿತೆಗಳಲ್ಲಿ 'ಮಳೆ' ಯೇ ಮುಖ್ಯ. ಮೊದಲನೆಯದರಲ್ಲಿ ಮಳೆ ತರುವ ಪುಳಕ, ಚೇತೋಹಾರಿಕೆಗಳಿದ್ದರೆ, 'ಆತಂಕ' ದಲ್ಲಿ ಪುಳಕದೊಂದಿಗೆ ತತ್ತರವಿದೆ. ಕಂಪನವೂ ಇದೆ. 'ಹಸಿ ಹುಲ್ಲುಮರಿಗಳಿಗೆ ಹಸಿರುಗಟ್ಟುತ್ತಿರುವ ಎಳೆ ಪಾಚಿಗರಿಗಳಿಗೆ ಮಾತ್ರ ಎಲ್ಲವೂ ಅನಿರೀಕ್ಷಿತ ಹೆದರುಗಟ್ಟುವ ಬೆವರು' ಎನ್ನುವ ಚರಣವಿದೆ. ಹಿಂದಿನ ಕವನದಲ್ಲಿರದ ಮಳೆಯ ವೈವಿಧ್ಯಮಯ ಪ್ರಭಾವ 'ಆತಂಕ' ದಲ್ಲಿದೆ. ಈ ರೀತಿ ಭಾವಾಭಿವೃದ್ಧಿಯ ತಂತುಗಳ ಪೋಣಿಸಿ ಕಾವ್ಯ ಹೆಣೆಯುವ ಕಾಯ್ಕಿಣಿಯವರು ಕವಿತಾ ಉಗಮ ಮತ್ತು ದಕ್ಷತೆಯ ಬಗ್ಗೆ ಆಳವಾಗಿ ಯೋಚಿಸಿದ್ದಾರೆ. ಕಾಯ್ಕಿಣಿಯವರ ಕಾವ್ಯಚಿಂತನೆಯಲ್ಲಿ ಕಾವ್ಯವು ಕೇವಲ ಅನುಭವದ ಅಭಿವ್ಯಕ್ತಿಯಲ್ಲ, ಅನುಭವದ, ಶೋಧನೆಯ ಪ್ರದರ್ಶನವೂ ಅಲ್ಲವೆಂಬ ಮನೋಭಾವನೆಯಿದೆ. ಕವಸಗಳ ಸ್ವರೂಪ, ಸೃಜತೆ ಹಾಗೂ ಅರ್ಥವಂತಿಕೆಗಳ ಬಗ್ಗೆ ತನ್ನದೇ ಆದ ಆಗ್ರಹ, ದೃಷ್ಟಿಕೋನಗಳನ್ನಿಟ್ಟುಕೊಂಡು ಕವಸದ ಬಲಾಬಲಗಳನ್ನು ತೀವ್ರವಾಗಿ ಮಥಿಸುತ್ತಾ ಕಾವ್ಯಮಾರ್ಗ ಹಿಡಿದ ಕವಿಯಾಗಿದ್ದಾರೆ.

'ಅರ್ಥ', 'ನೀನಾಗಲು', 'ಸನ್ನ ಕವಿತೆ', 'ಅನುಭವ ಇಲ್ಲದ ಕವಿತೆ' ಇಂಥ ಹಲವಾರು ಕವಿತೆಗಳು ಕಾಯ್ಕಿಣಿಯವರ ಕಾವ್ಯದೃಷ್ಟಿಯನ್ನು ಸೂಚಿಸುತ್ತವೆ. ಕಾಯ್ಕಿಣಿಯವರಿಗೆ ಕವಿತೆಯೆಂದರೆ ಯಾವುದಾದ

ರೊಂದು ವಿಷಯದ 'ಮೇಲೆ' ಬರೆಯುವುದಲ್ಲದೇ, 'ಮೂಲಕವೂ' ಬರೆಯುವುದಾಗಿರಬೇಕೆಂಬ ಅಭಿಮತ. ಕವಿಗೆ ಕವಿತೆಯೆಂದರೆ 'ನಾನೇ ನೀನಾಗುವ' ಲೌಕಿಕ ಅದ್ವೈತಭಾವದಲ್ಲಿ ಮೈದಾಳುವ ಶಿಲ್ಪಗಳಾಗಿವೆ.

ಆದಷ್ಟು ಯತ್ನಿಸುತ್ತೇನೆ ನೋಡು
ನೀನಾಗಲು
ತಪ್ಪಿದರೆ ನಿನ್ನ ಬಗೆಗಿನ ಕವಿತೆಯಾಗಲು

ಇಂಥ ನಿವೇದನೆಗಳಿರುವ ಕವನಗಳನ್ನು ಅವಲೋಕಿಸುವಾಗ ಕಾಯ್ಕಿಣಿಯವರು ವಸ್ತು-ವಿಚಾರಗಳ ಕೇವಲ ವೀಕ್ಷಕನಾಗಿರದೇ ಪರಿವೀಕ್ಷಕನಾಗಿಯೂ ಕಾವ್ಯ ಪ್ರವೇಶಿಸುವುದು ಸ್ಪಷ್ಟವಾಗುತ್ತದೆ. ಇಷ್ಟಾದರೂ ಕಾವ್ಯಾರ್ಥದ ಸಮರ್ಪಕತೆ ಕವಿಯನ್ನು ಕಾಡುತ್ತದೆ. ಕಾವ್ಯಾರ್ಥ ಸರಳವೋ ಅಥವಾ ನಿಗೂಢ ವಾಗಿರಬೇಕೆಂಬುದೇ ಪ್ರಶ್ನಾರ್ಥಕವಾಗುತ್ತದೆ. 'ನಿನ್ನ ಮೈತುಂಬ ಶಬ್ದಾಕ್ಷರ ಚಿನ್ಹ ಪ್ರಶ್ನಾರ್ಥಕಗಳ ಮುಳ್ಳು ಚುಚ್ಚಿ ಅರ್ಥಕ್ಕಾಗಿ ಕಾದು ಕೂತೆ' ಎಂಬ ಕೌತುಕದಲ್ಲಿ ಕವನ ಸೃಷ್ಟಿಯಾಗಬೇಕೆಂಬ ಆಸ್ಥೆ. ಪದಗಳ ಹದ ಚಾಕಚಕ್ಯತೆಯಲ್ಲಿ ಕಡೆದು ಪಡೆದ ಕಾವ್ಯಾರ್ಥದ ಮೂಲ ಯಾವುದೆಂಬ ಕ್ರಿಯಾಶೀಲ ಗೊಂದಲ ಕ್ಕೊಳಗಾಗುವುದಿದೆ. ನಮ್ಮೊಳಗಿನ ಪ್ರಶ್ನಾರ್ಥಕಗಳನ್ನು ಕೃತಿಗೇರಿಸಿ ಮನ ಹಗುರಾಗಿಸುವ ಕ್ರಿಯೆಯಲ್ಲಿ ಮೂಡುವ 'ನವ ನಿರ್ಮಿತಿ'ಯಾದ ಕಾವ್ಯ ಬೇರೆಯೇ ಅರ್ಥವನ್ನು ಮೈಗೂಡಿಸಿಕೊಂಡು ಅರಳುತ್ತದೆನ್ನುತ್ತಾರೆ. ಕಾವ್ಯಾಸ್ವಾದನೆಯ ಬಳಿಕ ಹೊಳೆದ ಅರ್ಥ 'ನಿನ್ನದೇ ಅಥವಾ ನನ್ನದೇ?' ಎನ್ನುತ್ತಾರೆ. ಈ ಪ್ರಶ್ನೆ ಕವಿ-ಕವಿತೆಯ ನಡುವೆಯಲ್ಲದೇ ಓದುಗರ ಮನದಲ್ಲೂ ಬಂದರೆ, ಆಗ ಕಾವ್ಯವು ವ್ಯಾಪಕಾರ್ಥ ನೀಡುವ ಸಾಹಿತ್ಯ ಪ್ರಕಾರ ಎಂಬ ಮಾತಿಗೂ ಮೌಲ್ಯ ಸಿಗುತ್ತದೆ. ಶಬ್ದಗಳ ಚಾಣಾಕ್ಷ ಬಳಕೆಯಿಂದ. ಸ್ವ-ಕೇಂದ್ರಿತ ನಿಲುವುಗಳು ಹೇರಲ್ಪಟ್ಟರೆ, ಕಾವ್ಯಾರ್ಥವು ಕಾವ್ಯಬಂಧದಿಂದ ನುಣುಚಿ ಕೊಳ್ಳುವ ಸಾಧ್ಯತೆಗಳನ್ನೂ ಹೇಳುತ್ತಾರೆ.

ಪಾರಿಜಾತ ಹೂ ಕುರಿತಾದ 'ನಿವೇದನೆ' ಯಲ್ಲಿ ಹಿಡಿತ ಬಿಟ್ಟು ಜಾರುವ, ಶಬ್ದಗಳ ಕೊಂಬುಗಳಿಂದ ಕೊಸರಿ ಹೋಗುವ ಕಾವ್ಯಧಾತುವಿನ ಕುರಿತು ಸೂಚ್ಯವಾಗಿ ತಿಳಿಸುವರು. ಕವಿತಾಬಂಧಕ್ಕೆ ಒಗ್ಗದ ಕೆಲವು ವಸ್ತು ವಿಚಾರಗಳೂ ನಿಜಬದುಕಿನಲ್ಲಿದೆ ಎಂಬ ತಿಳಿವು ಇಲ್ಲಿ ಮುಖ್ಯ. ಹಾಗೇಯೇ ಕವಿತೆ ತನ್ನೊಡಲಿಂದ ಹೊರಸೂಸುವ ಮುಕ್ತ ಅರ್ಥದ ಪರಿಜ್ಞಾನ. ಯಾವ ವಿಷಯಗಳು ಕಾವ್ಯದ ಚೌಕಟ್ಟಿನಲ್ಲಿ ಸಾಹಿತ್ಯಮುಕ್ತಿ ಪಡೆಯಬಹುದು, ಯಾವುದು ಆಭಾಸವಾಗಬಹುದೆಂಬ ಅರಿವಿದೆ ಕವಿಹೃದಯಕ್ಕೆ. ಅನುಭವ ಇಲ್ಲದ ಕವಿತೆ ತಿಂಗಳು ತುಂಬದ ಕೂಸು' ಎನ್ನುವ ನೇರ ಪರಿಚಿತ ರೂಪಕದಿಂದ ಕಾವ್ಯಕ್ಕೆ ಅತ್ಯಗತ್ಯವಾದ ಅನುಭವದ ಮಹತ್ವ ಹೇಳಿದ್ದಾರೆ.

ಅನುಭವ ಮತ್ತು ಅನುಭಾವಗಳ ನಡುವೆ ಹೊಯ್ದಾಡುವ ಕಲ್ಪನಾವಸ್ತುಗಳು ಕವಿತೆಯ ಜೀವದ್ರವ್ಯಗಳೂ ಹೌದು. ಕಾಯ್ಕಿಣಿಯವರಿಗೆ ಕಾವ್ಯವೆಂದರೆ ಬರೀ ಪದಚಮತ್ಕಾರದ ಹೂರಣ ವಾಗಿರದೇ ಕಾವ್ಯವೊಂದು ಸಾವಯವ ಬಂಧದಿಂದ ಕಂಗೊಳಿಸುವ ಜೈವಿಕ ಸ್ವರೂಪ.

ಕವಿತೆ ರಕ್ತಕ್ಕಾಗಿ ನೋಯುತ್ತದೆ ತಿವಿದಂತೆ
ಮಾಂಸಕಾಗಿ ಕೋಶಕ್ಕಾಗಿ ನರಮಂಡಲಕ್ಕಾಗಿ
ಕಾಯುತ್ತದೆ ಕಾಣದೆ ಹೆದರಿ ಬೆವರುತ್ತದೆ

ಕಾವ್ಯವು ಕಲ್ಪನೆ, ವಾಸ್ತವ, ಅನುಭವಗಳ, ಸಮಪಾಕದಲ್ಲಿ ರೂಪುಗೊಳ್ಳುವ ಜೀವಸದೃಶ ಆಕೃತಿ. ಕಾವ್ಯನಿಷ್ಠೆ ಪಾಲಿಸುವಲ್ಲಿ ಕವಿ ಭಾವುಕನಾಗಿರದೇ ವಿವೇಚಕನಾದಂತೆಯೂ ಇದೆ.

ಈ ರೀತಿಯ ಕಾವ್ಯಾನುರಾಗಿ ಕವಿ ದೈನಿಕ ಬಳಕೆಯ ವಸ್ತುಗಳಾದ ಸೇಬು, ಮೀನು, ಶಾಯಿಗಳು ತನ್ನ ಸೃಜನಶೀಲತೆಯ ಆಕರಗಳೆಂಬ ಆಪ್ತಭ್ರಮೆಯಲ್ಲಿರುವುದು ಕುತೂಹಲಕಾರಿಯಾಗಿದೆ. ಕವಿಗೆ ಸೇಬು, ಮೀನುಗಳಂಥ ಆಹಾರದ್ರವ್ಯಗಳು ತನ್ನ ಸೃಜನಶೀಲತೆಗೆ ಬೆಂಗಾವಲಾಗಬೇಕೆಂಬ ಹಾರೈಕೆ. ಪ್ರೀತಿಯಿಂದ ಚಪ್ಪರಿಸಿದ ಮೀನು ಮತ್ತು ಅಚಾತುರ್ಯದಿಂದ ಸೇವಿಸಿದ ಶಾಯಿಯೂ ಸಾಹಿತ್ಯಾಭಿವ್ಯಕ್ತಿಯ ಸ್ಫೂರ್ತಿಯೆನ್ನುವುದು ವಿನೂತನವಾಗಿದೆ. ತಾನೆಂದೋ ನುಂಗಿದ ಬೀಜಗಳಿಂದ ರೂಪುಗೊಂಡ ಸೇಬು ಅಂತರಂಗದ ಅಸಂಗತ ಆಯಾಮ ತೆರೆಯುವ ರೂವಾರಿಯಾಗಿ ಕಾಣುತ್ತದೆ.ಕಣ್ಣೊಳಗಿನ ಸೇಬು ಹೃದಯಕ್ಕಿಳಿಯುವುದು, ಕುರುಡರ ಕೈ ಬಾಯಿ ನಡುವೆಯೂ ಕ್ರೀಯಾಶೀಲವಾಗುವ, ಖೈದಿಯ ಭೇಟಿಗೆ ಬಂದ ಬಸುರಿಯ ಮಡಿಲ ಕುಡಿಸೇಬು,ಆಸ್ಪತ್ರೆಯ ಶವಾಗಾರದಲ್ಲಿ ಸೀಳಿಟ್ಟ ಸೇಬಿನ ಹೋಳುಗಳು ಎನ್ನುವಂಥ ಸಾಲುಗಳಲ್ಲಿ ಕವಿ ಸಾಮಾನ್ಯ ವಸ್ತುಗಳಲ್ಲಿ ಅಸಂಗತ ಚೈತನ್ಯವನ್ನರಸುವುದು ಪ್ರಕಟವಾಗುತ್ತದೆ.

ಕಾಯ್ಕಿಣಿಯವರ ಕಾವ್ಯಲೋಕದಲ್ಲಿ ಅಪೂರ್ವ ಸಂಗತಿಯೆಂದರೆ 'ಬೇಬಿ' ಎಂಬ ಕಾವ್ಯಪಾತ್ರ ಸೃಷ್ಟಿ. ವಿಕಾಸದ ವಿಶ್ಲೇಷಣೆಯಲ್ಲಿ ಗಮನಾರ್ಹವಾದ ಅಂಶ. ಬೇಬಿ ಪಾತ್ರ ಕವಿ ಸಂವೇದನಾ ಕೇಂದ್ರಗಳ ಸಂಕೇತ. 'ಯಕ್ಷಲೋಕ' ವೆಂಬ ಕವಿಯ ರಸಿಕಲೋಕ ಪ್ರವೇಶಿಕೆಯ ನೀಳ್ಗವನದಲ್ಲಿ ಕಾವ್ಯಹುಟ್ಟು ಪಡೆದ ಬೇಬಿ ಕವಿಗ್ರಹಿಕೆಯ ಜತೆಜತೆಗೇ ಬೆಳೆಯುವವಳು. 'ಕೋಟಿತೀರ್ಥ' ಸಂಕಲನದ ಗೋಕರ್ಣ ಪರಿಸರದಿಂದ 'ಶ್ರಾವಣ ಮಧ್ಯಾಹ್ನ' ಸಂಕಲನದ 'ಮಂಜು' ಕವಿತೆಯಲ್ಲಿ ಒಮ್ಮೆಗೇ ಮುಂಬೈಯ ಚಾಳಿನ ಮುದ್ದಿನ ಹುಡುಗಿಯಾಗಿ ಮರುಹುಟ್ಟು ಪಡೆಯುವುದು ಕವಿ ಸಂವೇದನೆ ನವವಲಯದಲ್ಲಿ ಕೇಂದ್ರೀಕೃತ ವಾದುದರ ಕುರುಹು. ಶಹರದ ಶೋಚನೀಯ ಬದುಕಿನ ಬಲಿಪಶುವಾಗಿ ಹತಾಶ ಸ್ತ್ರೀಯಾಗುತ್ತಾಳೆ. ಜರ್ಝರಿತ ಜೀವನದ ರೂಪಕವಾದ ಬೇಬಿ ಇತ್ತೀಚಿನ 'ಒಂದು ಜಿಲೇಬಿ' ಕವನದಲ್ಲಿ ಪ್ರಬುದ್ಧ ಬಂಧುವಾಗಿ ಬಡ್ತಿ ಹೊಂದಿದ್ದಾಳೆ.

ಕನ್ನಡ ಕಾವ್ಯ ಚರಿತ್ರೆಯ ವಿರಳ ಪ್ರಯೋಗ ಈ ಬೇಬಿ ಕಾವ್ಯಸೃಷ್ಟಿ.. ಕವಿಯ ಯೋಚನರೇಖೆ ಕವಲೊಡೆಯುವುದರ ದ್ಯೋತಕ. ಈ ಯೋಚನಾಪದರಗಳನ್ನು ಕವನಬಂಧದಲ್ಲಿ ಜೋಡಿಸುವುದೇ ಯಾವುದೇ ಕವಿಯ ಕೌಶಲ್ಯ. ಕಾಯ್ಕಿಣಿಯವರ ಮಟ್ಟಿಗೆ ಹೇಳುವುದಾದರೆ, ಆರಂಭದ ಕವನಗಳಲ್ಲಿದ್ದ ಭಾವನಾಮೂಲವಾದ ಭೇಧನ, ಮಾರ್ಗಾಂತರಗಳು ಕ್ರಮೇಣ ವಿಚಾರಮೂಲ ಶಿಲ್ಪಗಳಾಗುತ್ತವೆ. 'ನಲ್ಮೆಯ ಕೃಷ್ಣನಿಗೆ'ಯ ನಾಸ್ತಿಕರ ಮನೆಗಾಗಮಿಸಿದ ಕೃಷ್ಣನನ್ನು ಹೊರಗಟ್ಟುವ ರಸಾವೇಶ, ಕೃಷ್ಣನಲ್ಲಿ ಪೂರ್ವಜರ ನಿಶಾನೆಯನ್ನು ಧೇನಿಸುವ ಸನ್ನಿವೇಶವಾಗಲೀ, 'ಚಕ್ರವ್ಯೂಹ', 'ನನ್ನ ನೆನಪು' ಗಳಲ್ಲಿ ಪಲ್ಲಟಗೊಳ್ಳುವ ನೆನಪಿನ ಚಿಲುಮೆಗಳೆಲ್ಲ ಭಾವಕೇಂದ್ರಿತ ಭೇಧಕಗಳು. ಆದರೆ ಕಾಯ್ಕಿಣಿಯವರ ಕಾವ್ಯದ ಸಂಕ್ರಮಣ ಘಟ್ಟವೆಂದು ಗುರುತಿಸಬಹುದಾದ 'ಕೋಟಿತೀರ್ಥ' ಕವನದಲ್ಲಿ ಧೃಢವಾದ ವಿಚಾರ ಅಥವಾ ಚಿಂತನ ಮೂಲವಾದ ಭೇಧನಭಾವವಿದೆ. ಇಡೀ 'ಕೋಟಿತೀರ್ಥ' ಸಂಕಲನವೇ ಭಾವುಕತನ ಮೀರಿದ ವಿವೇಚಕ ಕವಿಧ್ವನಿ ಹಾಸುಹೊಕ್ಕಾಗಿರುವ ಕಾವ್ಯಶಿಲ್ಪ. ಗೋಕರ್ಣದ ಕೋಟಿತೀರ್ಥವೆನ್ನುವುದು ಸಂಪ್ರದಾಯವಾದೀ ಶ್ರದ್ಧಾಳುಗಳು ಸಾವನಪ್ಪಿದ ಬಂಧುಗಳಿಗೆ ಪಿಂಡಪ್ರಧಾನ ಮಾಡಿ ಸದ್ಗತಿ ನೀಡಿದೆವೆಂದುಕೊಳ್ಳುವ ದೈವಿಕಧಾಮ. ಕವಿಯ ಬೌದ್ಧಿಕ ಕೌಶಲ್ಯದಲ್ಲಿ ಈ 'ಗತಿ'ಗೊಂದು ವಿಚಾರಪೂರ್ಣವಾದ 'ವಿಗತಿ' ದೊರಕಿದೆ. ಈ ದೀರ್ಘಕವನದಲ್ಲಿ ಕೋಟಿತೀರ್ಥವು ದೈವಿಕತೆಗಳನ್ನೆಲ್ಲ ಕಳಚಿಟ್ಟ ಪ್ರಾಪಂಚಿಕ ಚಟುವಟಿಕೆಗಳ ಊರು.

ವೇದಘೋಷಗಳ ಉನ್ಮತ್ತ ಗೌಜಿನಲ್ಲಿ
ಪಾಪ, ಕೇಳಿಸುವದೇ ಇಲ್ಲ-
ಎಳೆಯರ ಪಿಸಿಪಿಸಿ ಪ್ರಣಯ ಸವಿಮಾತು
ದೃಷ್ಟಿ ಮೈಥುನಕ್ಕಾಗಿ ಈಜುವ ಕಣ್ಣೋಟ

ಅಲ್ಲದೇ 'ಹೋಮ ಹವನದ್ದೇ ಮಳೆ ದೇಶಕ್ಕೆ ಬಾರದ ಉಪದೇಶಗಳ ಮಳೆ'' ಹೊಯ್ಯುವ ಕೋಟಿತೀರ್ಥವು ಕವಿಗೆ ವಾರ್ಡು,ಕೇರಿಗಳಿಂದ ಕೂಡಿದ ಜನಸಾಂದ್ರತೆಯುಳ್ಳ ಪ್ರದೇಶ.

ಹೀಗೆ 'ಪರ'ದ ಗತಿ ಮತ್ತು 'ಇಹ'ದ ವಿಗತಿಗಳು ಸಂಧಿಸಿ ನವೀನ 'ಸಂಗತಿ'ಯೊಂದು ಉದಯಿಸುತ್ತದೆ.

ಶಿವರಾತ್ರಿ ಜಾತ್ರೆಯಲ್ಲಿ ನಿರೊಧ ಖರ್ಚಾಗುತ್ತ
ಹಿತ್ತಲ ಬೊಂಡ ಕಳುವಾಗುತ್ತ

ಎಂದು ಅಲೌಕಿಕ ತಾಣದ ಪ್ರಾಯೋಗಿಕ ಮುಖ ಪರಿಚಯಿಸುವ ಕವಿ ಸಂವಾದರೂಪದಲ್ಲಿ ನಿರೂಪಿಸುವ 'ಸಂಗತಿ'ಯೆಂದರೆ 'ನನಗನ್ನಿಸುತ್ತದೆ ಕೊನೆಗೊಂದು ದಿನ ಇಲ್ಲಿ ಏನೂ ಉಳಿಯುವುದಿಲ್ಲ' ಎಂದು ಅಲೌಕಿಕತೆ ಮಸುಕಾಗಿ, ಮೇಲುಗೈ ಸಾಧಿಸುವ ಪ್ರಾಪಂಚಿಕತೆಯ ಬಗ್ಗೆ ಉಪಸಂಹಾರಾತ್ಮಕ ವಿಶ್ಲೇಷಣೆ ನೀಡುವರು. 'ಕೋಟಿತೀರ್ಥ'ದ ಆಸುಪಾಸಿನ ಕವಿತೆಗಳ ವಾಚ್ಯದಲ್ಲಿ ಈ ಸಂವಾದೀಶೈಲಿ ಆರಂಭವಾಗಿದ್ದನ್ನು ಗಮನಿಸಬಹುದು. ಕೋಟಿತೀರ್ಥ ಸಂಕಲನವು ಮುಂದಿನ ಪ್ರಯೋಗಶೀಲ ನಿರೂಪಣೆ, ವೈವಿಧ್ಯಮಯ ವಸ್ತುನಿರ್ವಹಣೆ ಹಾಗೂ ತಾಂತ್ರಿಕ ಆಯಾಮಗಳಿಗೆ ನಾಂದಿಯಾದ ಕಾವ್ಯಾಕೃತಿ.ಈ ಭೇಧನ ಭಾವವೇ ಮುಂದೆ ಕಾವ್ಯವಸ್ತು ಕೇಂದ್ರ ಬದಲಾಗುತ್ತಿರುವುದರ ನಿದರ್ಶನಗಳು, ಹಾಗೆಯೇ ಕಲಾಭಿರುಚಿ ಪ್ರಕಟಿಸುವ ಕವನಗಳು, 'ಸಾವು' ರೂಪಕವಾಗಿರುವ ಕವನಗಳು, ಸುತ್ತಲ ವಿದ್ಯಮಾನಗಳ 'ಋಣಾತ್ಮಕತೆ'ಯಿಂದ ಉಗಮವಾದ, ವ್ಯಕ್ತಿ ಪ್ರಜ್ಞೆಯೊಂದಿಗೆ ಬೆಸೆಯುವ ರಾಷ್ಟ್ರೀಯ ಪ್ರಜ್ಞೆ ಇಂಥ ಅನೇಕ ವಿಚಾರಗಳು ಮುಂದಿನ ಕವನಗಳಲ್ಲಿವೆ. ಮನೋದೈಹಿಕ ವಿಷಯಗಳನ್ನು ಹೇಳುವ ಒಂದೆರಡು ರಚನೆಗಳಲ್ಲಿ ಸಹಜವಾದ ಭಾವೋದ್ವೇಗವಿದೆ.

'ಶ್ರಾವಣ ಮಧ್ಯಾಹ್ನ' ಮತ್ತು 'ನೀಲಿ ಮಳೆ' ಸಂಕಲನಗಳಲ್ಲಿ ಹೊಸ ನಿಲುವುಗಳ,ಅನೇಕ ಸಂಚಾರಿ ಭಾವಗಳಿಂದ ಮಿಳಿತವಾದ ಉತ್ಕಟ ಜೀವನದೃಷ್ಟಿಗಳನ್ನು ಸೂಚಿಸುವಂಥ ರಚನೆಗಳಿವೆ. ಹೆಚ್ಚಾಗಿ ಕಾವ್ಯವಸ್ತು ಭಿನ್ನ ಪರಿಸರದಲ್ಲಿ ಸಾಗಿ ಈ ಬಹುಕೇಂದ್ರಿತ ಆಶಯಗಳು ತೆರೆದುಕೊಳ್ಳುತ್ತವೆ. 'ಸಹವಾಸ', 'ಸಂದಣಿ'ಗಳಲ್ಲಿ ಸಂಚಾರಿಭಾವಗಳು ಭಿನ್ನ ವಾತಾವರಣದಲ್ಲಿ ಹೊಯ್ದಾಡಿದರೆ, ಬಹುಕೇಂದ್ರಿತ ಸ್ವರೂಪಗಳ ಅತ್ಯುತ್ತಮ ಮಾದರಿಗಳೆಂದರೆ 'ನಿಮಿತ್ತ', 'ನನ್ನ ಕೈಯಾಚೆ' ಹಾಗೂ 'ಹೆದ್ದಾರಿ ಚಾಲಕನ ಗುನುಗು'. ಎಸ್ಸೆಸ್ಸೆಲ್ಸಿ ಪರೀಕ್ಷೆಯ ಗಂಭೀರ ಗಳಿಗೆಯಲ್ಲಿ ಕವಿಯ ಪರೀಕ್ಷಕ ದೃಷ್ಟಿ ಚದುರಿದ ಸಾಮಾಜಿಕ ಸನ್ನಿವೇಶಗಳ ಕಲ್ಪನಾಲೋಕದಲ್ಲಿ ಮುಳುಗುತ್ತದೆ. ಪೇಪರ್ ಮಾರಲು ಸೈಕಲ್ ಮೇಲೆ ಬರುವ ಹುಡುಗನ ಪ್ರತಿಮೆಯಿಂದ ಆರಂಭವಾಗುವ 'ನಿಮಿತ್ತ' ದಲ್ಲಿ ಸೈಕಲ್ಲನ್ನು ಅಲ್ಲೇ ತಟಸ್ಥವಾಗಿಸಿ ಕಾಡಿನ ಗಿಡಮರಗಳು, ಘಾಟ್ ಸೆಕ್ಷನ್ ತಿರುವಿನಲ್ಲಿ ಸಾಗುವ ಲಾರಿ, ಇಂಥ ವಿಭಜಿತ ವಿವರಗಳೆಲ್ಲ ಕಲೆತು ಜಟಿಲವಾಗುತ್ತದೆ. ಆಂಗ್ಲ ಸಾಹಿತ್ಯದ 'ಓಡ್'ಗಳಲ್ಲಿ ಈ ಥರದ ಸಂಕೀರ್ಣತೆಯಿರುತ್ತದೆ. 'ನಿಮಿತ್ತ'ದಲ್ಲಿ ಪ್ರಬಲ ವಿರೋಧಾಭಾಸಗಳಿವೆ. ಸ್ವತಃ ಕವಿಯೇ ಈ ಜಟಿಲತೆಯನ್ನು ಸರಳಗೊಳಿಸಿ ಸಂಯೋಗತ್ವ ಒದಗಿಸುವ ವಿಧಾನವಿದೆ.

ಮೆಹದಿ ಹಸನ್‌ಗೆ ಪುಸ್ತಕದಲ್ಲಿ ಸಿಕ್ಕಿತು ನಲ್ಲೆಯ ಒಣಹೂವು
ನೆರೂಡಾಗೆ ರಸ್ತೆ ಮೇಲೆ ನೆತ್ತರು
ಸ್ರವಿಸುವ ಆಸ್ಪತ್ರೆಯ ರಕ್ತಬಂಬಾಳ ವಸ್ತ್ರ
ಹಿಂಡಿ ಹರಿದ ನೀರು ಅಶ್ವತ್ಥವೃಕ್ಷದ ಸುತ್ತ
ಎರೆಡೆಳೆ ಮಂಗಳಸೂತ್ರ
ರೂ ಎಪ್ಪತ್ತಕ್ಕೆ ಗರ್ಭಪಾತ

ಚದುರಿದ ಸಂವೇದನೆಗಳೆಲ್ಲ ಯಾವುದೋ ಪ್ರಧಾನ ಸಮಸ್ಯೆಯನ್ನು ಮನಗಾಣಿಸುವ ಹವಣಿಕೆಯಲ್ಲಿರುತ್ತವೆ. ಅಂತ್ಯದಲ್ಲಿ ಪೇಪರ್ ಹುಡುಗನ ಪ್ರತಿಮೆ ಮರುಕಳಿಸಿ,ಪೇಪರ್ ತನ್ನೊಡಲಲ್ಲಿ ಹುದುಗಿಸಿಕೊಂಡ ಸುದ್ದಿಗಳಂತಿರುವ ಮೆಹದಿ ಹಸನ್‌ನ ಮಧುರಪ್ರೇಮ, ಚಿಲಿದೇಶದ ನಾಯಕ ನೆರೂಡಾನ ಕಮ್ಯೂನಿಸ್ಟ್ ಒಲವು, ರಕ್ತಪಾತ, ಗರ್ಭಪಾತ ಇವುಗಳೆಲ್ಲ ಸೇರಿ ಸಮಗ್ರಾರ್ಥ ನೀಡುತ್ತವೆ. 'ಹೆದ್ದಾರಿ ಚಾಲಕನ ಗುನುಗು' ದಲ್ಲಿ ಮಹಾನಗರದ ಆಧುನಿಕ ಬಿನ್ನಾಣದ ದೃಶ್ಯ,ಅನುಭವಗಳು ತನ್ನಿಂತಾನೇ ಕವಿಯ ಸುಪ್ತಮನಸ್ಸಿನ ಉಲ್ಲಸಿತ ತಾಣಗಳಿಗೆ ವಿಸ್ತರಿಸುತ್ತದೆ. ಮಾಧುರಿ, ಬಿಪಾಶಾ ಚಿತ್ರಗಳು, ಅಘನಾಶಿನಿ, ಕಾವೇರಿ, ಧಾರಾವಿಯ ನೀರಿನ ಒರತೆ, ಜೋಳಿಗೆಯ ಕೂಸು, ಗನ್ ಹಿಡಿದ ಯುವಕ, ಕಾಮಾಟಿಪುರದ ಮಹಿಳೆಯನ್ನು ಕಿತ್ತು ತಿನ್ನುವ ಪುರುಷ, ಇಂಥ ಛೇಧಕ ನೋಟಗಳು ಕಲ್ಪನಾವಿಸ್ತಾರವನ್ನು ತಿಳಿಸುತ್ತವೆ.ಹಿಂಸೆ ಮತ್ತು ಮಾಧುರ್ಯದ ಗ್ರಹಿಕೆಗಳು ಒಗ್ಗೂಡಿ ಕವನದ ಚೌಕಟ್ಟಿನಲ್ಲಿ ಹೊಸನೆಲೆ ಕಾಣುತ್ತವೆ. ಹಿಂಸೆ ಮತ್ತು ಸಾವಿನ ರೂಪಕವಿರುವ ಕವಿತೆಗಳನ್ನು ಗಮನಿಸಿದರೆ, 'ಮರಣ' ವೆಂದರೆ ಕವಿದೃಷ್ಟಿಯಲ್ಲಿ ಬದುಕಿನ ಯಾವುದೇ ಕ್ಷಣದಲ್ಲಿ ಬಂದೆರಗಲು ಹೊಂಚು ಹಾಕುತ್ತಿರುವ ಸ್ವಾಭಾವಿಕ ಘಟಕವಾಗಿದೆ.ವೈಯುಕ್ತಿಕ ಮತ್ತು ಸಾಮೂಹಿಕ ಆಯಾಮಗಳಲ್ಲಿ ಸಾವಿನ ಬಗೆಗಿನ ಚಿಂತನೆ ಬಿಂಬಿತವಾಗಿದೆ. ವೈಯುಕ್ತಿಕ ನೆಲೆಯ 'ಸದ್ಯ' ಕವಿತೆಯಲ್ಲಿ ವಾಚಕ ತಾನು ಈಗಷ್ಟೇ ಕಂಡ ಹೆಣ ತನ್ನದಿರಬಹುದೇ ಎಂಬ ಮುಗ್ಧ ಸಂದೇಹಕ್ಕೊಳಗಾಗುವುದು ಕವಿಯ ಸಾವಿನ ಚಿಂತನೆಯಲ್ಲಿ ಸಾವು ಎಂದಿಗೂ ಬೆನ್ನ ಹಿಂದಿದ್ದು ಯಾವುದೇ ಕ್ಷಣದಲ್ಲಿ ಘಟಿಸುವ ಬದುಕಿನ ಪರ್ಯಾಯ ವ್ಯವಸ್ಥೆ. ಸಾಮೂಹಿಕ ನೆಲೆಯಲ್ಲಿ ವಿಶ್ಲೇಷಿಸಬಹುದಾದ 'ಹೀಗೊಂದೂರು' ಕವಿತೆಯಲ್ಲಿ ಊರಿಗೆ ಊರೇ ಸಾವಿಗೀಡಾಗಿ, ಸ್ಮಶಾನ ಊರಿನ ಸಾಮೂಹಿಕ ಸಾವನ್ನು ನೋಡಿ ಅಪಹಾಸ್ಯ ಮಾಡುವ ಅಣುಕು ನಿರೂಪಣೆಯಲ್ಲೂ ಮರಣ ಪರಕೀಯ ಸ್ತರದಲ್ಲಿರದೇ ಬದುಕಿನ ನೇಪಥ್ಯದಲ್ಲಿದ್ದೇ ಅವಿರತ ಕಾಡುವ ಸಂಗತಿ.

ಕಾಯ್ಕಿಣಿಯವರಿಗೆ ಕಲಾಮಾಧ್ಯಮವೆಂದರೆ ವ್ಯಕ್ತಿಯನ್ನು ದೈನಿಕ ಕಲಾಪಗಳಿಂದ ಬಿಡಿಸಿ ಏರುಮಟ್ಟಕ್ಕೆ ಕೊಂಡೊಯ್ಯುವ ಶಕ್ತಿ. ಈ ಉನ್ನತಿಯ ಹಾದಿಯಲ್ಲಿ ಬದುಕು ಕೂಡ ಬಹಳ ಮುಖ್ಯವಾಗುತ್ತದೆ. ಕಲೆಯ ಹಿಂದಿರುವ ಬದುಕಿನ ಸ್ವಾರಸ್ಯ, ಶೋಚನೀಯತೆಗಳನ್ನು ಶೋಧಿಸುವ ಹಂಬಲ ಕಾಣುತ್ತದೆ. 'ರಂಗದಿಂದೊಂದಿಷ್ಟು ದೂರ' ದಲ್ಲಿ ನಮಗೆಲ್ಲ 'ರಂಗಕ್ಕಿಂತ ನೇಪಥ್ಯವೇ ಗುರ್ತ' ಎನ್ನುತ್ತಾರೆ. ಕಲಾ ಬದುಕಿನ ನೇಪಥ್ಯದ ಹುಡುಕಾಟವೂ ಕೆಲವು ಕವನಗಳಲ್ಲಿವೆ. ಕಲಾಭಿನಯಕ್ಕಿಂತ ನಿಜಜೀವನದಲ್ಲಿ ಪಾತ್ರ ನಿರ್ವಹಿಸುವಲ್ಲಿ ಎಡವುವ ವ್ಯಕ್ತಿಗಳು, ದಿನ ಕಳೆದಂತೆ ಆಧುನಿಕತೆಯ ಸೋಗಿಗೆ ಮರುಳಾಗಿ ಸಾಬೂನಿನಂತೆ ಕರಗುವ,ನವೀನತೆಗೆ ಒಗ್ಗದ ವ್ಯಕ್ತಿಗಳು ಕಾಯ್ಕಿಣಿಯವರ ಬದುಕು ಮತ್ತು ಕಲೆಯ ಚಿಂತನೆಗಳ ಭಾಗವಾಗುತ್ತಾರೆ.

ನಾವು ನಟಿಸಲಾರೆವು ಜೀಯಾ
ಯಾಕೆ ಗೊತ್ತಾ
ನಮಗೆ ಇಲ್ಲದ್ದ ತೊಡಿಸುವುದಕ್ಕಿಂತ
ಇದ್ದದ್ದ ಕಳಚುವುದೇ ಸುಲಭ

ಮನುಷ್ಯ ಬದುಕಿನ ವೈಫಲ್ಯ, ಅಸಮಾಧಾನಗಳು ಕವಿಯ ಕಲಾಸಂಬಂಧೀ ವಿಚಾರಗಳಲ್ಲಿ ಸ್ಥಾನ ಪಡೆಯುತ್ತವೆ. ನೇಪಥ್ಯದಲ್ಲಿರುವ 'ಸುಪ್ತ' ಸಂಗತಿಗಳನ್ನು ಆಪ್ತವಾಗಿಸುವ ಕಲಾಪ್ರದರ್ಶನದ ಆಚೀಚಿನ ವಿಷಯಗಳ ಬಗ್ಗೆ ಕವಿಗೆ ಕೌತುಕ. 'ನಾಟಕದ ನಂತರ ಕಿವಿಯಲ್ಲಿ ಬಣ್ಣ ಕಣ್ಣಿನಲ್ಲಿರುವ ನಿದ್ದೆಯ ಬಗ್ಗೆ ಅಸಂಗತ ಕುತೂಹಲ. ನಾಟಕದ ಅಥವಾ ಕಲೆಯ ಮೊದಲೇನಿತ್ತು, ನಂತರವೇನಿದೆಯೆಂಬ, ಏಕೆ, ಹೇಗಿದೆಯೆಂಬುದು ಬೀಜ-ಹಣ್ಣಿನ ದ್ರಷ್ಟಾಂತದಂತೆ ಅನಂತಪ್ರಶ್ನೆಯಾಗಿಯೇ ಉಳಿಯುವುದರ ಬಗ್ಗೆ ತಾತ್ವಿಕ ಆಸಕ್ತಿ.

'ಕೆರೆಮನೆ ದಾಟುವಾಗ'ದಲ್ಲಿ ಮೇಳದ ಪ್ರದರ್ಶನಗಳೆಲ್ಲ ಮುಗಿದ ಮಳೆಗಾಲದಲ್ಲಿ ವೇಷಭೂಷಣಗಳನ್ನು ಕಳಚಿ ಮೇಳದ ಪೆಟ್ಟಿಗೆಯ ಮೇಲೆ ಕೂತ ಕಿನ್ನರನಂಥ ಪ್ರತಿಮೆಗಳಲ್ಲಿ ಕವಿಯ ಕಲಾಮನೋಭಾವವು ಕ್ರಮೇಣ 'ಕಲಾವಿದ ಕೇಂದ್ರಿತ' ವಾಗುತ್ತಿರುವುದನ್ನು ಗಮನಿಸಬಹುದು. 'ಒಂದು ಜಿಲೇಬಿ' ಸಂಕಲನದ 'ಮೂರನೇ ಅಂಕ' ಕವಿತೆಯು ಸಂಪೂರ್ಣವಾಗಿ ಕಲಾಬದುಕಿನ ಸಂಧ್ಯಾಕಾಲದಲ್ಲಿರುವ ಮುದಿಕಲಾವಿದರ ದೈನ್ಯ ಜೀವನದ ಕುರಿತ ಕಳಕಳಿಯಾಗಿದೆ. ಕಲಾಕ್ಷೇತ್ರದಲ್ಲಿ ಮಹತ್ಸಾಧನೆಗೈದ ಹಿರಿಯ ಕಲಾವಿದೆಯನ್ನುದ್ದೇಶಿಸಿ ಸಾಂತ್ವನದ ನುಡಿಗಳನ್ನಾಡುವ ವಾಚಕ ಇಂದಿನ ಸಮಾಜ ಕಲಾವಿದರ ಬಗ್ಗೆ ತಾಳುವ ನಿರ್ಲಕ್ಷ್ಯವನ್ನು ಟೀಕಿಸುತ್ತಾರೆ. ಇಂಥ ಹೀನ ಋಣಾತ್ಮಕತೆಯನ್ನು ಗುರುತಿಸಿ ಧನಾತ್ಮಕ ಸ್ವರೂಪ ನೀಡಿ ಅಭಿವ್ಯಕ್ತಿಸಿದ ಉದಾಹರಣೆಗಳು ಸಾಕಷ್ಟಿವೆ. ಇದಕ್ಕೆ ಪೂರಕವಾದ 'ಮುದ್ದು ಮಕ್ಕಳಿಗೊಂದು ಕವಿತೆ'' ಮೊನೊಲಾಗ್ ರೂಪದಲ್ಲಿದ್ದು, ಮೇಲ್ನೋಟಕ್ಕೆ ಮಕ್ಕಳಿಗಾಗಿರುವ ಕಿವಿಮಾತಿನಂತೆ ಕಂಡರೂ, ಸೂಕ್ಷ್ಮಗ್ರಹಿಕೆಯಲ್ಲಿ ಇದೊಂದು ವಯಸ್ಕ ಪ್ರಪಂಚದ ಅಲ್ಪತನ, ಯಾಂತ್ರಿಕತೆ ಹಾಗೂ ನಿರ್ಲಿಪ್ತ ಚಟುವಟಿಕೆಗಳ ಅಣಕುಧಾಟಿಯಲ್ಲಿದೆ.

ನಿಮ್ಮ ಕಣ್ಣುಗಳೊಳಗೆ ಏನೂ ನಡೆದಿಲ್ಲ
ಯಾಕೆ ನಡೆದಿಲ್ಲ
ಸದ್ಯ ನಿಮ್ಮ ನೋಟದ ನೇರ ಇನ್ನೂ ಒಡೆದಿಲ್ಲ

ಇಂಥ ಕೆಲವು ಸಾಲುಗಳಲ್ಲಿ ಅಂತಸ್ಥ ವಿರೋಧಾಭಾಸವಿದೆ. ಅಂದರೆ ಪ್ರಾಯಪ್ರಬುದ್ಧರ ಪೂರ್ವಾಗ್ರಹ ಪೀಡಿತ ನಿಲುವುಗಳನ್ನು ಅಣಕಿಸಬೇಕಾದ ಕವಿ ಮೇಲ್ಪೈಯಲ್ಲಿ ಮಕ್ಕಳನ್ನು ಕುರಿತು ಸಂವಾದಿಸುವ ಕಾವ್ಯತಂತ್ರವಿದೆ. ಪೂರ್ವಾಗ್ರಹ ಪೀಡಿತ ಮನದ ನಿಷ್ಕರ್ಷೆ, ಸಂಕುಚಿತೆಗೆ ಸವಾಲೆಸೆಯುವ 'ಇಷ್ಟು ಇಷ್ಟೆಂದೇತಕೆ'' ಕವನವನ್ನು ಈ ದಿಸೆಯಲ್ಲಿ ಪರಿಗಣಿಸಬೇಕು.'ಲೋಕೋ ಭಿನ್ನ ರುಚಿಃ' ಎಂಬ ಸಾಲನ್ನು ಸುಲಭದಲ್ಲಿ ಮನವರಿಕೆ ಮಾಡುವುದಲ್ಲದೇ ಅದರ ಅಗತ್ಯಕ್ಕೆ ಒತ್ತು ನೀಡುವ ವಾಚ್ಯ ಈ ಕವನದಲ್ಲಿದೆ. ಯಾವುದೇ ಗಡಿರೇಖೆಗಳಿಲ್ಲದ, ನಿರ್ಣಯಾತೀತ ಮನೋಧರ್ಮ ಆಗ್ರಹಿಸುವ ಪ್ರಬಲ ಇಚ್ಛೆ ವ್ಯಕ್ತಗೊಂಡಿದೆ. ಸಿದ್ಧಾಂತವಾದೀ ಸೊಲ್ಲುಗಳೆನಿಸಿದರೂ ಸುಲಭವಾಗಿ ಜನಮಾನಸ ತಲುಪುವಂಥ ಕೆಲ ಸಾಲುಗಳಿಂದ ಇದು ಗೀತಾತ್ಮಕವೆನಿಸುತ್ತದೆ.

ನಿನಗೆ ಬಿಂದುವಾದದ್ದೇ ಮತ್ಯಾರಿಗೋ ರೇಖೆ
ನಿನ್ನ ಕಣ್ಣು ಮುಗಿಯುವಲ್ಲೇ ದೃಶ್ಯ ಮುಗಿಯಬೇಕೆ
ಬೆಳಕು ಬೇಕು ಎಂದು ನೀ ರಾತ್ರಿ ಹಟಾ ಹಿಡಿದರೆ
ಪೃಥ್ವಿಯ ಆ ಇನ್ನೊಂದು ಅರ್ಧ ಎಂಥ ಪಾಪ ಮಾಡಿದೆ

ಎಂದು ಸಾಧ್ಯವಾದಷ್ಟು ನಿಸ್ಪ್ರಹತೆ,ನಿಸ್ವಾರ್ಥಕ್ಕೆ ದಾರಿ ಮಾಡಿಕೊಡಬೇಕಾದ ಮನೋರಚನೆಗೆ ಪ್ರಾಮುಖ್ಯತೆ. ಈ ನಿಟ್ಟಿನಲ್ಲಿ ನಿರ್ಣಯಾತೀತವಾಗಿರುವುದು ಎಂದೂ ನಿಷ್ಕಳಂಕವಾಗಿರುತ್ತದೆ.

'ರಂಗೀಲಾ'ದಲ್ಲೂ ಈ ಋಣಾತ್ಮಕಗಳನ್ನು ಸೊಗಸಾದ ಪದಗುಚ್ಛಗಳಿಂದ ಹೆಣೆಯಲಾಗಿದೆ. ಕಿವಿಗಿಂಪು ನೀಡುವ 'ರಂಗೀಲಾರೆ'','ಖಾಯ್ಕೆ ಪಾನ್ ಬನಾರಸ್‌ವಾಲದಂಥ ಸಿನಿಮೀಯ ನುಡಿಗಟ್ಟು ಗಳನ್ನು ಖಂಡನೆಗಳಿಗಾಗಿ ಬಳಸಲಾಗಿದೆ.'ಅಜ್ಜನನ್ನು ಅರಸಿ ಚಿಣ್ಣ ವೃದ್ಧಾಶ್ರಮಕ್ಕೆ ಬಂದರೆ ಅದು ರಂಗೀಲಾರೆ ' ಸಾಲುಗಳಲ್ಲಿರುವ ದಾರುಣ ಸ್ಥಿತಿ ಮನಕಲಕುತ್ತದೆ.

ನಿಕಟವರ್ತಿಗಳನ್ನು ಎಚ್ಚರದಿಂದ ಅವಲೋಕಿಸಿ, ಅದಕ್ಕೊಂದು ಸೃಜನಶೀಲ ಆಯಕಟ್ಟು ನೀಡುವುದು ಕಾವ್ಯಸೃಷ್ಟಿಗೆ ಕಾರಣವಾಗುವಂಥ ಒಂದು ಅಂಶವೆಂದು ವಿದ್ವಾಂಸರ ಅಭಿಪ್ರಾಯ. ಪ್ರಾದೇಶಿಕ, ರಾಷ್ಟ್ರೀಯ ಹಾಗೂ ವಿಶ್ವದ ಭಾಗವಾಗಿರುವ 'ವ್ಯಕ್ತಿಯ' ಮೂಲಕವೇ ಕಾಯ್ಕಿಣಿಯವರ ರಾಷ್ಟ್ರೀಯ ಚಿಂತನೆ ಸಾಗುತ್ತದೆ. ವ್ಯಕ್ತಿಯ ಅಸಹಾಯತೆಗೆ ಕಾರಣವಾಗುವ ಸಮಾಜ ವ್ಯವಸ್ಥೆ ಕಾಯ್ಕಿಣಿಯವರ ಕಾವ್ಯಕಾಣ್ಕೆ.

'ಸನಿಹ' ದಲ್ಲಿ ಸಹಪ್ರಯಾಣಿಕನೋರ್ವನ ನಿರಾಳ ನಿದ್ದೆ ರೈಲ್ವೆನಿಲ್ದಾಣದ ಅನಾಥ ಮಹಿಳೆಯ ಚಿತ್ರಣವಿರುವ 'ಹಳಿಗಳ ಮೇಲೆ', 'ಅಂಚು' ದಲ್ಲಿ ಮಾನಸಿಕ ಅಸ್ವಸ್ಥನ ಬಗ್ಗೆ ಸಹಾನುಭೂತಿಗಳಂಥ ಕಾಣ್ಕೆಗಳ ಮುಲಕ ಕವಿ ವ್ಯಕ್ತಿಗತ ಮೂಲದಿಂದ ಸಮಷ್ಟಿ ಹಿತದತ್ತ ಒಲವು ತೋರುತ್ತಾರೆ.

ಆದರೆ ವಾಕ್‌ಮನ್ ಹಿಡಿದು ನಗರದಲ್ಲಿ ಸುತ್ತುವ ಆಧುನಿಕ ಯುವಕ ಶಬ್ದ ಧ್ವನಿಗಳನ್ನೆಲ್ಲ ಕೇವಲ ತನ್ನೊಳಗೆ ಸೀಮಿತಗೊಳಿಸಿದ ನಿರ್ಲಕ್ಷ್ಯ ಸ್ವಾರ್ಥಿಯಾಗುತ್ತಾನೆ. ಆಧುನಿಕ ಸಮಾಜಕ್ಕೆ ಸಂಬಂಧಿಸಿದಂತೆ ವ್ಯಕ್ತಿಗಳ ಜೀವನವನ್ನು ಅಸಹ್ಯ ರೀತಿಯಲ್ಲಿ ಆವರಿಸಿಕೊಂಡು ಮನುಷ್ಯನ ಚಲನವಲನವನ್ನು ನಿಯಂತ್ರಿಸುವ ಬಗ್ಗೆ ವಿಡಂಬನಾತ್ಮಕ ಕವಿತೆಯೊಂದಿದೆ.ರಾಷ್ಟ್ರರಕ್ಷಣೆಗಾಗಿ ಹೋರಾಡಿ ಮಡಿದವರ ಬಗೆಗಿನ ಕವಿಯ ಆಳದ ಪ್ರತಿಕ್ರಿಯೆ, ಸಹೃದಯತೆಗಳೂ ಕವನದ ಒಂದೆರಡು ಸಾಲುಗಳಲ್ಲಿ ಸೂಚ್ಯವಾಗಿ ಹೇಳಲ್ಪಟ್ಟಿವೆ. ದೇಶಹಿತಕ್ಕಾಗಿ ಪ್ರಾಣತ್ಯಾಗ ಮಾಡಿದವರ ಗುಣಗಾನ ಮಾಡುವುದರ ಜತೆಗೇ ಭರಿಸಲಾಗದ ಋಣಭಾರ ಜನರಲ್ಲಿರಬೇಕು. ಉತ್ತರಕನ್ನಡ ಜಿಲ್ಲೆಯ ಶೆಟಗೇರಿ ರಸ್ತೆಯ ಮನೆಯಂಗಳದಲ್ಲಿ ಬಟ್ಟೆ ಒಣಗಿಸುವ ಒಂಟಿತಾಯಿ ಬಾವುಟ ಮುಚ್ಚಿದ ಹಾದಿ ಕಾಯಬೇಕಾದ ಅನಿವಾರ್ಯ ಅಸಹಾಯಕತೆಗೆ ಕವಿಯ ಅಭಿಮಾನಪೂರ್ವಕ ಅನುಕಂಪ.ಆ ಮಾತೆ ಆ ಪ್ರದೇಶದಿಂದ ದೇಶಕ್ಕಾಗಿ ಜೀವತೆತ್ತ ನೂರಾರು ಸೈನಿಕ ಮಾತೆಯರ ಪ್ರತಿನಿಧಿಯಾಗಿದ್ದಾಳೆ. 'ಬೀಜಿಂಗ್ ಪೋರಿ' ಅಥವಾ ಚೀನೀ ಯುವತಿಯ ದೈಹಿಕ ಸಾಹಸ, ಆಹಾರಕ್ರಮ, ಜೀವನವಿಧಾನಗಳೇನೋ ಕವಿಯ ಭಾರತೀಯ ಕಣ್ಣಿಗೆ ವಿಲಕ್ಷಣವಾಗಿ ಕಂಡರೂ 'ಬುದ್ಧನ ಭಾರತೀಯ ಕಣ್ಣು' ಎಂದಷ್ಟೇ ಪ್ರಸ್ತಾಪಿಸಿ ಭಾರತ ಮತ್ತು ಚೀನಾಗಳಂಥ ಪರಕೀಯ ನಾಡುಗಳನ್ನು ಬೆಸೆಯುವ ಬೌದ್ಧಧರ್ಮ ಮುಖ್ಯವಾಗುವುದು.ದೇಶಗಳ ನಡುವೆ ವೈಷಮ್ಯ ಬಿತ್ತುವ ಧರ್ಮ, ಧಾರ್ಮಿಕ ವಿಚಾರಗಳಿಂದ ಬೇಸತ್ತ ಪ್ರಚಲಿತ ಸಮಾಜದಲ್ಲಿ ಅಪರೂಪದ ಧರ್ಮದ 'ಒಗ್ಗೂಡಿಸುವ ಶಕ್ತಿಯ' ಉಲ್ಲೇಖ. ಹೀಗೆ ರಾಷ್ಟ್ರಪ್ರಜ್ಞೆ ಅತೀ ಸೂಕ್ಷ್ಮವಾಗಿ ಕಾಯ್ಕಿಣಿಯವರ ಕೆಲವು ಕವನಗಳಿಗೆ ಮೆರಗು ನೀಡಿವೆ.

ಕಾವ್ಯರಚನೆಯ ವಿವಿಧ ಸ್ತರಗಳನ್ನು ದಾಟಿ ಪ್ರಬುದ್ಧಗೊಂಡ ಕಾವ್ಯಚಿತ್ತ ಚಿತ್ರಿಸಿದ 'ಒಂದು ಜಿಲೇಬಿ' ಸಂಕಲನದಲ್ಲಿ ಹೊಸದೊಂದು ತಲ್ಲಣವನ್ನು ಎದುರಿಸುವುದು ಭಾಸವಾಗುತ್ತದೆ. ಕವಿಮನಕೆ ಅತ್ತಿದ ದನಿಯೊಂದು ಬಿತ್ತರಿಸಿ, ಅದಕ್ಕೆ ಒಗ್ಗೊಡಬೇಕಾದ ಉತ್ತರವೊಂದು ಕಾಡುತ್ತದೆ. ಆ ಧ್ವನಿ 'ಬಾಡುವ ಮುನ್ನ ಮಾರಲೋ ನಿನ್ನ ನಾಚಿಗೆಬೀಚಿಗೆ' ಎಂದು ನಿಶಬ್ದ ತಾರಕದಲ್ಲಿ ಗುನುಗುತ್ತದೆ. ಅದೇ ಸಂಕಲನದ 'ಕೊನೇ ಶಬ್ದ' ಕವನದಲ್ಲಿ ಅರ್ಥವಿಸ್ತಾರಗಳನ್ನು ನೋಡಬಹುದು. ಇಲ್ಲಿ ಶಬ್ದಗಳು ಕವನದ ಚೌಕಟ್ಟಿನಲ್ಲಿ ಒಂದಾಗದೇ ಮತ್ತ್ಯಾವುದೋ ಸ್ವರೂಪ ಪಡೆಯುವ ಗೊಂದಲದಲ್ಲಿವೆ. ಮಾನವ ಸಹಜವಾದ ಇಹವನ್ನು ಬಿಟ್ಟು ಪರ ಸೇರಬೇಕಾದ ಅಲೌಕಿಕ ಕಳವಳದಂಥ ಗಂಭೀರ ಉತ್ತರವನ್ನೆದುರಿಸುತ್ತದೆ. ಮಾನವಸಹಜ ಮರಣಭಯವನ್ನು ಅಪ್ಪಿಕೊಂಡೇ ಕಾವ್ಯವಾಗಲು ಪರಿತಪಿಸುವುದು. ಕವಿಯ ಮಾತಿನಲ್ಲೇ ಹೇಳುವುದಾದರೆ

ತುಂಬ ದೂರ ನಡೆದು ಬಂದಿವೆ ಅವು.
ನಾಲಿಗೆಯ ಮೇಲೆ
ಹಳೆಯ ತಿರುವುಗಳನ್ನು ಹೊಸ ಕನಸಿನಲ್ಲಿ ಕಂಡಿವೆ

ಎಂದು ಕಾವ್ಯಚಿತ್ತ ಮಗದೊಂದು ತಿರುವಿನತ್ತ ಚಲಿಸುತ್ತಿರುವುದು ಪರೋಕ್ಷವಾಗಿ ನಿವೇದಿಸಲ್ಪಟ್ಟಿದೆ. ಆದರೂ ಅದು ಕವನಸ್ವರೂಪವನ್ನು ತಕ್ಕಮಟ್ಟಿಗೆ ನೆಚ್ಚಿಕೊಂಡು ಸಮಾಧಾನಿಸುವುದು. 'ಒಂದು ಜಿಲೇಬಿ' ಸಂಕಲನದ ಕೊನೆಯ ಕವನ 'ರುದ್ರಪಾದದಲ್ಲಿ ಬಿಟ್ಟ ಹೆಜ್ಜೆ'ಯಲ್ಲಿ ಕವಿಮನವು ಸಾಹಿತ್ಯ ಸರಸ್ವತಿಯ ಚರಣಗಳಲ್ಲಿ ವಿನೀತವಾಗಿ 'ದೇವಿ, ನನ್ನನ್ನು ಮಾತ್ರ ಈ ಬಣ್ಣದ ಅಲೆಗಳಿಗೆ ಕೊಡು' ಎಂಬ ರಂಗಿನ ಪ್ರಪಂಚದ ಪದಾರ್ಪಣೆಯ ಸುಳಿವು ನೀಡುವುದು ಮನೋಜ್ಞವಾಗಿದೆ. ಈ ದೃಶ್ಯ ಹೇಳಿಕೆಯಲ್ಲೂ ಬಣ್ಣದ ಲೋಕದಲ್ಲಿ ಬೆರೆತು, ಬೆಳೆದು ಬಣ್ಣದ ಲೋಕದ ಸಾಹಿತ್ಯ ಸರಸ್ವತಿಯ ಕರೆಯನ್ನು ಮನ್ನಿಸುವ ಹುರುಪಿದೆ. ಕಾವ್ಯಚಿತ್ತ ಬಣ್ಣದ ತೀರವನ್ನೇ ತನ್ನ ಹೊಸಗುರಿಯಾಗಿಸುವುದು ಕಾಣುತ್ತದೆ. ಕಾವ್ಯಲೋಕದಲ್ಲಿರಲಿ, ರಂಗಿನ ಪ್ರಪಂಚವಾಗಲೀ 'ಮಾತು,ಶಬ್ದ, ಗೀತೆಗಿಂತ ಬದುಕು ಮುಖ್ಯ' ಎನ್ನುವ ಚತುರ ವಾಗ್ಮಿ, ಸಾಹಿತಿ ಮತ್ತು ಗೀತರಚನಕಾರರಾದ ಜಯಂತ ಕಾಯ್ಕಿಣಿಯವರು ಕನ್ನಡ ಕಾವ್ಯಪರಂಪರೆಯಲ್ಲಿ ತನ್ನದೇ ಆದ ಛಾಪು ಹೊಂದಿರುವವರು.



ಇಂಗ್ಲಿಷ್ ಉಪನ್ಯಾಸಕರು
ಶಾರದಾ ಕಾಲೇಜು,
ಬಸ್ರೂರು - ೫೭೬ ೨೧೧ ಕುಂದಾಪುರ ತಾ ||
ಮೊಬೈಲ್: ೯೮೪೪೫ ೪೫೨೩೭

ಕಾವ್ಯ ಸಂಚಯ



ಫೋಟೋ ಫ್ರೇಮಿನ ಅಂಗಡಿಯ ಮುಂದೆ

✦ ಜಿ.ವಿ. ಆನಂದಮೂರ್ತಿ

ಕಟ್ಟು ಹರಿದು ಗಾಜು ಒಡೆದ ದೇವರ ಫೋಟೋ
ಫ್ರೇಮಿನ ಅಂಗಡಿಗೆ ಕೊಟ್ಟಿದ್ದೆ ವರ್ಷ ಕಳೆದು
ಆ ದಾರಿ ಮರೆತಿತ್ತು. ಅಂಗಡಿಯ ಒಳಗೆ ಮಬ್ಬು
ಸಂಜೆಯ ಧೂಳು ಕವಿದಿತ್ತು.

ಮಾಗಿದ ಸೂರ್ಯನ ಬಣ್ಣಗಳನ್ನು
ಕಣ್ಣಿಗೆ ತುಂಬಿಕೊಂಡಿದ್ದವು ಅಂಗಡಿಯಲ್ಲಿ
ಧೂಳು ಮುಸುಕಿದ ಬಗೆ ಬಗೆಯ ಕನ್ನಡಿಗಳು
ರವಿವರ್ಮನ ದೇವತೆಗಳು
ತೀರಿಹೋದ ಅಜ್ಜಿಯ ಚಿತ್ರ
ಕೊಳಲು ಹಿಡಿದ ಹಾಲುಗಲ್ಲದ ಕಂದ
ಹೂ ಮೊಗದ ಮೊಗ್ಗಿನ ಜಡೆಯ ತರುಣಿ
ಹೀಗೆ ಇನ್ನೂ ಹಲವು...
ಸಂಜೆಯ ಬೆಳಕು ಕಟ್ಟಿನಾಚೆಗೂ ಹರಿದು
ಬೆಸ್ಸು ಬಾಗಿದ ಬೀದಿಗಳ ಮೇಲೆ ಮಲಗಿತ್ತು.

'ನಮ್ಮ ಅಂಗಡಿಗೆ ಬಂದು ಬಹಳ ದಿನವಾಯಿತು
ಮರೆತುಹೋಯಿತೆ ದಾರಿ?'
ಅಂಗಡಿಯವನ ಮಾತು ಮಸುಕಾಗಿತ್ತು ಕನ್ನಡಿಯಂತೆ
'ಈಚೆಗೆ ತುಂಬಾ ಕೆಲಸ ನೋಡಿ, ಬರಲಾಗಲಿಲ್ಲ!
ಬೇಸರಿಸದಿರಿ.'

ಅಂಗಡಿಯನ್ನೆಲ್ಲಾ ಉದ್ದ-ಅಗಲ ಅಳೆದು ಕೇಳಿದೆ:
'ನೆನಪಿದೆಯೆ, ಕಳೆದ ಯುಗಾದಿಯಲ್ಲಿ
ಹಳೆಯ ಫೋಟೋ! ಹೊಸ ಗಾಜು - ಕಟ್ಟು
ಹಾಕಲೆಂದು ಕೊಟ್ಟಿದ್ದು?'

'ಹೌದು ನೆನಪಾಯಿತು; ಇಲ್ಲಿದೆ ಸೀತಾರಾಮ ಲಕ್ಷ್ಮಣ
ಹನುಮದೇವರ ಮಂಗಳಕರ ಫೋಟೋ ಮರೆಯಲುಂಟೆ!'
ದೀಪ ಬೆಳಗಿದಂತೆ ಕಣ್ಣು ಹೊಳಪಾಯಿತು
ಕತ್ತಲೆಯ ಗುಹೆಯಿಂದ ನಕ್ಷತ್ರಗಳ ಹೊರ ತಂದಂತೆ
ಹುಡುಕಿ ಹೊರತೆಗೆದರು
'ಇದ ನೋಡಿದಾಗಲೆಲ್ಲ
ಬಾಳಿ ಬದುಕಿದ ನಮ್ಮ ಕೂಡು ಕುಟುಂಬದ ನೆನಪಾಗುವುದು;
ಮರೆಯಲಾದೀತೆ ಒಟ್ಟಿಗೆ ಬಾಳಿದ ಆ ದಿನಗಳ!'
ಮೌನವಾದರು ತಿಂಗಳು ಬೆಳಕಿಗೆ ಮೋಡ ಕವಿದಂತೆ..
'ಈಗ ಮನೆ ಒಡೆದು ಚೂರಾಗಿದೆ ಈ ಗಾಜಿನಂತೆ!
ರೆಕ್ಕೆ ಬಲಿತ ಮರಿಗಳು
ಆಕಾಶದಲ್ಲಿ ಮರೆಯಾಗಿವೆ ಗೂಡು ತೊರೆದು
ಈಗ ಬರಿ ನಾವಿಬ್ಬರೆ ಆರಂಕಣದ ಮನೆಯಲ್ಲಿ'
ಕಣ್ಣಂಚಲಿ ತುಳುಕಿದ ನೀರು ತಡೆದು ಹೇಳಿದರು
ಮಾತು ಸರಿದು ಮರೆಯಾಯಿತು ಮೆಲ್ಲಗೆ
ಮೌನದ ಹುತ್ತದೊಳಗೆ.

ಅಂಗಡಿಯ ಮೂಲೆಯಲ್ಲಿ ಧಗಧಗಿಸುತ್ತಾ
ದಂಡೆತ್ತಿ ಹೊರಟ ರಾಮನ ಫೋಟೋ ಕಂಡಿತು:
'ಯಾಕೆ ಮೂಲೆಯಲ್ಲಿಟ್ಟಿರಿ ಕೋದಂಡರಾಮನ?'
'ಅಯ್ಯೋ, ಅಯೋಧ್ಯಾ ರಾಮನ ವಿಷಯ ಕೆದಕಬೇಡಿ
ಹತ್ತಿ ಉರಿಯಲಿಲ್ಲವೆ ದೇಶ?
ಹಾದಿ ಬೀದಿಯಲ್ಲಿ ಹೆಣ ಅನಾಥವಾಗಿ ಬಿದ್ದವಲ್ಲ!
ಮರೆಯುವುದುಂಟೆ ಆ ಭಯದ ದಿನಗಳ!
ಅದಕ್ಕೆಂದೆ ಮರೆಯಾಗಿಟ್ಟೆ'
ನೋವಿನಲಿ ತೋಯ್ದಿತ್ತು ಅವರ ಮಾತು.

'ಎದುರು ಗೋಡೆಯಲ್ಲಿ ಇತ್ತಲ್ಲ ಅಣ್ಣ ಬಸವಣ್ಣನವರ ಫೋಟೋ!
ಏನಾಯಿತು?' ಕೇಳಿದ ಅವರನ್ನು
'ಮಠದ ಅಯ್ಯಗಳು ಕೊಂಡೊಯ್ದರು ಬಸವೇಶ್ವರರನ್ನು

ಆದರೆ, ಆತುರದಲ್ಲಿ ಇಲ್ಲೇ ಮರೆತುಹೋದರು
ವಚನಗಳ ಕಟ್ಟನ್ನು!
ಬಹುದೂರ ಹೋಗಿರಬಹುದು...
ಮರಳಿ ಬರಬಹುದೆ ಅವರು...?'

'ಈ ಸಾಲಿನಲ್ಲಿ ಇತ್ತಲ್ಲ!
ಬುದ್ಧ ಭಗವಾನರು, ಕನಕದಾಸ,
ಅಂಬೇಡ್ಕರ್, ಕುವೆಂಪು, ಕನ್ನಡಾಂಬೆ
ಫೋಟೋಗಳು ಅವೂ ಕಾಣುತ್ತಿಲ್ಲ!'

'ಜಯಂತಿಗಳಂದು ಮರೆಯದೆ ಮಾಲೆ ಹಾಕಲು
ಧೂಳು ಒರೆಸಿ ಕೊಂಡೊಯ್ದರು ಕೆಲವರು
ಈಗ ಪ್ರಾಣವಿಲ್ಲದ ಚಿತ್ರಗಳಿಗೆ ಅಲ್ಲವೇ ಬೇಡಿಕೆ!'
ನೆಲಕೆ ಕಣ್ಣು ಮಣಿಸಿ ಹೇಳಿದರು.

ಕತ್ತಲೆ ಮುಸುಕಿದ ಇನ್ನೊಂದು ಮೂಲೆಯಲ್ಲಿ
ಮಬ್ಬಾದ ಚಿತ್ರವೊಂದು ಕಂಡಿತು;
'ಯಾವುದು ಆ ಫೋಟೋ? ಕಾಣುತ್ತಿಲ್ಲವಲ್ಲ!'

ಬಿರುಗಾಳಿಗೆ ಸಿಲುಕಿದ ನಾವೆಯಂತೆ
ಹೊಯ್ದಾಡಿದರು
ಕೈಗೆತ್ತಿಕೊಂಡು ಬೆಳಕಿಗೆ ಹಿಡಿದು
ನಿಟ್ಟುಸಿರುಬಿಟ್ಟು ಹೇಳಿದರು
ಸಂಜೆಯಲಿ ಸಾವಿರದ ದೀಪ ಬೆಳಗಿದಂತೆ:
'ಗುರುತು ಸಿಕ್ಕಿತೆ? ನಿಮಗೆ ಇವರು ಯಾರೆಂದು?
ಮಹಾತ್ಮ ಗಾಂಧಿ ಎಂದು ಕರೆಯುವರು ಇವರನ್ನು
ಹತ್ತಾರು ವರ್ಷಗಳಿಂದ ಇದ್ದಲ್ಲಿಯೇ ಇದೆ
ಯಾರೂ ಕೇಳಿಲ್ಲ ಇನ್ನೂ!'

ಅಕ್ಕರೆ, ನೇತಾಜಿ ರಸ್ತೆ
ವಾಟರ್ ಟ್ಯಾಂಕ್ ಪೂರ್ವಭಾಗ
ವಿದ್ಯಾನಗರ, ತುಮಕೂರು - ೩

ಮೂರು ಕವಿತೆಗಳು

ಸ್ವಾಮಿನಾಥ

ತೀರ್ಥ - ಅಂಕುರ

ಆ ಪುರುದೇವನಿಗೇನಾಯಿತೋ?
ತಪ್ಪಿದ
ಇಂದ್ರಿನ ವಿನಂತಿಯಿಂದ ಅವಳ
ನಾಟ್ಯವ ನೋಡಲೊಪ್ಪಿದ


ದಿಕ್ಕುಗಳಿಗೇನಾಯಿತೋ
ದಿಕ್ಕು ತಪ್ಪಿತ್ತು ಭ್ರಮಣ
ಆದರೂ ಮಳೆ, ಇಳೆ ತಣಿಸಿ
ಆಗ್ರಹದ ನಮನ

ನೀಲಾಂಜನೆಯೇನು ಸಾಮಾನ್ಯಳೇ
ನೃತ್ಯದೇವತೆಗೂ ಅವಳು ಮಾನ್ಯಳೇ
ಶ್ವೇತಾಗ್ನಿ ಸುರಿದಿತ್ತು ಸೂರ್ಯನಿಂದ
ಬಡಬಾಗ್ನಿ ಹರಿದಿತ್ತು ಕಾಲನಿಂದ

ಒಂದು ಕ್ಷಣ ನೀಲಾಂಜನೆಯೆಂಬ ತೇವ
ಜೀವವನು ಕಿತ್ತ ಬ್ರಹ್ಮದೇವ
ಇಂದ್ರ ಮೀಟಿದ ವೀಣೆಯ ಬದಲು
ಹೆಗಲೇರಿಸಿದ ಸಿತಾರದ ಒಡಲು

ಅರ್ಥವಾಗಿದೆಯೀಗ ಆದಿನಾಥನಿಗೆ
ಎಷ್ಟು ಶಾಶ್ವತ ದೇಹ. ಜೀವದಾಹಕ್ಕೆ
ಥಟ್ಟನೆರುಗಿದ ಗರುಡ ಅಮೃತದ ಭಾಂಡಕ್ಕೆ
ಜೀಮೂತನ ಜತೆ ನಾಗರೆಲುಬುಗಳಿಗೆ

ಹೀಗೇ ತಿರುಗುತ್ತಿದೆ ಭೂಮಿ
ಹೊತ್ತು ಪುರುಷಾರ್ಥ...



ಏಕ ಚಕ್ರಪುರ

ಕುಕ್ಕಿ ಕುಕ್ಕಿ ತಿನ್ನುತ್ತ
ಸಿಕ್ಕಿದ್ದೆಲ್ಲ ಮೆಲ್ಲುತ್ತ
ಹೊಕ್ಕಿತೋ ಬಕ
ಏಕಚಕ್ರಪುರ

ಒಂದೇ ಗಾಲಿಯ ಪುರ
ಒಂದೇ ಕಾಲನ ಸ್ವರ
ಬರುವುದಷ್ಟೇ ಉಂಟು
ಬಲೆಯ ಅಂಟು
ಹೊಳೆಯಲಿಲ್ಲವೇ
ಯಾರಿಗೂ ಊರ ಬಿಡಲು
ಕೊರೆ ಹತ್ತಿದ ಸೀರೆ
ಬೇರೆ ಉಡಲು

ಇದು ಏಕಚಕ್ರಪುರ
ತಿರುಗುವ ದಿಕ್ಕೊಂದೇ
ಭರಪೂರ

★

ಅದು ಮೊರೆಯಲ್ಲ ತೊರೆ
ಕಲಕಿತೇ ಕಡಲೊಡಲ
ಮುಲುಕಿತೇ ಜಗದಗಲ
ಕುಟುಕುಟುಕೆನ್ನುವ ದೀನ ದನಿ
ಕಡೆಯುತ್ತಿದೆ ಹಾಲ್ಗಡಲ
ಉಕ್ಕಿ ಒಸರುತ್ತಿದೆ... ಹಾಲಾಹಲ

ಕಂಠ ತುಂಬಿದ ವಿಷ
ಶಬ್ದವೀಗಿಲ್ಲಿ ಮೌನ
ಹೊಕ್ಕರೊಂದೇ ಬಾರಿ
ಮುಗಿದಂತೆ ಯಾನ

★

ಕುಕ್ಕಿ ತಿಂದ ಬಕ
ಸುಖ ನಿದ್ದೆಯಲ್ಲಿ
ಮತ್ತಿನಿಂದೆಚ್ಚರ
ಮತ್ತೊಂದು ಹಗಲಲ್ಲಿ

★

ಪಂಚಕಾಯಗಳೆಲ್ಲ
ಉಂಡು ಒಂದೇ ಹಣ್ಣ
ತಿರಿದು ತಿಂದವು ಅನ್ನ
ತಾಯಾಜ್ಞೆ...
ಹೌದು ತಾಯಾಜ್ಞೆ

ಏಕಚಕ್ರಪುರದಲ್ಲಿ
ಎರಡೆರಡೆತ್ತು... ಗಾಲಿ
ಒಂದಾತ್ಮ
ಒಟ್ಟೈದು
ಹಾಯಬೇಕಲ್ಲವೇ... ಕೊಂಡ?
ಬರಿಯ ಕೆಂಡ

ಒಂಟಿ ಬಂಡಿಯ ತುಂಬ
ನವರಸ ಪರಮಾನ್ನ
ಉಂಡು ತೇಗಿದರಕ್ಷಣ ನಿದ್ರೆ
ತಕ್ಷಣ ತಾಯಾಜ್ಞೆಯೆಚ್ಚರಿಸಿ
ಕಟ್ಟಿ ಬಂಡಿಯ ಬದಿಗೆ
ಮತ್ತೆ ಬಿರುಗಾಳಿಯಲ್ಲೊಂದು
ಹೇಷಾರವ

ಕಟ್ಟಬೇಕಲ್ಲವೇ
ವಾಸವಿಯ ಬೆಟ್ಟಕ್ಕೆ
ಕಡೆಯ ಬೇಕಲ್ಲವೇ
ಹಾಲ್ಗಡಲ ಕಡೆತನಕ

ಗರಳ ಕಂಠನೇನೋ
ಕೊರಲೊರೆಸಿಕೊಂಡ
ಹುಟ್ಟಬೇಕಿದೆಯಲ್ಲ... ಪೀಯೂಷ?

ಮಗ್ಗಿ



ಎರಡೊಂದ್ಲ ಎರಡು
ಎರಡೆರಡ್ಲ ನಾಲಕ್ಕು
ಒಂದನೇ ಕ್ಲಾಸಿನ ಮಗ್ಗಿ
ಸಂಕಲನ ಸಂಕ್ಷಿಪ್ತತೆಯೇ
ಗುಣಾಕಾರ.

ಆಗಿನ್ನೂ ನಾನು ಎರಡು
ನಾಕಾಗುವ ವೇಳೆಗೆ
ಕಣ್ತೆರೆದಿದ್ದೆ... ನಿದ್ದೆಯೆದ್ದಿದ್ದೆ
ಭೃಗುವಿನ ಕಣ್ಣೊತ್ತಿದನೇ ವಿಷ್ಣು...?
ಎರಡೆರಡ್ಲ ಮೂರಲ ನಾಲ್ಕು
ಶಿವ ತೆರೆದನೇ ಕಣ್ಣ
ಎರಡೆರಡ್ಲ ಮೂರಲ್ಲ ನಾಲ್ಕು

ನಾಲಾಯಕ್ಕು ಈ ಗಣಿತ
ಎಂಬುವಷ್ಟರಲ್ಲೇ ಓದಿದೆ
'ಗ್ರೀಸಿನ ದೇವಾಲಯಗಳಲ್ಲಿ
ಗಣಿತ ಬಾರದವನಿಗೆ ಪ್ರವೇಶವಿಲ್ಲ'
ಕಾರಣ, ದೇವರು ಲೆಕ್ಕಾಚಾರಸ್ಥ
ಯಾರಿಗೆಷ್ಟು ಕೊಡಲಿ
ಕೊಟ್ಟರೆಷ್ಟು ಬಿದ್ದೀತವನಿಗೆ
ಜೀವನದ ಕೊಡಲಿ... ಇತ್ಯಾದಿ

ಅದೇನೇ ಇರಲಿ
ಮುಂದೆ ಮುಂದಿನ ಮಗ್ಗಿಗಳ
ನೋಡುತ್ತ ಹದಿನೆಂಟಕ್ಕೆ ಬಂದಾಗರಿವು
ಒಂದು-ಎಂಟು ಒಂಬತ್ತು
ಮೂರು-ಆರು ಒಂಬತ್ತು
ಐದು - ನಾಲ್ಕು ಒಂಬತ್ತು
ಇಡೀ ಮಗ್ಗಿಯೇ ನವದ್ವಾರಗಳಾಗಿ
ದ್ವಾರಗಳಲ್ಲಿ ನೀರು ಜಿನುಗಿ
ಹುಟ್ಟೇ ಬಿಟ್ಟಿತು ಕೂಸು
ಬತ್ತದಿರಲೀ ಅಂತಃಕರಣದ ಸೆಲೆ
ಒಣಗಿತೋ
ಅಂದೇ
ಸತ್ವಗಳ
ದಾರುಣ ಕೊಲೆ

ನಂ. ೩೨೧, ಪಾರ್ಕ್ ರಸ್ತೆ ಜೆ.ಸಿ. ಬಡಾವಣೆ, ವಿಜಯಪುರ
ದೇವನಹಳ್ಳಿ(ತಾ), ಬೆಂಗಳೂರು (ಗ್ರಾ) ಜಿಲ್ಲೆ
ಮೊಬೈಲ್ : ೯೮೮೬೪ ೦೬೦೬೫

ಮೂರು ಕವಿತೆಗಳು

ಜಿ. ಪಿ. ಬಸವರಾಜು

ಕಡಲೂರಿನಲ್ಲಿ....

೧

ಸುಡುವ ನಡುಮಧ್ಯಾಹ್ನದ ಬಿಸಿಲಲ್ಲಿ
ಕರಗದೇ ಉಳಿದ ಒಂದು ಪುಟ್ಟ ಚಹಾ
ಅಂಗಡಿ, ತೂಕಡಿಸಲಾಗದೆ ಚಹಾ
ಗುಟುಕರಿಸುವ ಪ್ರಾಚೀನ ಪುರಜನರು
ಬೀಡಿಯನ್ನು ಬಾಯಲ್ಲಿಟ್ಟು ಹೊಗೆಯ
ಮತ್ತಿನಲ್ಲಿ ಮೂರು ಲೋಕಗಳ ಚರ್ಚೆಗೆ
ತಂದವರು, ಕದಡದ ಗಾಢ ಧ್ಯಾನದಲಿ
ಮೈಮರೆತ ನೊಣಗಳು, ಜಡವೊ ಚೈತನ್ಯವೊ
ಹೇಳಲಾಗದ ಕಸದ ಗುಡ್ಡೆಗಳು, ಕೆಸರು, ನೀರು
ಇನ್ನೆಷ್ಟೊ ಇಂಥ ನೂರಾರು
ಅಲೆಗಳು
ಕಡಲೂರು ಎಂದರೆ ಸಾಮಾನ್ಯವೇನಲ್ಲ
ಅದಕ್ಕೂ ಉಂಟು ಭೂ
ಪಟದಲ್ಲಿ ಒಂದಿಷ್ಟು ಚುಕ್ಕೆಯಷ್ಟು
ಜಾಗ

೨

ಜನ ನಿಬಿಡ ಕಿರು ಓಣಿಯ ಏಕಾಂತ ಕೋಣೆಯಲಿ,
ಗವ್ವೆನುವ ಮೌನದಲಿ, ಅಲೆಅಲೆಯಾಗಿ ತೇಲುವುವು
ನೂರು ನೆನಪು, ತಡೆಯಲಾರಳು ಅವಳು, ನೆನೆಯಲಾರಳು

ಅವಳು, ಏಕಾಂತದೇಕಾಂತ ನಡುಗಿಸುವುದು ಒಂಟಿ ಅವಳ
ನಿಲ್ಲುವುದಿಲ್ಲ ಒಳ-ಹೊರಗೆ ಜಿಟಜಿಟ ಮಳೆ, ನಿಲ್ಲುವುದಿಲ್ಲ
ನಿರಂತರ ಶ್ರುತಿ, ಎದೆಯಾಳದ ಅಪೂರ್ವ ರಾಗ ತೇಲುವುದು
ಮುಳುಗುವುದು, ಅಬ್ಬರಿಸುವುದು ಹೊತ್ತಲ್ಲದ ಹೊತ್ತಿನಲಿ ಕಡಲು


೩
ನಡೆಯಲಾರದೆ ಕುಳಿತ ಮುದುಕ
ಮಗ್ಗುಲ ಬದಲಾಯಿಸಲಾರದ ರೋಗಿ
ಬೀದಿಯಲ್ಲಿ ಬಿದ್ದ ವಾರಸುದಾರರಿಲ್ಲದ ಶವ

ಮುಪ್ಪು ರೋಗ ಸಾವುಗಳ ಬುದ್ಧನಿಗೇ ಬಿಟ್ಟು
ಬಂದಿದ್ದಾರೆ ಕಡಲುಪ್ಪುನೀರಿಗೆ ಋಷಿಯ ಜನ
ಕುಣಿಯುವರು ನೆಗೆಯುವರು ಅಲೆಅಲೆಯ
ಬೆನ್ನೇರಿ ಜಾರುವರು ಹಾರುವರು, ಕಟ್ಟುವರು
ಕನಸುಗಳ ಮರಳ ಮನೆಮನೆಯಲ್ಲಿ, ಕಾಣಲಾರದು
ಒಳಗು, ಹೊರಗಿನ ಸಿಂಗಾರ ಸೆಳೆಯುವುದು ಕಣ್ಣು

೪
ಕತ್ತಲಿಳಿದಾಗ ಉಳಿಯುವುವು ಹೆಜ್ಜೆ ಗುರುತು
ಅಲೆಬಂದು ನೆಕ್ಕಿದರೆ ಅವೂ ಇಲ್ಲ, ಯಾರು
ಬಂದರು ಯಾರು ಹೋದರು ಯಾವುದಕ್ಕೂ
ಇಲ್ಲ ಲೆಕ್ಕ



ಮಲೆದೇವತೆ



ಸುರಿವ ಮಳೆಗೆ ನಾನಿಲ್ಲ
ಮುತ್ತುವ ಜಿಗಣೆಗಳಿಗೆ ನಾನಿಲ್ಲ
ಎತ್ತಿ ಎಸೆಯುವ ಗಾಳಿಗೂ ನಾನಿಲ್ಲ

ನೀನೊ ಇಲ್ಲಿಯೇ ಬೇರೂರಿದ
ಮಲೆದೇವತೆ
ಹನಿಹನಿಯ ಕೂಡಿಸಿ ಹಳ್ಳವಾಗಿ ಹರಿದವಳು
ಮಂಜು ಮಕಮಲ್ಲ ಬಟ್ಟೆಯಲಿ ಮುಚ್ಚಿಹೋದವಳು
ಉರಿವ ಬಿಸಿಲಿಗೆ ಆವಿಯಾದರೂ
ಮೋಡವಾಗಿ ಇಲ್ಲಿಯೇ ಸುತ್ತಿ ಸುಳಿದವಳು


ಬೆಟ್ಟ ಕಣಿವೆಯಲಿ ದಿಟ್ಟವಾಗಿ ನಡೆದಾಡಿ
ಟೀ ಗಿಡಗಳ ಟೀಕಾಗಿ ಕತ್ತರಿಸಿ
ಎಲೆಎಲೆಯ ನಿ ಕೂಡಿಸಿ
ಬೆನ್ನಮೇಲೆ ಹೊತ್ತವಳು
ಹೊತ್ತು ಗೊತ್ತುಗಳ ಮರೆತವಳು
ನಿನ್ನ ಅಡಿಯಲ್ಲೆ ಹಾವು ಚೇಳುಗಳು
ಹೆಸರಿರದ ಕೀಟಗಳು ಜೀವಕೋಟಿಗಳು
ಜಾರುಗಲ್ಲುಗಳು ಕಾಲಕಲ್ಲುಗಳು
ನೀನೆ ವಿಮುಂಡೆ
ಬರೆಯುತ್ತೀಯ ಹಣೆಬರಹ
ಬಂಡೆಗಳ ಮೇಲೆ, ಗಿಡಗಿಡಗಳ ಮೇಲೆ
ಎಲೆಎಲೆಯ ಮೇಲೆ ಬಿಳಿ ಮೋಡಗಳ ಮೇಲೆ

ಸಂಚಿಯು

ಬರೆಯುತ್ತೀಯ ಹಣೆಬರಹ: ಆರಾಮ
ಕುರ್ಚಿಗಳ ಮೇಲೆ, ಫ್ಯಾಕ್ಟರಿಗಳ ಮೇಲೆ
ಎಲ್ಲಿಯೋ ಕಾಣದ 'ಸ್ವರ್ಗ'ದಲ್ಲಿ
ತಲೆಎತ್ತಿನಿಂತ ಮಹಡಿ ಮಹಡಿ
ಕಟ್ಟಡಗಳ ಮೇಲೆ;

ಕುಡಿದುಬಿದ್ದನೆ ನಿನ್ನ ಗಂಡ
ನಿನ್ನ ಮಕ್ಕಳು ಕಂದಕಕ್ಕೆ ಜಾರಿದರೆ
ನಿನ್ನ ಜೋಪಡಿಯ ತಗಡುಗಳು
ಪಟವಾಗಿ ಹಾರಿದವೆ ಈ ಬೆಟ್ಟಗಾಳಿಗೆ?
ನೀನು ಮೌನದೇವತೆ
ಶಿಲೆಯಲ್ಲಿ ಮೂಡಿದ ಮಾನವ ಆಕೃತಿ

ಕಲ್ಲಾಗಿ ಕಾಲಾಂತರದಲ್ಲಿ
ಉಳಿದು ಬಂದವಳು
ಎಲ್ಲ ಏಳುಬೀಳುಗಳಿಗೆ
ಸರ್ವಕಾಲದ ಸಾಕ್ಷಿಯಾದವಳು
ನಿನಗೆ ಕೈಮುಗಿವೆ
ತಾಯೆ
ನಾನು-
ಹೀಗೆ ಬಂದು ಹಾಗೆ ಹೋಗುವ
ಯಾತ್ರಿಕ




ಜ್ಯೋತಿ ಉರಿಯುವುದು ಹಾಡಾಗಿ

ಒಡಲ ಜ್ಯೋತಿಯನು
ಹಿಡಿದಾಡುವುದು
ಹಾಡುವುದು
ಸ್ವರಕೇಂದ್ರದಲ್ಲಿ ನಿಂತು ನಿಸ್ವರವಾಗುವುದು
ಉಸಿರನ್ನು ಎಳೆಎಳೆಯಾಗಿ
ಬಿಡಿಸಿ ಜೋಡಿಸಿ
ಕಟ್ಟುವುದು ಕಲ್ಪನೆಯ
ಮತ್ತೆ
ಬಿಚ್ಚುವುದು
ಹುಚ್ಚರ ಸಂತೆಯಲ್ಲಿ
ಕೊಳ್ಳುವುದು ಮಾರುವುದು

ನರನರವ ಹುರಿಮಾಡಿ
ಸ್ವರವ ಶೃತಿಮಾಡಿ
ಧ್ಯಾನ ಕದಡದೆ
ನಿಂತ ಯೋಗಿ
ಏರುತ್ತಾನೆ ಸ್ತರ ಸ್ತರವ
ಮುಟ್ಟುತ್ತಾನೆ
ಎತ್ತರೆತ್ತರದ ಶಿಖರಗಳ

ಕತ್ತಲೆಯು ಕರಗುತ್ತ
ವಿರಾಗಿ ಮೈಮರೆಯುತ್ತ
ಕರೆಯುತ್ತಾನೆ ಒಡಲ ಜ್ಯೋತಿಯ ಹೊರಗೆ


ಆಗ ಅವನಿಲ್ಲ
ನೀನಿಲ್ಲ
ನಿಗಿನಿಗಿ ಜ್ಯೋತಿ
ಉರಿಯುವುದು ಹಾಡಾಗಿ
ಲೋಕ ಕರಗುವುದು ತಾನಾಗಿ



ನಂ. ೧೦, 'ಬಿಯಾಸ್', ೧೧-ಎ ಬ್ಲಾಕ್, ವಾಸು ಲೇಔಟ್
ರಂಗರಾವ್ ಕಾಲನಿ, ಮೈಸೂರು - ೫೭೦ ೦೨೨
೯೪೮೦೦ ೫೭೫೮೦

ವಿಷ್ಣು ನಾಯ್ಕರ 'ಜಂಗುಂ ಜಕ್ಕುಂ'

ದಟ್ಟ ಪ್ರಾದೇಶಿಕತೆ, ದೇಶೀ ಸಂಸ್ಕೃತಿಯ ಅನಾವರಣ



ಜಂಗುಂ ಜಕ್ಕುಂ, ಕಾದಂಬರಿ

ಲೇಖಕರು	:	ವಿಷ್ಣು ನಾಯ್ಕ
ಪ್ರಕಾಶಕರು	:	ಶ್ರೀ ರಾಘವೇಂದ್ರ ಪ್ರಕಾಶನ ಅಂಬಾರಕೊಡ್ಲ
ಬೆಲೆ	:	ರೂ. ೧೨೦.೦೦
ಪ್ರಕಟಣಾ ವರ್ಷ	:	೨೦೧೦

ವಿಷ್ಣು ನಾಯ್ಕರು ಉತ್ತರ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ವ್ಯಕ್ತಿ ಅಷ್ಟೇ ಅಲ್ಲ, ಶಕ್ತಿ ಕೂಡ ಅನ್ನುವುದನ್ನು ಅವರು ಇತ್ತೀಚೆಗೆ ಪ್ರಕಟಿಸಿದ ಕಾದಂಬರಿ 'ಜಂಗುಂ ಜಕ್ಕುಂ' ಸಾಕ್ಷಿ ಎನ್ನಬಹುದು. ಹಲವಾರು ಕವನ ಸಂಕಲನಗಳು, ಎರಡು ಕಥಾ ಸಂಕಲನಗಳು, ನಾಟಕಗಳನ್ನು ಬರೆದಿರುವ ವಿಷ್ಣು ನಾಯ್ಕರು ಇತ್ತೀಚೆಗೆ ಬರೆದಿರುವ ಮತ್ತು ಓದುಗರಲ್ಲಿ ಬಹುಕಾಲ ನಿಲ್ಲಬಹುದಾದ ಭಾಷೆ ಸಂಸ್ಕೃತಿಯ ಸೊಗಡನ್ನು ನಿರೂಪಿಸುವ ಪ್ರಾತಿನಿಧಿಕ ಕೃತಿ ಈ 'ಜಂಗುಂ ಜಕ್ಕುಂ'.

ವಿಷ್ಣು ನಾಯ್ಕರು ತಮ್ಮ ಮೊದಲ ಮಾತಿನಲ್ಲಿ 'ನಮ್ಮಲ್ಲಿ ಇಂದು ಬಹಳಷ್ಟು ಜನ ತಮ್ಮಷ್ಟಕ್ಕೆ ತಾವೇ ಪ್ರತ್ಯೇಕ ಪ್ರತ್ಯೇಕ ದ್ವೀಪವಾಗಿ ಬದುಕುತ್ತಿದ್ದಾರೆ. ವ್ಯಕ್ತಿಗಳ ನಡುವೆ, ಜಾತಿ ಜಾತಿಗಳ ನಡುವೆ, ಧರ್ಮ ಧರ್ಮಗಳ ನಡುವೆ ಇಂದು ನಾವೇನು ಕಾಣುತ್ತಿದ್ದೇವಲ್ಲ, ಆ ಗಡಿ ಗೋಡೆಗಳ ಪ್ರಮುಖ ಕಾರಣಗಳಲ್ಲಿ ನಮ್ಮ ಮಂದಿ - ತಿಳಿದೋ ತಿಳಿಯದೆಯೋ ರೂಢಿಸಿಕೊಂಡು ಬಂದಿರುವ ಈ 'ದ್ವೀಪ ಸಂಸ್ಕೃತಿ'ಯೂ ಒಂದಾಗಿದೆ ಎಂಬುದು ನನ್ನ ಭಾವನೆ. ಸುಗ್ಗಿಯ ಮಕ್ಕಳು ಕುಣಿತದ ಸಂದರ್ಭದಲ್ಲಿ ಆಚೆ-ಈಚೆ ಲಂಘಿಸುವ ಕ್ರಿಯೆ, ಮೇಲೆ ಹೇಳಿದಂಥ ಗಡಿ ಗೋಡೆಗಳನ್ನು ದಾಟುವ ಕ್ರಿಯೆಯಾಗಿಯೂ, ನನ್ನನ್ನು ತಟ್ಟಿರುವ ಹಿನ್ನಲೆಯಲ್ಲಿ ಈ ಕಾದಂಬರಿಗೆ 'ಜಂಗುಂ ಜಕ್ಕುಂ' ಎಂದು ಹೆಸರಿಟ್ಟಿದ್ದೇನೆ ಎನ್ನುವಲ್ಲಿಯೇ ಕಾದಂಬರಿಯ ಅಭಿವ್ಯಕ್ತಿಯ ನಿಲುವು ಸ್ಪಷ್ಟವಾಗುತ್ತದೆ.

ಕಾದಂಬರಿಯುದ್ದಕ್ಕೂ ಉತ್ತರ ಕನ್ನಡದ, ಅದರಲ್ಲಿಯೂ ಅಂಕೋಲೆಯ ಅಪ್ಪಟ ಜೀವಂತ ಭಾಷೆ, ಅದರ ಎದೆಯೊಳಗಿದ್ದ ಸಂಸ್ಕೃತಿ ಅನಾವರಣಗೊಂಡಿದೆ. ಹಾಡಿನ ಮೂಲಕವೇ ಮಾತನಾಡುವ ಸಂಸ್ಕೃತಿಯಾದ ಹಾಲಕ್ಕಿ ಜನಾಂಗದ ಭಾಷೆಯ ಜೀವಂತಿಕೆ ಮತ್ತು ಅದರ ಅಂತರ್ಯದಲ್ಲಿರುವ

ಸಂಸ್ಕೃತಿಯನ್ನು ಬಿಂಬಿಸುವ ಪ್ರಯತ್ನ ಇಲ್ಲಿದೆ. ಆಧುನಿಕತೆಯ ನೆಲೆಯಲ್ಲಿ ಹಾಲಕ್ಕಿಗಳ 'ಗೆಟಗಿ' ಕಟ್ಟುವ ಸಂಪ್ರದಾಯದ ಕುರಿತು, ಅವರು ಸೀರೆ ಪಲ್ಕ ಉಡುವ ಸಂದರ್ಭದ ಪರ-ವಿರೋಧವನ್ನು ಅತ್ಯಂತ ಸೂಕ್ಷ್ಮವಾಗಿ ಪಾತ್ರಗಳ ಮೂಲಕ ಚರ್ಚಿಸುತ್ತಾರೆ. ಇಲ್ಲಿನ ಆಧುನಿಕತೆ ಒಂದು ಸೋಗಲ್ಲ, ಅದು ಮುಖವಾಡವೂ ಅಲ್ಲ, ನಾಗರೀಕತೆಯೊಂದು ಪ್ರಗತಿ ಮಾರ್ಗದಲ್ಲಿ ಹಾದುಹೋಗುವಲ್ಲಿನ ಬದಲಾವಣೆಗಳ ಸ್ವೀಕರಣೆ. ಆ ಕಾಲದ ಕಲಿತ ಜನರ ಉತ್ಕೃಷ್ಟ ಆಲೋಚನೆಗಳನ್ನು ಒಳಗೊಂಡು ಸದಾ ಸಮಷ್ಠಿಯ ಒಳಿತನ್ನೇ ಬಯಸುವಂತದ್ದಾಗಿದೆ.

ಮೊದಲಿಗೆ ಊರಗೌಡ ಹಸೆಮನೆ ಹುಲಿಗೌಡನ ಸೊಸೆ ಸೀರೆ ಪಲ್ಕ ಹಾಕುವ ಇರಾದೆ ವ್ಯಕ್ತಪಡಿಸಿದಾಗ ನಡೆಯುವ ವಿರೋಧದ ಸನ್ನಿವೇಶವನ್ನು ಸಮರ್ಥವಾಗಿ ನಿರೂಪಿಸುತ್ತಾರೆ. ಅಪ್ಪ ಮಗ ಪರವಾಗಿದ್ದರೆ ತಾಯಿಯ ವಿರೋಧವಿರುವುದು ಅಚ್ಚರಿ ಮೂಡಿಸುತ್ತದೆ. ಆದರೆ ಗೌಡ ಎಲ್ಲಾ ವಿರೋಧವನ್ನು ಮೀರುವ ಪ್ರಯತ್ನ 'ಕೂಟ'ದಲ್ಲಿಯೂ ವ್ಯಕ್ತವಾಗುತ್ತದೆ. ಲೇಖಕರು ಅಲಗೇರಿ ಒಡೆದೀರು ಮತ್ತು ಮಾಸ್ತರರ ಬಾಯಲ್ಲೂ (ಹೊಂಡದ ಮನೆ ಕುಟ್ಟನ ಬಾಯಲ್ಲಿ ತಟಕ್ಕನೆ ಬಂದ ಮಾತಿಗೆ) ಹೇಳಿಸುತ್ತಾರೆ. ಒಡೆದೀರ ಮಾತು ಇಲ್ಲಿ ಹಾಲಕ್ಕಿಗಳು ಯೋಚಿಸುವಂತಾಗುತ್ತದೆ. ಆ ಕಾಲದ ಹಾಲಕ್ಕಿಗಳ ಸಂಪ್ರದಾಯ ಮಡಿವಂತಿಕೆ ಹೇಗಿತ್ತು ಅನ್ನುವುದು ಅವರದೇ ಭಾಷೆಯಲ್ಲಿ ಅದ್ಭುತವಾಗಿ ಹಿಡಿದಿಟ್ಟದ್ದಾರೆ. ಹಾಲಕ್ಕಿಗಳ ಮನೆಯ ದಣಪೆಯಲ್ಲಿ ನಿಂತು ಜಗತ್ತು ನೋಡಿದ ವಿಷ್ಣು ನಾಯ್ಕರಿಗೆ ಅವರ ಭಾಷೆ ನೀರು ಕುಡಿದಷ್ಟೇ ಸಹಜವಾಗಿದೆ. ಇಲ್ಲಿ ಆವರಿಸುವ ಆಧುನಿಕತೆ ಜಾಗತೀಕರಣ ಸಂಕೇತವಾಗಿದೆ. ಸಂಸ್ಕೃತಿಗೆ ಪೆಟ್ಟು ಬೀಳದ ರೀತಿಯಲ್ಲಿ 'ಗೆಟಗಿ' ಸಂಪ್ರದಾಯದ ಬದಲು ಸೀರೆ ಪಲ್ಕ ಉಡುವುದು ಆಧುನಿಕತೆಯ ಜೊತೆಗಿನ ಅನುಸಂಧಾನದ ಮಾರ್ಗವೆನ್ನಬಹುದು. ಇಲ್ಲಿನ ಕೂಟ, ಸುಗ್ಗಿ, ಹಗಣ, ಗುಮಟೆಪಾಂಗ್, ಬಾಳಮರ, ಗಾಂಧಿ ವ್ಯಕ್ತಿತ್ವದ ತಿಮ್ಮಜ್ಜನ ಅಹಿಂಸಾ ಸತ್ಯಾಗ್ರಹ ಬಹುಕಾಲ ಓದುಗರ ಮನದಲ್ಲಿ ಉಳಿಯುವಂತೆ ಅತ್ಯಂತ ಸಹಜ ಚಿತ್ರಣವಿದೆ. ಹಾಲಕ್ಕಿಗಳ ಒಟ್ಟೂ ಸಂಸ್ಕೃತಿಯ ಪ್ರತೀಕದಂತಿದ್ದ 'ಬಾಳಮರ'ಕ್ಕೆ ಕಟ್ಟೆ ಕಟ್ಟಬೇಕೆನ್ನುವಲ್ಲಿದ್ದ ತಿಮ್ಮಜ್ಜನ ಮಾತಿನಲ್ಲಿ, ಒಡೆದು ಹಾಳಾಗಿ ಹೋಗುವ, ಗುಂಪುಗಳಾಗಿ ಕಾದಾಡುವುದನ್ನು ಬಿಡಿಸಿ ಒಂದು ಮಾಡುವ, ಸಂಸ್ಕೃತಿಯನ್ನು ಗಟ್ಟಿಗೊಳಿಸುವ ಪ್ರಯತ್ನವಿದೆ. ಇಲ್ಲಿ ವಿಷ್ಣು ನಾಯ್ಕರು ತಿಮ್ಮಜ್ಜನ ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡಿದಂತಿದೆ. ಹಾಲಕ್ಕಿಗಳ ಬಗ್ಗೆ ಇದ್ದ ಪ್ರಗತಿಪರ ಕಾಳಜಿ ಮತ್ತು ಪ್ರೀತಿಯಿರುವುದು ಇಲ್ಲಿ ಸ್ಪಷ್ಟ. ಕಾದಂಬರಿ ಕೊನೆಯಲ್ಲಿಯೂ ಕೂಡ 'ಜಂಗುಂ ಜಕ್ಕುಂ' ಹೋಹೋಚೋ ಕೇಳಿ ಬರುತ್ತದೆ. ಪ್ರತಿ ಮನೆಯಲ್ಲಿ ಕುಣಿದು ಇಡೀ ಊರಿಗೇ ಶುಭಕೋರುವ ಹಾಲಕ್ಕಿಗಳ ಸುಗ್ಗಿ ಬದುಕಿನ ಚಲನಶೀಲತೆ, ನಿರಂತರತೆ, ಚಿರಂತನತೆಯ ಸಂಕೇತವಾಗಿದೆ. ತಿಮ್ಮಜ್ಜ ಕೊನೆವರೆಗೂ ಜೀವಂತ ಪಾತ್ರವೆ ಆಗಿರುವುದು ಅವರಿಗೆ ಆ ಪಾತ್ರದ ಬಗೆಗಿರುವ ಅಪಾರ ಗೌರವವನ್ನು ಸೂಚಿಸುತ್ತದೆ.

ವಿಷ್ಣು ನಾಯ್ಕರ ಕಥನ ಕೌಶಲ್ಯ ಬೆರಗುಗೊಳಿಸುವಂತಹದು. ಪಾತ್ರ ಪೋಷಣೆ, ಒಂದು ಪಾತ್ರಕ್ಕೆ, ಒಂದು ಸನ್ನಿವೇಶ ಕಟ್ಟಿ ಕೊಡುವ ಓಸ್ನೆಲೆ ಅವರ ಅಪಾರ ಅನುಭವದ ಜಗತ್ತನ್ನು ಪರಿಚಯಿಸುತ್ತದೆ. ತಮ್ಮ ಸುತ್ತಲೂ ನಡೆಯುವ ಸಂದರ್ಭ ಸನ್ನಿವೇಶಗಳನ್ನು ಒಳಗೊಳ್ಳುತ್ತಲೇ ಬೇರೆಯವರ ಅನುಭವ ಸಂವೇದನೆಗಳು ಅದರಲ್ಲಿ ಸೇರಿ ಹೋಗುತ್ತವೆ. ಅಷ್ಟೇ ಅಲ್ಲ ಅದರಲ್ಲಿ ತಮ್ಮ ನಿಲುವನ್ನು ಪ್ರಕಟಿಸುತ್ತಾರೆ. ಇದನ್ನು ಕಾದಂಬರಿಯುದ್ದಕ್ಕೂ ಕಾಣಬಹುದು.

ನಗರ ಕೇಂದ್ರಿತ ಪ್ರದೇಶಗಳಲ್ಲಿ ಜಾತಿ ಪದ್ಧತಿಯ ಯಾವ ವಿಕಾರಗಳೂ ಇಲ್ಲವಾಗುತ್ತಿರುವ

ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಕೂಡ ದಟ್ಟವಾಗಿರುವ ಮನೋಧರ್ಮವನ್ನು ಪಾತ್ರಗಳ ಮಾತಿನ ಮೂಲಕ ತರುಟೆಗೆ ತೆಗೆದುಕೊಳ್ಳುತ್ತಾರೆ. ಹಳೇ ಪೈಕರ ಪಾಡುರಂಗ, ಗೋವಳರ ಪ್ರೇಮಿಯ ಮದುವೆಯ ಬಗ್ಗೆ ಇದ್ದ ಜಾತಿ ಬಾಂಧವರ ವಿರೋಧ, ಈ ಕುರಿತು ನಾಗೇಶ ಗುನಗರ ಮನೆಯಲ್ಲಿ ನಡೆಯುವ ಪಂಚಾಯತಿ, ಚಾಂದ ನಾಯ್ಕ, ಜಾನಕಿ ಜಾತಿ ಬಾಂಧವರ ಹೆದರಿಕೆಗೆ ಹೆದರದೇ ಇದ್ದದ್ದು ಸನ್ನಿವೇಶ ಬಿಗಡಾಯಿಸುವ ಹೊತ್ತಿಗೆ ಅಚ್ಚರಿ ತಿರುವು ಪಡೆದುಕೊಳ್ಳುತ್ತದೆ. ನಾಗೇಶ ಗುನಗರಿಗೆ ನೇರವಾಗಿ - ಚಾಂದ ನಾಯ್ಕ 'ನಾನು ಹೀಗೆ ಹೇಳ್ದೆ ಅಂತಾ ಗುನಗರೆ, ತಪ್ಪತಿಳುಕಿಲ್ಲ. ಜಾತಿ ಲೆಕ್ಕದಲ್ಲಿ ನೀವು ನಮಗಿಂತ ಮೇಲ್ನವರು. ನಿಮಗೆ ಒಡೆದೀರ ಅಂತೆ ಒಂದೀವೂ. ನಿಮ್ಮನೆಯ ಚಿಟ್ಟೆವರೆಗಷ್ಟೇ ನಮಗೆ ಜಾಗ. ನಮ್ಮ ಜಾತಿಯನ್ನು ಮುಟ್ಸಕಂಡ್ರೆ ನಿಮ್ಗೆ ಏನೋ ಒಂಥರ ಭಾವನಿ. ನೀವು ಅಂದ್ರೆ, ಮೇಲ್ಜಾತಿ ಜನ. ಬೇಕಾದಾಗ ನಮ್ಮ ಶೂದ್ರ ಜಾತೀನ ಹೇಂಗ್ಹೆಂಗೋ ಬಳಸ್ಕಂತೆ ಬಂದೀರಿ! ಹಟ್ಟಿ ಕೆಲ್ಸಕೆ, ಎಮ್ಮೆ ಮೈ ತೊಳಸೊಕೆ, ಅಂಗಳಕ್ಕೆ ಮಣ್ಣು ಹಾಕಿ ಸಾರಸೊಕೆ, ಎಲ್ಲಾದಕ್ಕೂ ಬೇಕ್. ತ್ವಾಡೆ ಮಂದಿಗೆ ತಮ್ಮ ತಲಬು ತೀರ್ಸಕೊಂಬುಕೂ ನಮ್ಮ ಹೆಣ್ಮಕ್ಳೇ ಬೇಕ್ ಹೌದೋ ಅಲ್ವೊ?' ಈ ಮಾತಿನ ಸೂಕ್ಷ್ಮ ಬಂಡಾಯ ನಾಗೇಶ ಗುನಗಾರಿಗಷ್ಟೇ ಅಲ್ಲ ಇಡೀ ಮೇಲ್ಜಾತಿಗೆ ಕೇಳಿದ ಪ್ರಶ್ನೆಯಾಗಿತ್ತು. ಹಾಗೆಯೇ ಜಾನಕಿ ಹೇಳಿ ಮಾತು 'ಮೇಲ್ಜಾತಿ ಜನ ಅನ್ನುವವರು ನಮಗೆ ಹೊರಗೆ ನಿಲ್ಸಿಟ್ಟಾಗ ಅವಮಾನದಿಂದ ನಮ್ಮ ಮನಸ್ಸು ಹೇಗೆ ಒಳಗೊಳಗೆ ಕುದಿತದೆಯೋ, ಹಾಗೇ ತಮಗಿಂತ ಕೆಳಜಾತಿಯೆಂದು ತಿಳಿಕೊಂಡ ಈ ಗೋವಳರಂಥವರಿಗೆ, ನಿಮ್ಮನ್ನು ಮುಟ್ಸಕೊಳ್ಳುದಿಲ್ಲ, ನೀವ್ ಕೀಳ್ಜಾತಿ, ನಿಮ್ಮನೆ ಹೆಣ್ಣ ಬ್ಯಾಡ ಎಂದೆಲ್ಲಾ ಹೇಳ್ದ್ರೆ ಅವರಿಗೂ ನಮಗಾದ ಹಾಂಗೇ ನೋವಾಗುದೆಲ್ಲವೊ? ನಮ್ಮನ್ನು ಅಪಮಾನ ಮಾಡುವ ಮೇಲ್ಜಾತಿ ಜನ ಮಾಡಿದ ತಪ್ಪನ್ನೇ ನಾವೂ ಮಾಡಬೇಕಂತೀರೋ?' ಅನ್ನುವಲ್ಲಿಯೂ ಮೇಲ್ಜಾತಿ ಬಗೆಗಿನ ರೋಷವನ್ನು ತೋಡಿಕೊಂಡು ಪಾಂಡು ಪ್ರೇಮಿಯ ಮದುವೆಯನ್ನು ಸಮರ್ಥಿಸಿಕೊಳ್ಳುತ್ತಾಳೆ. ಬಂಡಾಯದ ಸೂಕ್ಷ್ಮ ಎಳೆಗಳು ಕಾದಂಬರಿಯ ಅಲ್ಲಲ್ಲಿ ವ್ಯಕ್ತವಾದರೂ ಈ ಸನ್ನಿವೇಶದಲ್ಲಿ ಮಾತ್ರ ಮುಟ್ಟಿನೋಡಿಕೊಳ್ಳುವಂತ ಹೊಡೆತ ನೀಡಿದಂತಿದೆ. ಅಚ್ಚರಿ ಎಂದರೆ ನಾಗೇಶ ಗುನಗರ ಸಾವಿನ ಹಿಂದೆ ಜಾತಿಗಾದ ಅವಮಾನದ ಮಾತಿನ ಹೊಡೆತವೂ ಇದೆ ಎಂಬುದನ್ನೂ ಮರೆಯುವಂತಿಲ್ಲ. ಆದರೆ, ನಾಗೇಶ ಗುನಗರ ಸಾವಿನ ಸತ್ಯವನ್ನು ನಿಗೂಢವಾಗಿಡುತ್ತಾರೆ. ಕೊಮಾರನ ಸಾವಿನ ಹಿಂದೆ ಯಾವುದೋ ನಂಬಿಕೆಯ ಲೇಪವಿದ್ದರೂ ಅದನ್ನು ನಿಗೂಢವಾಗಿ ಲೇಖಕರು ಇಟ್ಟಿದ್ದಾರೆನಿಸುತ್ತದೆ.

ಜಾಗತೀಕರಣದ ಪ್ರಭಾವಕ್ಕೆ ನುಜ್ಜುಗುಜ್ಜಾಗುತ್ತಿರುವ ಭಾಷೆ, ಸಂಸ್ಕೃತಿಗಳ ಉಳಿವಿಗಾಗಿ, ಹೊಸತನ ಮೂಡಿಸಿಕೊಳ್ಳುವುದಕ್ಕಾಗಿ ನಮ್ಮ ಎದುರಿಗಿರುವ ಪೀಳಿಗೆಗೆ ಭಾಷೆ, ಸಂಸ್ಕೃತಿಯ ಬಗ್ಗೆ ಅಭಿಮಾನ ಮೂಡಿಸುವುದಕ್ಕಾಗಿ 'ಜಂಗುಂ ಜಕ್ಕುಂ'ನಲ್ಲಿ ಜಾಗ್ರತಿಯೊಂದು ಅಂತರ್ಮುಖಿಯಾದಂತಿದೆ. ಜಾಗತೀಕರಣದ ವಿರುದ್ಧದ ಚಳುವಳಿಯ ಎಚ್ಚರವೊಂದು ರೂಪುಗೊಂಡಂತಿದೆ. ಚಳುವಳಿಗಳು ಸ್ಥಗಿತಗೊಂಡಿರುವ ಇಂದಿನ ಸಂದರ್ಭದಲ್ಲಿ ವಿಷ್ಣು ನಾಯ್ಕರ 'ಜಂಗುಂ ಜಕ್ಕುಂ' ದೇಶಿ ಸಂಸ್ಕೃತಿಯ ಚಿಂತನೆಯ ಹೊಳಹುಗಳು, ಸಂಸ್ಕೃತಿಯ ಪ್ರಕಾಶಮಾನತೆ, ಭಾಷೆಯ ಚಿರಂತನತೆ ಆಧುನಿಕತೆಯೊಂದಿಗೆ ಅನುಸಂಧಾನ ಮಾಡುವಲ್ಲಿನ ಪ್ರಯೋಗಶೀಲತೆ ಗಮನಿಸಬೇಕಾದದ್ದು.

ನಾಗೇಶ ಗುನಗರ ಮತ್ತು ಕಲ್ಯಾಣಿಯ ಮೋಗಂಪ್ರೀತಿ ಎಬ್ಬಿಸುವ ಅಲೆಗಳು ಅದನ್ನು ಲೇಖಕರು ನಿಭಾಯಿಸಿದ ರೀತಿ ಮಾತ್ರ ಅದ್ಭುತ. ಆ ಪ್ರಕರಣದ ಸನ್ನಿವೇಶಗಳು, ಮಾತು, ಮಂದವಾಗಿ ಹರಿಯುವ ಪ್ರೀತಿ ಕೂಡ ಪ್ರಕಾಶಮಾನವಾಗಿ ಊರಿನ ಜನರ ಬಾಯಲ್ಲಿ ಓಡಾಡುತ್ತವೆ. ವಿಷ್ಣು ನಾಯ್ಕರಲ್ಲದೆ ಬೇರೆ

ಲೇಖಕನಾಗಿದ್ದರೆ ನಾಗೇಶ ಗುನಗರ ಮನೆಯ ಪಕ್ಕದಲ್ಲಿ ಇನ್ನೊಂದು ಮನೆ ನಿರ್ಮಾಣವಾಗಿರುತ್ತಿತ್ತು! ಎನ್ನಿಸದೇ ಇರದು. ಆದರೆ ಇಲ್ಲಿ ನಾಗೇಶ ಗುನಗರ ನಿರ್ಲಿಪ್ತ ಮನೋಭಾವ ಲೇಖಕರಿಗೆ ಪ್ರೀತಿಯ ಬಗೆಗಿದ್ದ ಗಾಢ ಶ್ರದ್ಧೆ ಪ್ರಕಟವಾದಂತಿದೆ.

ಕಾದಂಬರಿಯಲ್ಲಿ ಬರುವ ಪಾತ್ರಗಳು ಜಾನಕಿ, ಗಂಪು, ಚಾಂದ ನಾಯ್ಕ, ಹೊಸಬಿ, ಹುಲಿಗೌಡ, ತಿಮ್ಮಜ್ಜ ಹೀಗೆ ಕಾದಂಬರಿಯ ಕಥನದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಭಾಷೆ ಸಂಸ್ಕೃತಿಯ ಕುರಿತು, ಹಾಲಕ್ಕಿಗಳ ಕುರಿತು, ಆ ಕಾಲದ ಸಾಮಾಜಿಕ ಸಂದರ್ಭ ಹಾಗೂ ಸಾಂಸ್ಕೃತಿಕ ನೆಲೆಗಳು ಒಳಗೊಳ್ಳುವ ಸ್ವರೂಪ, 'ಬಾಳಮರ' ಎಂಬ ಇಡೀ ಸಮುದಾಯ ಬಲಗೊಂಡು ಚಿಗುರಬೇಕೆಂಬ ಕಾಳಜಿಯಲ್ಲಿ ಲೇಖಕರು ವ್ಯಕ್ತಮಾಡುವ ಸುಧಾರಣವಾದಿ ನೆಲೆಯನ್ನು ಕಾಣಬಹುದು.

ಕಾದಂಬರಿಯ ಕೊನೆ ಕೂಡ ಅದ್ಭುತವೇ. ನಾಗೇಶ ಗುನಗರ ಕಳೇಬರ ಮೇಲ್ಜಾತಿಯ ಇರುವನ್ನು ಕೊನೆಗೊಳಿಸುವ ಸಂಕೇತವಾದರೆ, ಸುಗ್ಗಿಯ ಜನ ಕುಣಿದು ಆಚೀಚೆ ಲಂಘಿಸುವುದರ ಹಿಂದೆ ಪಾಂಡುರಂಗ ಪ್ರೇಮಿಯರು ಒಂದಾಗುವಿಕೆ ಜಾತಿಯನ್ನು ಮೀರುವುದನ್ನು ಸೂಚಿಸುತ್ತದೆ. ಹಾಗೆಯೇ ಮಗಳು ಜಾನಕಿಯ ನಿರ್ಧಾರ (ಪಾಂಡು-ಪ್ರೇಮಿ ಮದುವೆ)ದ ಬಗ್ಗೆ ಸಿಟ್ಟಿಟ್ಟುಕೊಂಡ ಹೊಸಬಿಯ ಮನೆ ಹತ್ತಿರಕ್ಕೆ ಬರುತ್ತಿದ್ದಂತೆ 'ತಂಗಿ, ಕುಡುಕ್ ತ್ವಾಡಿ ನೀರ್ ಕೊಡೆ' ಎಂಬಲ್ಲಿನ ಸಹಜತೆ, ಆಪ್ತತೆ, ಹೊಸಬಿಯ ಮನಕರಗುವ ಸಂದರ್ಭ ಬಹುದೊಡ್ಡ ಮೌಲ್ಯವನ್ನು ಬಿಂಬಿಸುತ್ತದೆ.



ಫಾಲ್ಗುಣ ಗೌಡ, ಅಚವೆ

ಅಂಚೆ : ಅಚವೆ


ತಾಲೂಕ : ಅಂಕೋಲಾ (ಉ.ಕ.) ೫೮೧ ೩೪೪

ಮೊಬೈಲ್ : ೯೪೪೮೭೩೩೮೭೮



‘ಅಕ್ಕ ಸೀತಾ, ನಿನ್ನಂತೆ ನಾನೂ ಶಂಕಿತ’

ನೋವು-ಹಿಂಸೆ-ತಲ್ಲಣಗಳಿಗೆ ಸಂವೇದನೆಯ ಅಕ್ಷರರೂಪ



ಅಕ್ಕ ಸೀತಾ ನಿನ್ನಂತೆ ನಾನೂ ಶಂಕಿತ, ಕವನಸಂಕಲನ
ಲೇಖಕರು : **ಪೀರ್‌ಬಾಷಾ** । ಪ್ರಕಾಶಕರು : ಪಲ್ಲವ ಪ್ರಕಾಶನ, ಚನ್ನಪಟ್ಟಣ
ಬೆಲೆ : **ರೂ. ೮೦.೦೦** । ಪ್ರಕಟಣಾ ವರ್ಷ: ೨೦೧೦

ಪೀರ್‌ಬಾಷಾ ಅವರ ‘ಅಕ್ಕ ಸೀತಾ, ನಿನ್ನಂತೆ ನಾನೂ ಶಂಕಿತ’ ಎಂಬ ಕವಿತಾ ಸಂಕಲನದಲ್ಲಿ ಸಿವುಡು ಒಂದು, ಎರಡು, ಮೂರು, ನಾಲ್ಕು ಎಂದು – ಈ ನಾಲ್ಕೂ ಭಾಗಗಳಲ್ಲೂ ನಲವತ್ತೇಳು ಕವಿತೆಗಳು ಸಂಕಲಿತಗೊಂಡಿವೆ.

ಲಕ್ಷ್ಮೀಪತಿ ಕೋಲಾರ ಅವರ ಸುದೀರ್ಘ ಮುನ್ನುಡಿ ಹಾಗೂ ಬಂಜಗೆರೆ ಜಯಪ್ರಕಾಶರ ಬೆನ್ನುಡಿಗಳೊಂದಿಗೆ ಈ ಕೃತಿಯ ಬಗ್ಗೆ ಸುದೀರ್ಘವಾದ ಹಾಗೂ ನ್ಯಾಯಯುತವಾದ ಒಳನೋಟಗಳು ಇದರ ಓದುಗ ವಲಯಕ್ಕೆ ದೊರೆತಂತಾಗಿದೆ.

ಪೀರ್‌ಬಾಷಾ ಅವರ ಇಲ್ಲಿನ ಕವಿತೆಗಳನ್ನು ಸಮಗ್ರವಾಗಿ ಪರಿಭಾವಿಸಿದಾಗ ಕಂಡುಬರುವ ಬಹು ಮುಖ್ಯ ಸಂಗತಿಯೆಂದರೆ, ಭಾರತದಂತಹ ಶ್ರೇಣೀಕೃತ ಸಾಮಾಜಿಕ ಪರಿಸರದಲ್ಲಿ ಅಲ್ಪಸಂಖ್ಯಾತ ಜನಸಮುದಾಯಕ್ಕೆ ಸೇರಿದ ಹಾಗೂ ಸೂಕ್ಷ್ಮ ಸಂವೇದನಾಶೀಲ, ಜೀವಪರವಾದ ಕಾಳಜಿಯುಳ್ಳ ಮನಸ್ಸು – ಮತೀಯ ಹಾಗೂ ಕೋಮುದಳ್ಳುರಿಯ ಕಾರಣಗಳಿಗೆ– ವಿನಾಕಾರಣ ಅನುಭವಿಸುವ ನೋವು, ಹಿಂಸೆ, ತಲ್ಲಣಗಳಿಗೆ ಅಭಿವ್ಯಕ್ತಗೊಂಡು ಸಂವೇದನೆಯ ಅಕ್ಷರರೂಪವಾಗಿ ಈ ಕೃತಿ ಕಾಣುತ್ತದೆ. ಈ ಸಂಕಲನದ ಶೀರ್ಷಿಕೆಯ ಕವಿತೆಯಿಂದ ಹಿಡಿದು ಇಲ್ಲಿನ ಬಹುಪಾಲು ಕವಿತೆಗಳು ಈ ಆತಂಕದ ಕೇಂದ್ರದ ಸುತ್ತಲೇ ಅಭಿವ್ಯಕ್ತಿಗೊಂಡಿರುವುದನ್ನು ಕಾಣಬಹುದು ‘ನಾನು ಈ ಲೋಕದ ಕಳಂಕಿತರ ಪ್ರತಿನಿಧಿ’ ಎಂದೇ. ತನ್ನನ್ನು ಗುರುತಿಸಿಕೊಳ್ಳುವ ಕವಿ ತನ್ನ ಮೇಲಿನ ಶಂಕೆಯನ್ನು ಸೀತೆಯ ಶೀಲದ ಬಗೆಗಿನ ಶಂಕೆಯೊಂದಿಗೆ ಏಕೀಭವಿಸಿಕೊಳ್ಳುತ್ತಾನೆ.

ಅಕ್ಕ ಸೀತಾ
ನಿನ್ನಂತೆ ನಾನೂ ಶಂಕಿತ
ನಿನ್ನ ಪಾತಿವ್ರತ್ಯದಂತೆ ನನ್ನ ದೇಶಭಕ್ತಿ
ಸಾಬೀತು ಪಡಿಸುವುದಾದರೂ ಹೇಗೆ ಹೇಳು
ಶೀಲ!
ಯಾವ ಸಾಕ್ಷಿಗಳನ್ನು ತರುವುದೆಲ್ಲಿಂದ
ನಮ್ಮ ಮನೆಯಲ್ಲಿಯೇ ನಾವು ನಿರಾಶ್ರಿತರು

ತುಂಬಿದ ನಾಡೊಳಗೆ ಪರಕೀಯರು
ನಮ್ಮ ನೆತ್ತರಿನಿಂದ ಅವರು/ನೆಮ್ಮದಿಯನು ಕಿತ್ತುಕೊಂಡಿದ್ದಾರೆ
ಅಪವಾದದ ಅಸ್ತ್ರಗಳಿಂದ ಹೃದಯ
ಗಾಯಗೊಳಿಸಿದ್ದಾರೆ. *(ಅಕ್ಕ ಸೀತಾ ನಿನ್ನಂತೆ ನಾನೂ ಶಂಕಿತ)*

ಎಂಬ ಸಾಲುಗಳನ್ನು ಗಮನಿಸಿದರೆ, ನಿಸಾರ್ ಅಹಮದ್ ಬಹಳ ಹಿಂದೆಯೇ ಬರೆದ 'ನಿಮ್ಮೊಳಗಿದ್ದು ನಿಮ್ಮಂತಾಗದೆ' –

ಬಾಳುವುದಿದೆಯಲ್ಲಾ ಆದು ಬಲು ಕಷ್ಟದ ಕೆಲಸ,
ಒಳಗೊಳಗೆ ಬೇರು ಕೊಯ್ದು
ಲೋಕದೆದುರು ನೀರು ಹುಯ್ದು -ಇತ್ಯಾದಿ

ಕವಿತೆ ಹಾಗೂ ಅದರ ಒಟ್ಟಿಗೆ ಇಂದಿಗೂ ಕೂಡಾ- ನೆನಪಾಗುವುದರ ಹಿಂದಿರುವ ಇಂದಿನ ಸಾಮಾಜಿಕ ಕಟು ವಾಸ್ತವ-ಅಲ್ಪಸಂಖ್ಯಾತರಿಗೆ ಈ ದೇಶದಲ್ಲಿರುವ ತಲ್ಲಣಗಳ ದೃಷ್ಟಿಯಿಂದ ಏನೂ ಬದಲಾವಣೆಯೇ ಕಾಣದ-ವಿಷಾದದ ಸಂಗತಿ ಗೋಚರಿಸುತ್ತದೆ. ಮತ ವರ್ಗದ ಮತಿ ಸುಟ್ಟು ಮಣ್ಣಾಗಲಿ, ಧರ್ಮಗ್ರಂಥಗಳ ಗೊಬ್ಬರವನುಂಡು/ಜೋಳ ಗುಲಾಬಿಗಳ ಕಾಡು ಬೆಳೆಯಲಿ ಎಂಬ ಧಾರ್ಮಿಕ ಸೌಹಾರ್ದತೆ ಹಾತೊರೆಯುವ ಕವಿಯ ಕಣ್ಣಿಗೆ, ಕೊಲೆಗಡುಕರ ಹಣೆಯ ಮೇಲೆ ಸಂಸ್ಕೃತಿಯ ಸಂಕೇತಗಳನ್ನು, ಅತ್ಯಾಚಾರಿಗಳ ಬಾಯಲ್ಲಿ ಮಾತ್ರ ವಂದನೆಯ ಗೀತೆಯನ್ನು ಕೇಳಿದಾಗ ರೋಷ ಉಕ್ಕಿ ಬರುತ್ತದೆ. ನನ್ನ ತಾಯಿ ಶುಭ್ರಜ್ಯೋತ್ಸ್ನಾ ಪುಲಕಿತ ಯಾಮಿನಿ ಅಲ್ಲ ಸದಾವತ್ಸಲೆ ಎಂದು ನಮಿಸುವ ಸ್ತುತಿಸುವ ಹಾಡುಗಳು ನಟನೆಯಾಗಿ ಕಾಣುತ್ತವೆ. ತನ್ನ ನಾಡಿನ ಪರ್ವತಗಳನ್ನು ತಾಯ ಮೊಲೆಗಳಿಗೆ ಹೋಲಿಸುವುದು ತಾಯ್ಗಂಡ ಭಕ್ತಿಯಾಗಿ ಭಾಸವಾಗುತ್ತದೆ!

ಅಖಂಡ ನೆಲವೇ ನನ್ನ ಮಾತೃಭೂಮಿ
ಸೀತಾ ನನ್ನ ಅಕ್ಕ, ಬಸವ ನನ್ನಣ್ಣ
ಶಂಬೂಕ ನನ್ನ ಬಂಧು
ಬುದ್ಧ ಮಾರ್ಗದರ್ಶಕ, ದತ್ತ ನನ್ನ ಮಿತ್ರ
ತುತ್ತಿನ ತತ್ವಶಾಸ್ತ್ರ ನನ್ನ ಸಿದ್ಧಾಂತ
ನೈಲ್, ಆಫ್ರಿಕಾ, ದ್ರಾವಿಡಗಳಲ್ಲಿ ನನ್ನ ಕುಲ ಮೂಲ
ಪ್ಯಾಲೆಸ್ತೈನಿನ ವಿಧವೆ, ರುಮೇನಿಯಾದ ಚೆಲುವೆ
ಗ್ರೀಕಿನ ಕೂಲಿ, ಫ್ರಾನ್ಸಿನ ಜಾಡಮಾಲಿ
ಚೀನಾದ ರೈತ, ಕ್ಯೂಬಾದ ಯೋಧ, ಅಫಘಾನ ಅನಾಥ
ಎಲ್ಲ ನನ್ನ ಸಂಬಂಧಿಗಳು *(ಅಖಂಡ ನೆಲವೇ ನನ್ನ ಮಾತೃಭೂಮಿ)*

– ಎಂಬ ವಿಶ್ವಾತ್ಮಕ ನೆಲೆಯ-ಮಾನವೀಯ ನೆಲೆಗಳಿಗೆ ಕವಿತೆ, ಹೃದಯ ತುಡಿವುದನ್ನು ಕಾಣಬಹುದು.

ಆತ್ಮದ ಬಾಯಿಗೆ ಬ್ರಹ್ಮಾಂಡದ ಬೀಗ ಬಿದ್ದಿದ್ದು ನಾಯಿ ಪಾಡನ್ನು ಅನುಭವಿಸಿ ನಾಯಿಯೇ ತಾನಾಗಿರುವುದರಿಂದ ತನ್ನ ನಿಷ್ಠೆಯನ್ನು ಯಾರೂ ಕೊಲ್ಲಲಾಗದೆಂಬ ಸಂಸತವಿದೆ ಕವಿಗೆ. ವಿವೇಕವೇ ಹಾಳು ಮನೆಯಾಗಿ ಬಾವಲಿ ನೇತಾಡುತ್ತಿರುವಾಗ, ಪುರಾಣ ಪಾರಾಯಣದ ನುಸಿ ಮತಿಗೆ ಹತ್ತಿರುವಾಗ, ಧರ್ಮದ ಹೆಸರಿನಲ್ಲಿ ಭೂಗೋಲವೇ ಸ್ಮಶಾನವಾಗುತ್ತಿರುವ ಹೊತ್ತಿನಲ್ಲಿ, ಕೊಲೆಗಡುಕರ ನಾಲಿಗೆಯಲ್ಲಿ ಧರ್ಮದ ಮಂತ್ರ ಸಿಡಿಯುತ್ತಿರುವ ಹೊತ್ತಲ್ಲಿ ಮೂಡಿ ಬಂದ ತನ್ನ ಕವಿತೆ ಪ್ರಳಯ ಕಾಲದ

ಕವಿತೆಯಾಗಿರುವುದರಿಂದ ಅದಕ್ಕೆ ಸೌಂದರ್ಯ ಮೀಮಾಂಸೆಯ ಹಂಗಾಗಲಿ, ಲಯದ ಭಯವಾಗಲಿ ಇಲ್ಲದ್ದರಿಂದ ಜೀವಪ್ರೀತಿಯ ತನ್ನೀ ಕವಿತೆಗೆ ಸಾವೆಂಬುದು ಇರಲು ಸಾಧ್ಯವಿಲ್ಲೆಂಬ ಆತ್ಮವಿಶ್ವಾಸ ತನ್ನ ಕವಿತೆಯ ಬಗೆಗೆ ಕವಿಗಿದೆ.

ಪ್ರೇಮದ ಕಣ್ಣುಗಳಲ್ಲಿ ಶಂಕೆ ಸೆಲೆಯೊಡೆಯುತ್ತಿರುವ ಈ ಸನ್ನಿವೇಶದಲ್ಲಿ, ಈ ಕವಿಗೆ, ತನ್ನನ್ನು ಈ ನೆಲದ ಜೀವ, ದೇಶದ ಪ್ರಾಣ, ಸಂಸ್ಕೃತಿಗಳ ಧಾತು ಗದ್ದುಗೆಗಳ ಹೇತು ವೆಂದು ಗುರುತಿಸಿಕೊಳ್ಳುವ ಅಭಿಮಾನ; ಆತ್ಮವಿಶ್ವಾಸಗಳು ಉಳಿದುಕೊಂಡರೂ ಒಂದು ರೀತಿಯ ಅನಾಥ ಪ್ರಜ್ಞೆಗೆ ಈ ಸನ್ನಿವೇಶ ಸದಾ ದೂಡುತ್ತದೆ.

ಈ ಭೂಮಿಯ ಮೇಲೆ /ಎಲ್ಲರೂ ಇದ್ದಾರೆ
ನಾನು ಒಬ್ಬನೆ!
ಎಂಬ ಒಂಟಿತನ, ಹಾಗೂ,
ರೋಗದ ಮೂಲವೆಂದು ಹಿಡಿ ಕೊಲ್ಲು ಹೊಸಕೀ ಹಾಕು
ಹಂದಿ ನಾಯಿ ಇಲಿ ಸೊಳ್ಳೆ ಮತ್ತು ಸಾಬರು
ಇಲ್ಲ ಇಲ್ಲ ಎಲ್ಲರೂ ಕೆಟ್ಟವರಲ್ಲ
ಇತ್ಯಾದಿ *(ಇಲಿ, ಸೊಳ್ಳೆ ಮತ್ತು ಸಾಬರು)*

ಎಂದು ಹೊಸಕಿ ಹಾಕಬೇಕಾದವುಗಳ ಪಟ್ಟಿಯಲ್ಲಿ ಸಾಬರನ್ನೂ ಸೇರಿಸಿಬಿಡುವ ಕ್ರೌರ್ಯ ಹಾಗೂ ಕೊನೆಯ ಸಾಲಿನಲ್ಲಿರುವ ಔದಾರ್ಯವಿಲ್ಲದೆ, ಅನುಭವಿಸುವ ಅಲ್ಪಸಂಖ್ಯಾತ ಸಮುದಾಯದ ನೋವುಗಳನ್ನು - ಈ ಕೃತಿಯ ಮೊದಲ ಭಾಗದಲ್ಲಿ ಕಾಣಬಹುದು.

ಈ ಸಂಕಲನದ ಎರಡನೆಯ ಭಾಗದಲ್ಲಿ ಈ ಜಗತ್ತಿನಲ್ಲಿ ತುಂಬಿರುವ ಧರ್ಮ ಸಂಘರ್ಷ ಮತೀಯ ದ್ವೇಷ-ಕ್ರೌರ್ಯಗಳನ್ನು ಗೆಲ್ಲಲು-ಕವಿ ಅನನ್ಯವಾದ ಪ್ರೀತಿ ಪ್ರೇಮಗಳ ಹಲವು ಮುಖಗಳನ್ನು ಪರಿಚಯಿಸಿದ್ದಾರೆ, ಅದು ಪ್ರೀತಿ, ಕವಿತೆ, ಅಮ್ಮ - ಇತ್ಯಾದಿಯಾಗಿ ವ್ಯಕ್ತವಾಗುತ್ತದೆ.

ಈ ಕವಿಯ ಪಾಲಿಗೆ ಪ್ರೀತಿ ಹಂಚಿದಷ್ಟೂ ಹೆಚ್ಚುವ ಜೀವ ಚೈತನ್ಯವುಳ್ಳದ್ದು.
ಕಾಲ ಅವನಿಗೆ
ದ್ವೇಷದ ಜೇಬು ಕೊಟ್ಟಿದ್ದಾನೆ
ಅವನ ಖರ್ಚಿಗಿಷ್ಟು ಪ್ರೀತಿಯನ್ನು
ಅದರಲ್ಲಿಟ್ಟು ಬರುವೆ,

ಎಂದು ಪ್ರೀತಿಯ ಮೂಲಕ ದ್ವೇಷವನ್ನು ಗೆಲ್ಲುವ ಗಾಂಧೀವಾದಿಯಾದ ಈ ಕವಿ ತನ್ನ ಬೊಗಸೆಯ ತುಂಬಾ ಪ್ರೀತಿಯ ಫಲಗಳನ್ನೇ ತುಂಬಿಕೊಂಡು —

ಮರದಿಂದ ಮರಕ್ಕೆ ಅಲೆವ
ಪೀರನ ಕರುಳಿನ ತುಂಬ ಅಮೃತ ಬಿಂದುಗಳು
ಪೀರನ ಬೊಗಸೆಯ ತುಂಬ ಪ್ರೀತಿಯ ಫಲಗಳು

ಎಂದು ಅವನ ಜೋಳಿಗೆಯ ತುಂಬ ಇರುವ ನೊಂದ ಹೃದಯಗಳಿಗೆ- ಪ್ರೀತಿಯನ್ನು ಹೊತ್ತು ಸಾಗುತ್ತಾನೆ. ಪ್ರೀತಿಯ ಲೋಕದಲ್ಲಿ ಬಂದೂಕುಗಳಿಗೆ ಎಡೆಯಿರಬಾರದು. ಎಲ್ಲ ಬಂದೂಕುಗಳೂ ಸುಟ್ಟು ಹೋಗಲೆಂದು ಶಪಿಸುವ ಕವಿ, ಎದೆಯಲ್ಲಿ ಅಗ್ನಿ ಪರ್ವತಗಳನ್ನಿಟ್ಟುಕೊಂಡು ತುಟಿಯ ಮೇಲೆ ಪ್ರೀತಿಯ ಬೆಳದಿಂಗಳಾಗಿ ಬೆಳಗಬೇಕೆಂದು ಆಶಿಸುತ್ತಾನೆ.

ಸಾರಿಕಾ

ಕಡಲು ಹಾಗೂ ಕಣ್ಣೀರು ಎರಡೂ ಉಪ್ಪಾಗಿರುವುದೇಕೆಂದು ಮಗು ಕೇಳಿದ ಪ್ರಶ್ನೆಗೆ ಪ್ರೀತಿಯ ಹಲವು ನದಿಗಳು ಅಲ್ಲಿ ಸಂಧಿಸಿರುತ್ತವೆ ಎಂಬ ಉತ್ತರ ಈ ಕವಿಯ ತಾಯಿ ಕೊಡುವಂಥದ್ದಾಗಿದೆ.

ನಾನು
ನನಗೊಲಿಯದ ದೇವರ ಭಕ್ತ
ನನ್ನ ದೇವತೆ
ನನ್ನ ಹೃದಯವನ್ನು ಕದ್ದಿದ್ದಾಳೆ
ನಾನಾವ ದೊರೆಯಲ್ಲಿ ದೂರಲಿ
ಈ ಪೀರನ ಪ್ರೀತಿಯ/ಅಸೀಮ ಸ್ತ್ರಾಮ್ರಾಜ್ಯದಲ್ಲಿ
ಆ ಕಳ್ಳರು ತಾವೇ ಕಳೆದು ಹೋಗಿದ್ದಾರೆ.

ಎನ್ನುವ ಅಪರೂಪದ ಭಕ್ತಿಯ ಪ್ರೀತಿಯ ಅನನ್ಯತೆಯನ್ನು ಬಾಷಾ ಚಿತ್ರಿಸಬಲ್ಲರು, ಪ್ರೀತಿ ನನ್ನ ಹೆಸರು, 'ನನ್ನ ಸಾವು ಕೊಂದವರ ಒಡಲಲ್ಲಿ ಜೀವವಾಗಲಿ' ಎನ್ನುವ ಪ್ರೀತಿಯ ಮೂಲಕ ಸಾವನ್ನೂ-ದ್ವೇಷವನ್ನೂ ಗೆಲ್ಲುವ ಆತ್ಮವಿಶ್ವಾಸದ ಬುಗ್ಗೆಯಾಗಿದೆ ಬಾಷಾ ಅವರ ಕವಿತೆ.

'ಕವಿತೆ ನನ್ನ ಪಂಚಪ್ರಾಣ' ರೊಟ್ಟಿ ಅದರ ತಾಣ ಎನ್ನುವ ಈ ಕವಿ, ಕವಿ ಸಮಯದಲ್ಲಿ ನನಗೇನೂ ಬೇಡ/ಸುರ ಸುಂದರಿಯೊಂದಿಗೆ ಸುರತ ಕೂಡ ಎನ್ನುತ್ತಾರೆ. ಪ್ರೇಮದ ಪಿಸುಮಾತು ಬಂದೂಕಿನಲ್ಲಿ ಬೆಳದಿಂಗಳ ತುಂಬ ಬಲ್ಲದೆಂದು ನಂಬಿರುವ ಬಾಷಾ ಅಮ್ಮನ ಪ್ರೀತಿಯಿಂದ ಮಾತ್ರ ಜಗತ್ತಿನ ಕ್ರೌರ್ಯವನ್ನು ಜಯಿಸಬಲ್ಲದೆಂದು ನಂಬಿರುವ ಬಾಷಾ, ಅಮ್ಮ ಎಂದರೇನೆಂದು ಯಾರನ್ನೂ ಕೇಳಬೇಡ 'ತಾಯಿಯೆಂದರೆ ನನಗೆ ಓದಲಾಗದ ಮಹಾ ಕಾವ್ಯ' ಎನ್ನುತ್ತಾರೆ.


ಈ ಸಂಕಲನದ ಮೂರನೆಯ ಭಾಗದಲ್ಲಿ -ಆಧ್ಯಾತ್ಮಿಕವಾದ ವಸ್ತು ಪರಿವೇಷವನ್ನು ಒಳಗೊಂಡ ಕವಿತೆಗಳಿವೆ ಆದಿ ಆನಾದಿಗಳ ಆಯಿಯಾದ ತಾಯಿ ಭೈರವಿಯ ಸ್ತುತಿಯನ್ನು-ಉಸಿರು ಬಿಗಿಹಿಡಿದರೂ ನಿಲ್ಲದೆ ಮುಗಿಲಿಗೂ ಪಾತಾಳಕ್ಕೂ ಒಂದೇ ಆಗಿ ಧುಮ್ಮಿಕ್ಕುವ ಕಾವ್ಯಲಯದೊಂದಿಗೆ ಕಟ್ಟಿಕೊಡುವ ಬಾಷಾ-ತನ್ನ ಕವಿತೆಗಿರುವ- ಶಕ್ತಿಯ ಇನ್ನೊಂದು ಮುಖವನ್ನು ತೋರಿಸಿದ್ದಾರೆ.

ಹೊತ್ತೆಂಬ ಕಾಲನನ್ನೇ ತನ್ನ ತಂದೆಯೆಂಬ, ನಶ್ವರನೇ ಶಾಶ್ವತಕ್ಕೆ ಗುರುತಾಯಿತೆಂಬ ಕೊಂಚ ವಿಚಿತ್ರವಾದರೂ, ಅರಗಿಸಿಕೊಳ್ಳಲು ಹೆಣಗಾಡುವ ತತ್ವವನ್ನೂ, 'ಒಂದು ಬಿಂದು ಇದ್ದಂತೆಯೇ ಅನಂತವ ಹೊಂದಿತೆಂಬ- ಅಣು-ಪರಮಾಣು ತತ್ವವನ್ನು ಅಥವಾ ಆತ್ಮ ಪರಮಾತ್ಮ ಸಂಯೋಜನೆಯನ್ನು ಕೋಟಿ ಕಡಲು ಒಡಲುಗಳೆಲ್ಲ ಹೊರಗಣದಿ ಬಯಲು' ಎಂಬ ದ್ವೈತಾದ್ವೈತದ ಸಿಕ್ಕುಗಳನ್ನು ಇಬ್ಬರು ನಿಜ ಮನುಷ್ಯರ ಸಂಗದಲ್ಲಿ ಮೂರನೆಯ ಜಗವೊಂದು ಜೀವ ತಾಳುವ-ಸೃಷ್ಟಿಯ ವಿಸ್ಮಯದ ಹಲವು ಸಂಗತಿಗಳನ್ನು-ಪೀರ್‌ಬಾಷಾ- ಸಂತ ಕವಿಯೊಬ್ಬನ ಅನುಭಾವದ ಪರಿಭಾಷೆ ಹಾಗೂ ಪರಿವೇಷದ ಮೂಲಕ ಅನುಭಾವಿಕ ಕಾವ್ಯದ ಮಾಂತ್ರಿಕತೆಯನ್ನು ಈ ಭಾಗದ ಕಾವ್ಯ ಭಾಷೆಯಲ್ಲಿ ಸಾಧಿಸಿಕೊಂಡಿರುವುದು ಗಮನೀಯ ಅಂಶ. ಹಾಗೆಯೇ ಲೋಹಾಸುರ ವಿಜಯಕಥಾ ಮತ್ತು ಮೈಲಾರಿಯರ ಕತೀ'' ಅಂತರ ಕವಿತೆಗಳು-ಜಾನಪದ ಕಥನ ಕಾವ್ಯಗಳ, ಅಥವಾ ಮೌಖಿಕ ಮಹಾಕಾವ್ಯಗಳಲ್ಲಿ- ಮಡುಗಟ್ಟಿದ ಮೂಲ ಜಾನಪದ ಭಾಷಾ ಸೌಂದರ್ಯ, ಅನುಭವ ಹಾಗೂ ಅನುಭಾವದ ಸಾಚಾತನದ ಮೇಳೈಸುವಿಕೆಯಿಂದಾಗಿ ಮಹಾಕಾವ್ಯದ ನಡೆಗೆ ಬೇಕಾದ ಮೂಲ ಬೀಜಗಳು ಮೊಳಕೆಯೊಡೆದು- ಬಹು ಮಹತ್ವಾಕಾಂಕ್ಷೆಯ ಕವಿತಾ ವಿಲಾಸಗಳನ್ನು ಈ ಕವಿ ಈ ಕೃತಿಯ ಮೂಲಕ ತೋರಿದ್ದಾರೆ.

ಸಂಧ್ಯಾ

‘ಯಾರೂ ನೆಡದ ಮರ’

ಶಬ್ದಗಳ ಸ್ತಬ್ಧಚಿತ್ರಗಳ ಅರ್ಥವತ್ತಾದ ಮೆರವಣಿಗೆ



ಯಾರೂ ನೆಡದ ಮರ, ಕವನಸಂಕಲನ
ಲೇಖಕರು : **ಗಣೇಶ ಹೊಸ್ಮನೆ** । ಪ್ರಕಾಶಕರು : ಲಡಾಯಿ ಪ್ರಕಾಶನ, ಗದಗ
ಬೆಲೆ : **ರೂ. ೪೦.೦೦** । ಪ್ರಕಟಣಾ ವರ್ಷ: ೨೦೧೦

ಯಾರೂ ನೆಡದ ಮರ – ಗಣೇಶ ಹೊಸ್ಮನೆ ಅವರ ಕವಿತಾ ಸಂಕಲನದಲ್ಲಿ ಕೆಲವು ಮುಕ್ತಕಗಳೂ ಸೇರಿದಂತೆ ಐವತ್ತಕ್ಕೂ ಮಿಕ್ಕ ಸಂಖ್ಯೆಯಲ್ಲಿ ಸಣ್ಣ-ಪುಟ್ಟ ಹಾಗೂ ನೀಳ್ಗವಿತೆಗಳೂ ಸಂಕಲನಗೊಂಡಿವೆ.

ಗಜಲ್‌ನ ಪ್ರಯೋಗಗಳನ್ನೂ ಈ ಕವಿಯಲ್ಲಿ ಕಾಣಬಹುದಾಗಿ. ಪುಟ್ಟ ಪುಟ್ಟ ಪದಗುಚ್ಛಗಳು ಹಾಗೂ ಕಿರಿದಾದ ಸಾಲುಗಳ ಮೂಲಕ, ಗಣೇಶ ಹೊಸ್ಮನೆ ಅವರು ಮಹತ್ತರವಾದ ಅರ್ಥವನ್ನು ಸ್ಫೋಟಿಸುವ ಸಿದ್ಧಿಯನ್ನು ಸಾಧಿಸಬಲ್ಲರೆಂಬುದಕ್ಕೆ ಈ ಸಂಕಲನದಲ್ಲಿ ನಿದರ್ಶನಗಳನ್ನು ಕಾಣಬಹುದಾಗಿದೆ,

ರಣರಂಗದಲ್ಲಿ ಗುಡುಗಿ
ಅವರು ಯುದ್ಧವಾಗುತ್ತಾರೆ
ಮರುಗಿ ನಾನು ಬುದ್ಧನಾಗುತ್ತೇನೆ
(ಅವರ ಅಸ್ತ್ರಗಳ)
ಸತ್ತ ರೈತರ ಹೆಣಗಳ ಸುತ್ತ
ರೋಧಿಸುವ ಜೀವಗಳ ಚಿತ್ರ
ನನ್ನ ಕನಸಿನಲ್ಲೂ ಕಾಣುತ್ತಿದೆ
ನೋಟುಗಳ ಕಂಡಾಗಲೆಲ್ಲಾ
ಒಡಲಲ್ಲಿ ಭೀತಿ ಹುಟ್ಟುತಿದೆ

ನೋಟಿನಲಿ ನಗುವ ಗಾಂಧೀಜಿಯ
ಮುದ್ರೆ ಕಾಣಿಸುತ್ತಿದೆ ಭಯೋತ್ಪಾದಕನಂತೆ,
ನನಗೀಗ ಗಾಂಧಿಯಷ್ಟೇ ಬೇಕು
ನೋಟಿನಿಂದ ನಾನು ಅವನನ್ನು
ಬೇರ್ಪಡಿಸಿಕೊಳ್ಳಬೇಕು!

ಭ್ರಷ್ಟಗೊಂಡಿರುವ ನೋಟು ಮತ್ತು ನೋಟಿನ ಮೇಲಿರುವ ಗಾಂಧೀಜಿಯ ಚಿತ್ರ ಭಯೋತ್ಪಾದಕನಂತೆ ಕಂಡರೂ, ನಮ್ಮ ಆದರ್ಶಗಳು ಭ್ರಷ್ಟಗೊಳ್ಳದಂತೆ ಕಾಪಾಡಿಕೊಳ್ಳಬೇಕಾದ ಆತ್ಮವಿಮರ್ಶೆ ಮತ್ತು ಕಾಳಜಿಗಳು-ನಮ್ಮೊಳಗೇ ಇರಬೇಕಾದ ಎಚ್ಚರವನ್ನು- ಈ ಮುಕ್ತಕ ಬಹಳ ಅರ್ಥಪೂರ್ಣವಾಗಿ ಸಾಧಿಸಿರುವುದನ್ನು ಕಾಣಬಹುದು.

ಸಂಕೇಯ

ತನ್ನ ಸುತ್ತಣ ಸಮಾಜದ ಅಮಾನವೀಯ ಕ್ರೌರ್ಯವನ್ನು ರಕ್ಷಣೆಯ ದೇವರು ಧರ್ಮಗಳ ರಕ್ಷಣೆಯ ಹೆಸರಲ್ಲಿ ಮಾನವ ಜೀವಗಳೊಡನೆ ಚೆಲ್ಲಾಟವಾಡುವ ಕ್ರೂರಿಗಳನ್ನು-ಈ ಕವಿ ತನ್ನ ಸರಳ ಸ್ವಭಾವೋಕ್ತಿಯ ಚಾಟಿಯಿಂದ ಜಾಡಿಸುತ್ತಾರೆ. ವಿಡಂಬನೆ ವ್ಯಂಗ್ಯಗಳ ಮೊನಚಾದ ಉಕ್ತಿಯಿಂದ ತಿವಿಯುತ್ತಾರೆ!

ನೆತ್ತರಲ್ಲಿ ಬೆರಳನದ್ದಿರುವಿರಿ/ ತೆಗೆದು ಬಾಯಿಗಿಟ್ಟುಕೊಳ್ಳಿ
ಸಾವಿನ ಬಳಿ ಅಳುತ್ತಿದ್ದಾರೆ ಜನ/ ಕಣ್ಣೀರಲಿ ಕೈ ತೊಳೆದುಕೊಳ್ಳಿ
ಕತ್ತಲಿಗೆಂದು
ನೀವೇ ಹಚ್ಚಿಕೊಂಡಿರುವ ಬೆಂಕಿಯಲಿ
ಬನ್ನಿ ಚಳಿ ಕಾಯಿಸಿಕೊಳ್ಳಿ
ಒಳಗೆ ಅಮಾಯಕರ ತಲೆ ಸುಡುತ
ಟಪಟನೆ ಸಿಡಿದು
ಸಂಗೀತವಾಗುತಿದೆ ಕುಣಿಯಿರಿ

ಬದುಕುಳಿದವರಿಗೆಲ್ಲ ತಪ್ಪದೇ/ ಬಂದೂಕು ತಂದುಕೊಡಿ
ಎದೆಯನ್ನು ಬಾಂಬಾಗಿಸಿ/ ನಿಜ, ನೀವಿಲ್ಲದಿದ್ದರೆ
ಸತ್ತೇ ಹೋಗುತ್ತಾನೆ ದೇವರನ್ನು ರಕ್ಷಿಸಿ *(ದೈವ ರಕ್ಷಕರಿಗೆ)*

ಮತೀಯವಾದ ಕೋಮುವಾದ ಭುಗಿಲೆದ್ದು- ಅಲ್ಪಸಂಖ್ಯಾತರನ್ನೂ ಅಮಾಯಕರನ್ನು ಅನ್ಯಾಯದ ವಿರುದ್ಧ ತಿರುಗಿ ಬಿದ್ದವರನ್ನು- ನಕ್ಸಲ್‌ವಾದಿಗಳೆಂಬ ಪಟ್ಟಕಟ್ಟಿ, ಮುಗಿಸಿ ಬಿಡುವ ಹುನ್ನಾರಗಳೇ ತುಂಬಿರುವ ಇಂದಿನ ದಿನಗಳಲ್ಲಿ ಈ ಕವಿ- ಬರೆಯುವ —

ನಿಮ್ಮನ್ನೊಪ್ಪದ ಮನುಷ್ಯರನೆಲ್ಲ
ಹುಡು ಹುಡುಕಿ ಕೊಲ್ಲಿ
ಯಾವ ಗರ್ಭದಲ್ಲೂ
ಉಳಿಯದಿರಲಿ ನಿಮ್ಮ ವೈರಿ!

ಇಂಥ ಸಾಲುಗಳ ಮೂಲಕ ಸಮಕಾಲೀನ ವಾಸ್ತವಕ್ಕೆ ಇವರ ಕವಿತೆ ಅತ್ಯಂತ ಸ್ಪಷ್ಟವಾದ ಕನ್ನಡಿ ಹಿಡಿಯುತ್ತದೆ. ಗಣೇಶ ಹೊಸ್ಮನೆಯವರು ಮಾತನ್ನು ಮೌನವಾಗಿಸುತ್ತಾರೆ. ಮೌನ ಮಾತಿಗಿಂತ ಶಕ್ತಿಯುತವಾಗಿ ಮಾತುಡುವಂತೆ ಮಾಡುತ್ತಾರೆ. ಶಬ್ದಗಳನ್ನು ಸ್ತಬ್ಧ ಚಿತ್ರಗಳನ್ನಾಗಿಸಿ- ಅರ್ಥದ ಮೆರವಣಿಗೆ ಹೊರಡಿಸುತ್ತಾರೆ. ಎಳೆದು ಬೀಡಿ ರಸ್ತೆ ನೋಡಿ/ಮುದುಕನ ನಿಟ್ಟುಸಿರು ಸುಟ್ಟು ಬೂದಿಯಾಗಿದೆ. ನಗರದ ಕಡೆ/ ಧಾವಂತ ಹೊರಟ ವಾಹನಗಳ ಕೆಳಗೆ ಅವನ ದೃಷ್ಟಿ ಅಪ್ಪಚ್ಚಿಯಾಗಿದೆ.

ಗುಡಿಸಿಲಿನ ಮೂತಿಯೊಳಗೆಲ್ಲೋ
ಅವನು ಬೇಯಿಸಿಟ್ಟ ಗಂಜಿ/ಅವನನ್ನು ಕಾಯುತ್ತಿದೆ/
ಅವನ ಅನ್ನದಲಿ ಪಾಲು ಪಡೆದ ನಾಯಿ
ರಸ್ತೆಯನು ಬೈಯ್ಯುತ್ತಿದೆ
ನಗರ ಸೇರಿದ ಮಗನ/ಬಾಲ್ಯದ ಹೊಸ ಅಂಗಿಯನು ಗೆದ್ದಲು ತಿನ್ನುತ್ತಿದೆ *(ವಿದಾಯ)*

ಉಳಿದಂತೆ ಕುದುರೆ ಮತ್ತು ಗಡಿಯಾರ ಕನ್ನಡಿಯೊಳಗಿನ ಬೆಕ್ಕು, ರೆಕ್ಕೆ ಮತ್ತು ಹಕ್ಕಿಗಳು, ಗಜಲ್‌ಗಳ ಮೂಲಕ ವ್ಯಕ್ತಪಡಿಸಿರುವ ನವಿರಾದ ಪ್ರಮೋಸ್ಮತತ್ತ್ವ ನಾನೊಬ್ಬ ವ್ಯಾಸನಾಗಲಾರೆ ಇಂತಹ ಕವಿತೆಗಳು ಯಶಸ್ವಿ ಕಾವ್ಯ ಪ್ರಯೋಗಗಳಾಗಿ ತಮ್ಮ ಆಶಯ ಹಾಗೂ ಅಭಿವ್ಯಕ್ತಿಯ ಸಫಲತೆಯನ್ನು ಸಾಧಿಸಿವೆ.

ಸಂಚಿಕ

ಭೂಮಿ ಹೊತ್ತಿ ಉರಿದರೂ, ಕರುಣೆಯ ಒಂದು ಕಣ್ಣ ಹನಿ ಉಳಿದಿರಲಿ ಸಾಕು ಜಗತ್ತು ಉಳಿಯುವುದೆಂಬ ವಿಶ್ವ ಪ್ರೇಮವನ್ನು ವ್ಯಕ್ತಪಡಿಸುವ ಈ ಕವಿ, ಬಹಳ ಆಶಾವಾದಿಯೂ ಹೌದು. ನೆರಳುಗಳ ಭಯದಲ್ಲಿ/ ದೀಪವಾರಿಸಬೇಡ ಹಚ್ಚೊಂದು ಹಣತೆಯನು/ಮಿನುಗಲಿ ಕಣ್ಣಲ್ಲಿ ಬೆಳಗುತ ದೀಪಗಳು/ ಬೀಸುವ ಬಯಲಿನ ಗಾಳಿ ಎನ್ನುತ್ತಾರೆ.(ಹಣತೆಯ ಜೀವ)

ಪ್ರೀತಿಗೆ, ಭಾವುಕತೆಗೆ, ಯಾವ ಗೋಡೆಗಳೂ ಇರಬಾರದೆಂಬ ಈ ಕವಿ
ನಾನು ಪ್ರೀತಿಯನ್ನು/ ಪ್ರೀತಿಯಿಂದ ಚುಂಬಿಸುತ್ತೇನೆ.
ತುಟಿಗೆ ತಗುಲಿದ ಪ್ರೀತಿಯ ಪರಾಗ/ನನ್ನ ಹೃದಯದಲ್ಲಿ ತೊಟ್ಟಿಕುತ್ತದೆ, ಎಂದು ಭಾವುಕರಾಗಬಲ್ಲರು
(ಚಿಟ್ಟೆಗಳು)

ಮೊಳಕೆಯೊಡೆಯುವುದಕ್ಕೆ ಬೇರು ಚಾಚುವುದಕ್ಕೆ/ ಮಣ್ಣು ಮಳೆ ಹನಿ ಸಾಕು, ಸಾವುಗಳ ಮುಖ ನೋಡಿ ಬದುಕನ್ನು ಪ್ರೀತಿಸಬೇಕೆಂಬ ಜೀವನ ಪ್ರೇಮವನ್ನು ತಮ್ಮ ಕವಿತೆಯ ಮೂಲಕ ತುಂಬುವ ಹಂಬಲ ಅವರ ಕವಿತೆಯ ಮೂಲಕ ತುಂಬುವ ಹಂಬಲ ಅವರ ಕವಿತೆಯಲ್ಲಿದೆ. *(ಇರುಳಿನ ಸ್ವಗತ)*


ದೃಷ್ಟಿಯಂತೆ -ಸೃಷ್ಟಿ ಎಂಬ ಮಾತಿಗೆ ಅನುಗುಣವಾಗಿ, ಕವಿಯಾದವನು ಸೃಷ್ಟಿಯನ್ನು ತನ್ನ ಕೃತಿಯಲ್ಲಿ ಅನುಕರಿಸಲಾರ ಅದು, ತನ್ನ ಅನುಭವದ ಮರುಸೃಷ್ಟಿಯೂ ಆಗಬೇಕು ಆಗ ಮಾತ್ರ ಅವನ ಕಾಣ್ಕೆ ಮತ್ತು ದಾರ್ಶನಿಕತೆಗಳು ಆ ನೋಟಕ್ಕೆ ಪ್ರಾಪ್ತವಾದೀತು, ಅಂತಹ ಕೆಲವು ಸಾಲುಗಳು ಗಣೇಶ್ ಹೊಸ್ಮನೆ ಯವರ 'ಸೃಷ್ಟಿ' ಎಂಬ ಕವಿತೆಯಲ್ಲಿ ಕಂಡು ಬರುತ್ತವೆ.

ನೆಲದ ಉದ್ದಗಲ ಚಾಚಿದ ನೆರಳು
ಪುಣ್ಯಗಳ ಉರು ಹೊಡೆದು
ಪಾಪಗಳ ಲೆಕ್ಕ ಹಾಕುತ್ತ ನಿಂತಿದೆ
ನಿಜದ ಗಾಳಿಗೆ ತೊನೆದಾಡುತ್ತಿದೆ.
ತಾನು ಏನೆಂಬುದು
ಗೊತ್ತಿಲ್ಲದ ಚಿಟ್ಟೆಯೊಂದು
ಆ ನೆರಳೊಳಗೆ ರೆಕ್ಕೆ ಬಡಿಯುತ್ತ
ಹೂವುಗಳ ಬೀಜವಾಗಿಸುತ್ತಿದೆ!

ಈ ಸಂಕಲನದ ಎಲ್ಲಾ ಕವಿತೆಗಳಿಗೂ ಈ ರೀತಿಯ ಪರಿಪಕ್ವತೆಯ ಸಫಲತೆ ಸಿದ್ಧಿಸಿದೆ ಎಂದೇನೂ ನಾನು ಹೇಳಲಾರೆ! ಇಲ್ಲಿನ ಇನ್ನುಳಿದ ಬಹುಪಾಲು ಕವಿತೆಗಳು ಇನ್ನೂ ಕಾವ್ಯ ಕರ್ಮದ ಪ್ರಾಯೋಗಿಕ ಹಂತದಲ್ಲೇ ಇದ್ದು ಚಕಮಕಿ ಕಲ್ಲನ್ನು ಮಸೆದು, ಪದಕ್ಕೆ ಪದಾರ್ಥಕ್ಕೆ ಅಂಟಿದ-ಮಸ್ಟನ್ನು ತೆಗೆದು ಮುಖವ ಹೊಳಪಾಗಿ ತೀಡಿಕೊಳ್ಳುವ ಅಥವಾ ಪುಟಕ್ಕಿಟ್ಟುಕೊಂಡು ಪುಟಗೊಳ್ಳುವ, ಹಲವು ಹಂತದ ಕಾವ್ಯ ಕಸುಬಿನ ಕುಸುರಿಯಲ್ಲಿ ಇದ್ದು ಅವೂ ಇಲ್ಲಿ ಆತ್ಮವಿಶ್ವಾಸದಿಂದಲೇ ಸಹೃದಯನ ಮುಂದಕ್ಕೆ ಬಂದು ನಿಂತಿವೆ. ಗಣೇಶ್ ಹೊಸ್ಮನೆಯದೇ ಆದ ವ್ಯಕ್ತಿ ವಿಶಿಷ್ಟ ಭಾಷಾ ನಾಣ್ಯವಾಗಲಿ, ನುಡಿಗಟ್ಟಾಗಲಿ ತನ್ನ ಛಾಪು ಬೀರುವ ತನ್ನತನದ ಪನ್ನತಿಕೆಗೆಂದೇ ತುಡಿಯುವ ಹಂಬಲಗಳಿಲ್ಲದೆ ಸೊರಗುವ ಕೊರತೆಯನ್ನು ಅವರು ಮುಂದಿನ ಬರಹದಲ್ಲಿ ತುಂಬಿಕೊಳ್ಳಬೇಕಾದ ಅಗ್ನಿ ದಿವ್ಯದ ಮುಂದೆ ಅವರ ಈ ಕೃತಿ ನಿಂತಿದೆ ಎನ್ನಲು ಅಡ್ಡಿ ಇಲ್ಲ.

'ಉರಿಗದ್ದಿಗೆ ಮೇಲೆ...'

ವಿಶಿಷ್ಟ ಕಾವ್ಯದ ನಡೆ...



ಉರಿಗದ್ದಿಗೆ ಮೇಲೆ ಬೋಳು ಜಂಗಮನ ತಂಬೂರಿಪದ, ಕವನಸಂಕಲನ
ಲೇಖಕರು : **ಮಹಾದೇವ ಶಂಕನಪುರ** । ಪ್ರಕಾಶಕರು : ಕಿಟಕಿ ಪ್ರಕಾಶನ, ಮೈಸೂರು
ಬೆಲೆ : **ರೂ. ೭೦.೦೦** । ಪ್ರಕಟಣಾ ವರ್ಷ: ೨೦೦೯

'ಉರಿಗದ್ದಗೆ ಮೇಲೆ ಬೋಳು ಜಂಗಮನ ತಂಬೂರಿ ಪದ ಎಂಬ' ಇಷ್ಟುದ್ದವೆ ನಿಮ್ಮ ಸಂಕಲನದ ಹೆಸರು ಎಂದು ಹುಬ್ಬೇರಿಸುವಂತಹ ಶೀರ್ಷಿಕೆ ಇಟ್ಟ ಕೃತಿಯ ಕವಿ ಮಹದೇಹ ಶಂಕನಪುರ ಈ ಹೊತ್ತಿಗೆ ಕನ್ನಡದಲ್ಲಿ ತುಸು ಗಂಭೀರವಾಗಿ ಕವಿತೆಯ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಕವಿಗಳಲ್ಲಿ ಅದರಲ್ಲೂ ಮುಖ್ಯವಾಗಿ 'ದಲಿತ' ಎನ್ನುವ ಹಣೆಪಟ್ಟಿಯನ್ನು 'ಅಂಟಿಸಲ್ಪಟ್ಟು' ಕವಿಗಳಲ್ಲಿ ಬಹಳ ಕುತೂಹಲವನ್ನುಂಟುಮಾಡುವ ಹಾಗೆ ತಮ್ಮ ವಿಭಿನ್ನ ಕಾವ್ಯಾಭಿವ್ಯಕ್ತಿ ಹಾಗೂ ಕಾವ್ಯ ಸಾಮಗ್ರಿಗಳಿಂದಲೂ ವಿಶಿಷ್ಟವಾದ ಕವಿ ಎಂದರೆ ಅದು ಖಂಡಿತಾ ಉತ್ಪ್ರೇಕ್ಷೆಯ ಅಥವಾ ಅತಿರೇಕದ ಮಾತಾಗಲಾರದು.

೨೦೦೮ರಲ್ಲಿ ಮೈಸೂರಿನ ಕಿಟಕಿ ಪ್ರಕಾಶನದ ಮೂಲಕ ಪ್ರಕಟಗೊಂಡಿರುವ ಈ ಕವನ ಸಂಕಲನದಲ್ಲಿ ಈ ಶೀರ್ಷಿಕೆಯ ಕವಿತೆಯೂ ಸೇರಿದಂತೆ ನಲವತ್ತು ಕವಿತೆಗಳು ಇವೆ. ಪ್ರಜಾವಾಣಿ ಪ್ರತಿಷ್ಠಿತ ದೀಪಾವಳಿ ಕವಿತಾ ಸ್ಪರ್ಧೆಯಲ್ಲಿ ಸತತ ಮೂರು ಬಾರಿ ಬಹುಮಾನವನ್ನು ತಮ್ಮದಾಗಿಸಿಕೊಂಡಿರುವ ಶಂಕನಪುರರ ಬಹುಮಾನಿತ ಕವಿತೆಗಳನ್ನು ಹೊರತುಪಡಿಸಿ ಅವರ ಉಳಿದ ಕವಿತೆಗಳನ್ನು ಪರಿಶೀಲಿಸಿದಾಗಲೂ ಕವಿತೆಯ ಅಸಲು ಕಸುಬುಗಾರಿಕೆಯಲ್ಲಿ ಪಳಗಿದ ಅವರ ಕಾವ್ಯ ಕುಸುರಿಯ ಕೌಶಲ ಸಾಬೀತಾಗುತ್ತದೆ.

ಡಾ॥ಚಂದ್ರಶೇಖರ ಕಂಬಾರರ ಹಾಗೂ ಡಾ॥ ಎಚ್.ಎಸ್. ಶಿವಪ್ರಕಾಶ್‌ರ ಅವರುಗಳ ಮೂಲಕ ಮುನ್ನುಡಿ ಮತ್ತು ಬೆನ್ನುಡಿಗಳನ್ನು ತಮ್ಮ ಪಾಲಿನ ಮಹತ್ವಾಕಾಂಕ್ಷೆಯೆಂಬಂತೆ ಕೇಳಿ ಪಡೆದಿರುವ ಈ ಕವಿಯ ಕವಿತೆಯ ಮೌಲ್ಯವನ್ನು-ಅದರ ಸಾರ್ಥಕತೆಗಳನ್ನೂ ಈ ಇಬ್ಬರೂ ಕವಿಗಳೂ ಸರಿಯಾಗಿಯೇ ಗುರುತಿಸಿದ್ದಾರೆ.

ಮಹದೇವ ಶಂಕನಪುರ ಅವರ ಕವಿತೆಗಳನ್ನು ಸಮಗ್ರವಾಗಿ ಈವೊತ್ತಿನ ಕವಿತೆಯ ಹಿನ್ನಲೆಯಲ್ಲಿ ಪರಿಭಾವಿಸಿದಾಗ ಅವರು ಬಹಳ ವಿಶಿಷ್ಟವಾದ ಕಾವ್ಯದ ನಡೆಯೊಂದನ್ನು ಹಿಡಿದಿರುವುದು ಸ್ಪಷ್ಟವಾಗುತ್ತದೆ. ಅದು ವಸ್ತು ಹಾಗೂ ಅಭವ್ಯಕ್ತಿಗಳ ದೃಷ್ಟಿಯಿಂದ ಮಾತ್ರವಲ್ಲದೆ ಆಶಯದ ದೃಷ್ಟಿಯಿಂದಲೂ ವಿಶಿಷ್ಟವಾದುದೇ ಆಗಿದೆ.

ದಲಿತ ಮತ್ತು ಬಂಡಾಯದ ಆವೇಶವನ್ನು ಮೈಮೇಲೆ ಹೇರಿಕೊಂಡು; ಕೆಲವೊಮ್ಮೆ

ಮೈತುಂಬಿಕೊಂಡಂತೆ ಬರೆಯುತ್ತಾ, ಹೋರಾಟದ ಹಸಿ ಬಿಸಿ ಭಾವಾವೇಶಗಳನ್ನು ಕವಿತೆಯ ಒಳಗೂ ಎಳೆದುಕೊಂಡು ಬಂದು ಕ್ರಾಂತಿಪದದ ತಮಟೆ, ಬಾರಿಸುವ ಹಾಗೂ ಇದಾವುದರ ಅರಿವೇ ಇಲ್ಲದಂತೆ ಕಂಡರೂ ಈ ಎಲ್ಲಾ ಆಂತರ್ಯವನ್ನು ಬಹಳ ಅರ್ಥಪೂರ್ಣವಾಗಿ ತಮ್ಮ ಕಾವ್ಯದ ಆವರಣದಲ್ಲಿ ಹೂರಣವಾಗಿಟ್ಟುಕೊಂಡು ಬಹಳ ಪ್ರಜ್ಞಾಪೂರ್ವಕವಾಗಿ ತನ್ನ ಸಮುದಾಯದ ನೋವು-ನಲಿವು-ಆತ್ಮಗೌರವ-ಸಿಟ್ಟು-ಸೆಡುವುಗಳನ್ನೂ- ಚಳವಳಿಕಾರರ ಸ್ಲೋಗನ್ನುಗಳಾಗದಂತೆ, ಬಹಳ ಕಲಾತ್ಮಕವಾಗಿ-ಸಂಯಮದಿಂದ ಬರೆಯಬಲ್ಲ, ಬರೆಯುತ್ತಿರುವ ಕೆಲವೇ ಮಂದಿ ಕವಿಗಳ ಸಾಲಿನಲ್ಲಿ-ಶಂಕನಪುರ ಅವರ ಈ ಕವಿತೆಯೂ ಸೇರಿಕೊಂಡಿದೆ.

ಅವರಿಗಾಗಿ
ಅವರ ನೋವಿಗೆ ನಾಲಿಗೆಯಾಗಿ
ಅವರ ಕೊರಳ ದನಿಯಾಗಿ ಸಿಡಿಯಲು
ನಾನು ಬರೆಯುತ್ತೇನೆ ಎದ್ದು
ಇಡೀ ಜಗತ್ತು ಮಲಗಿರುವಾಗ *(ಬೆಳಕು ಹರಿಯುವವರೆಗೂ)*

ಎಂಬ ಅವರ ಕವಿತೆಯ ಆಶಯವನ್ನು ಗಮನಿಸಿದಾಗ ಅವರ ಕವಿತೆಯ ಗುರಿ ಏನೆಂದು ಸೂಚಿತವಾಗುವಂತೆ ಕಂಡರೂ ಅವರ ಕವಿತೆ ಹಲವು ಆಯಾಮಗಳಲ್ಲಿ ಚಾಚಿಕೊಳ್ಳುತ್ತದೆ. ಕವರಿಡಿದು ಕೂಳಿಗೆ ಕೂಗುವ ಹಸಿದವರಿಗಾಗಿ, ಬತ್ತಿಹೋಗಿರುವ ಎಣ್ಣೆ ಕುಡಿಕೆಯ ಕಣ್ಣಿನವರಿಗಾಗಿ, ಶ್ರಮದ ಶೂಲಕ್ಕೇರಿ ಸತ್ತವರಿಗಾಗಿ, ದೀಪಾವಳಿಯ ಬೆಳಕ ಕಾಣಲಾರದೆ ಕತ್ತಲಲ್ಲೇ ಬದುಕಿ, ಸತ್ತವರಿಗಾಗಿ'(ಕತ್ತಲ ರಾಜ್ಯದೊಳಗೆ) ಮಿಡಿಯುವ ಅವರ ಕವಿತೆಯ ಜೀವ ದ್ರವ್ಯ ಕೇರಿ ಮೇಗಲದ್ದು ಇದೇ ಹೆಸರಿನ ಅವರ ಕವಿತೆಯಲ್ಲಿ- ಕವಿ ತನ್ನ ಕಾವ್ಯವನ್ನು ನೀಲಗಾರರ ತಂಬೂರಿ ಹಾಡಿಗೆ ಅಪ್ಪ ಕುಡಿಸಿದ ಮೇಳಿಯ ಹಾಲಿಗೆ, ದುಡಿ ದುಡಿದು ದಣಿದ ಬೆವರ ಗಂಧವತಿಯಾದ ಅವ್ವ ಬಡಿಸಿದ ಬಿಸಿ ಮುದ್ದೆ ಬೆರಕೆ ಸೊಪ್ಪು ಉಪ್ಪೆಸರು ಖಾರಕ್ಕೆ, ಜಾತಿ ನಿಂದಕರ ಕಂಡು ಒಳಗೆ ಕುದಿಯುತ್ತಾ, ತಾನು ಕಟ್ಟುವ ಮೆಟ್ಟನ್ನು ಕಟ್ಟುವ ಅಪ್ಪನ ಉರಿ ಚಮ್ಮಾವುಗೆ ತನ್ನ ಕಾವ್ಯ ಎನ್ನುತ್ತಾ;

ಮೇಗಲ ಕೇರಿಯಲಿ ನಾಗೇರಾಗಿ ಸತ್ತ ದನವ
ಹೊತ್ತು ತಂದು ಸೂರ ಕೆಳಗೆ ಸಿಗಿದು ಹಾಕುವ
ಬಾಡಿನ ಬಣಚಲು ನನ್ನಟ್ಟಿ ಬಾಗಿಲ ತಳಿರು ತೋರಣ

ಎನ್ನುವ ಕವಿ, ಅಟ್ಟಿ ಜೀತಗಾರನ ಉಕ್ಕಿನ ಮೈಕಟ್ಟಿನಲ್ಲಿ ಅವನೊಡತಿ ಅರಳಿಸಿಕೊಂಡ ಹೊಕ್ಕಳ ಹೂಬಳ್ಳಿಯೆಂದೂ, ಆದಿ ಕಲ್ಯಾಣ ಕನಸಿದ ಪ್ರೀತಿ ಕೂಸೆಂದು ಹೇಳುವ ಮೂಲಕ- ವರ್ಣ ಜಾತಿಗಳ ಸಂಕರದಿಂದಾಚೆಗೆ ತುಡಿಯುವ ಮಾನವ ಪ್ರೇಮದ ಕನಸು ಕಂಡ ಬಸವಣ್ಣನ ಆದರ್ಶದ ಸಮಾಜದೆಡೆಗೆ ಚಾಚಿಕೊಳ್ಳುತ್ತದೆ.

ನರಕದ ರಾತ್ರಿಗಳನ್ನು ಕಳೆದು, ಮರಣದ ಮುಂಜಾವುಗಳನ್ನು ಬದುಕಾಗಿಸಿಕೊಂಡ ಜನರ ಸಾವನ್ನು ಈ ನೆಲದ ಸಾವಿನ ಪ್ರತಿಧ್ವನಿಗಳೆಂದು ಗುರುತಿಸುವ ಕವಿ.

ಕಪ್ಪು ಜನರ ರಕುತದ ಕೆಂಪು ಗಾರೆ
ಗುಲಾಮರ ಗುಂಡಿಗೆ ಖಂಡದ ಬಂಡೆಗಳು
ರೈತ-ಖೈದಿಗಳ ಜೀವನದಿಗಳ ಸಾವು ಹರಿದು ಹೆಪ್ಪುಗಟ್ಟಿದೆ ಅಲ್ಲಿ
ಈ ನೆಲದ ಸಾವುಗಳು

(ಈ ನೆಲದ ಸಾವುಗಳು)

ಮಣ್ಣಲ್ಲಿ ಮಣ್ಣಾಗಿರುವ ತನ್ನವರ ಹೆಣಗಳೊಂದಿಗೆ ಕವಿ ನಡೆಸುವ ಸಂವಾದದಂತಿರುವ 'ಸತ್ತು ಕೆಟ್ಟ ಕೇರಿಯ ನೆನೆದು' ಕವಿತೆಯಲ್ಲಿ-ಶೋಷಣೆಗೆ ಒಳಗಾದ ಸಮುದಾಯದ ವಾರಸುದಾರನಂತಿರುವ ನಿರೂಪಕನ ನಿವೇದನೆ – ಶೋಷಕರ ಮೇಲಿನ ಪ್ರತೀಕಾರದ ಹಲವು ಮುಖಗಳನ್ನು ತೆರೆದಿಡುತ್ತದೆ.

ನೀವು ಬಿಟ್ಟ ನಿಟ್ಟುಸಿರ ನನ್ನೆದೆಯ ತಿದಿಗೆ ತುಂಬಿರಿ
ಹಾರಿ ಬಿಡುವೆನು ನಿಮ್ಮೆಲ್ಲರ ಕೊರಗುಗಳ
ಅರವಟ್ಟಿ ಅಂಗಳಕೆ ರಣಹದ್ದುಗಳಾಗಿ
ದಯವಿಟ್ಟು ಎತ್ತಿ ಕೊಡಿ ನಿಮ್ಮ ಮಗ್ಗುಲಲೆ ಇರುವ
ಬಾರುಕೋಲು ಕುಡುಗೋಲುಗಳ ನನ್ನ ಕೈಗೆ
ನೇಯ್ದುಕೊಡಿ ನಿಮ್ಮ ನೋವಿನ ಹೊದಿಕೆಯ
ಹೊದ್ದು ನಿಲ್ಲುವೆನು ಆಕಾಶದುದ್ದಕೆ ಎದ್ದು''

ಎನ್ನುವ ಸಾಲುಗಳನ್ನು ಗಮನಿಸಿದಾಗ ತನ್ನವರು ಅನುಭವಿಸಿದ ನೋವು; ಹಿಂಸೆ, ಅವಮಾನಗಳಿಗೆ ಪ್ರತೀಕಾರವೊಂದೇ ಪರ್ಯಾಯವೇ? ಈ ಕವಿ ಇದುವರೆಗೆ ಕಾಯ್ದುಕೊಂಡಿದ್ದ ಸಂಯಮದ ಕಟ್ಟೆ ಇಷ್ಟು ಬೇಗ ಒಡೆಯಿತೆ? ಎಂದು ಯೋಚಿಸುತ್ತ ಮುಂದುವರಿದಂತೆ—

ದನಿ ಎತ್ತಲಾಗದೆ ಮಡುಗಟ್ಟಿದ ಮಾತುಗಳ ಕೂಡಿ
ಕೊಟ್ಟು ಬಿಡಿ ಬೇಗ ನಿಮ್ಮ ಹೊಟ್ಟೆಯ ಕಿಚ್ಚನ್ನೆಲ್ಲಾ
ನನ್ನ ಹೊಟ್ಟೆಗೆ ಹಚ್ಚುವ ಬರೆಯುವ ನನ್ನ ಕೈಗಳಿಗೆ
ಎಂದು ಶತಮಾನಗಳ ಅಡಿಯಿಂದ ಮಣ್ಣಿಗೆ ಮುಖವಿಟ್ಟ
ಜನ ಎದೆ ಸೀಳಿ ರಕುತ ಬಸಿದಾಗ ಈ ನೆಲ ಕೆಂಪಾಯಿತೆಂದು
ಹಸಿ ಹಸಿರಾಯಿತು.

ಎಂದು – ಈ ನೆಲದ ಸಮೃದ್ಧಿಯ ಹಿಂದಿನ ಬಡವರ ಬಲಿದಾನದ ನೆತ್ತರ ಗುರುತನ್ನು ಗುರುತಿಸುತ್ತಾರೆ. 'ಪಾಪದ ಹೂಗಳು' ಎಂಬ ಕವಿತೆಯಲ್ಲಿ 'ದೇವದಾಸಿ' ಎಂಬ ಅನಿಷ್ಠ ಆಚರಣೆಯ ಹಿನ್ನೆಲೆಯಲ್ಲಿ ನಡೆದ ಸ್ತ್ರೀ - ಶೋಷಣೆಯ ಘೋರ ಮುಖವನ್ನು ಕಾಣಿಸುತ್ತಾರೆ.

'ನಮ್ಮೂರ ಗಂಗೆಯಲ್ಲೊಂದು ಮಾತು'-ಕವಿತೆಯಲ್ಲಿ ಕವಿ, ಗಂಗೆಗೆ ತನ್ನ ತವರು ತೊರೆದು ಹೋಗಲೇ ಬೇಕಾದ ಅನಿವಾರ್ಯ ಬಂದಲ್ಲಿ- ಕವಿ ಮುಂದಿಡುವ ಈ ಬೇಡಿಕೆಗಳನ್ನು ಪೂರೈಸಿಯೇ ಹೋಗಬೇಕೆಂಬ ನಿಲುವಿನಲ್ಲಿ ಕವಿಗಿರುವ ಜೀವಪರ ಕಾಳಜಿ, ದೃಶ್ಯವಾದ ಮಾನವೀಯ ಅನುಕಂಪಗಳು ಅನಾವರಣಗೊಳ್ಳುತ್ತವೇ! ಗಂಜಿ ನೀರಿಗಾಗಿ ಹರಿವಾಣ ಹಾಸಿ, ಕಟ್ಟೆ ಕಟ್ಟೆಗೂ ಕಣ್ಣಿಟ್ಟು, ಎಣ್ಣೆ ದೀಪ ಹಚ್ಚಿಟ್ಟು, ಜೀವ ಕೈಯಲ್ಲಿಡಿದು ಕಾದು ಕುಳಿತಿರುವ ತನ್ನೂರಿನ ಜನಕ್ಕೆ ನಿರಾಸೆ ಮಾಡದೆ ಊರುಕೇರಿಗೆಲ್ಲಾ ಊಟ ಬಟ್ಟೆ ನಡೆಸೊ —

ಅಲ್ಲಾವುದೀನನ ದೀಪವ ಕೈಗೆ ಕೊಟ್ಟು ಹೋಗು
ತಲಕಾವೇರಿಯೊಳು ಅಕ್ಷಯ ಪಾತ್ರೆಯ ಇಟ್ಟು ಹೋಗು
ಒಂದಿಷ್ಟು ಪ್ರೀತಿ ಕರುಣೆಯ ಬಿಟ್ಟು ಹೋಗು

-ಎಂದು ವಿನಂತಿಸುತ್ತಾರೆ. ಕಳೆದ ನಾಲ್ಕೈದು ದಶಕಗಳಲ್ಲಿ-ಅಂಬೇಡ್ಕರ್ ಹಾಗೂ ದಲಿತರ ವಿಮೋಚನೆಗಾಗಿ ಅಂಬೇಡ್ಕರ್ ವಹಿಸಿದ ಪಾತ್ರವನ್ನು ಕುರಿತು ಬಹಳಷ್ಟು ಕವಿಗಳು ಬರೆದಿದ್ದಾರೆ ಎಂಬುದನ್ನು ಬಿಟ್ಟರೆ ಬಹುಪಾಲು ಕವಿತೆಗಳು ಭಾವುಕತೆಯ ಅಥವಾ ಅತಿಶಯೋಕ್ತಿಯ ಕಾರಣಗಳಿಂದಾಗಿ, ಒಳ್ಳೆಯ ಕವಿತೆಗಳಾಗುವಲ್ಲಿ ಸೋತಿರುವಂತಹದ್ದೆ ಹೆಚ್ಚು. ಶಂಕನಪುರ ಅವರ ಈ ಸಂಕಲನದಲ್ಲೂ ಬಾಬಾ

ಸಾಹೇಬರಿಗೊಂದು ಪತ್ರ ಎಂಬ ಕವಿತೆ ಇದ್ದು ದಲಿತರ ವಿಮೋಚನೆಗೆ ಅಂಬೇಡ್ಕರ್ ಹಿಡಿದ ಮಾರ್ಗ ಹಾಗೂ ನಡೆಸಿದ ಹೋರಾಟಗಳಿಗಿಂತ ಭಿನ್ನವೂ ಪರ್ಯಾಯವೂ ಆದ ಮಾರ್ಗಗಳನ್ನು ಶಂಕನಪುರ ಈ ಕವಿತೆಯಲ್ಲಿ ಕಾಣಿಸುತ್ತಾರೆ. ಈ ಕವಿ ಚಿತ್ರಿಸುವ ದಲಿತರ ಸ್ವಾಭಿಮಾನ, ಆತ್ಮಗೌರವಗಳಂತೂ ಅನನ್ಯವಾದುದಾಗಿದೆ. ಈ ದಲಿತರು ಚೌಡಾರ್ ಕೆರೆಯ ನೀರಿನ ಸ್ಪರ್ಶಕ್ಕಾಗಿ, ಕಾಳಾರಾಂ ಬದನವಾಳು ಗುಡಿಯ ಪ್ರವೇಶಕ್ಕಾಗಿ, ಹೋಗುವವರಲ್ಲ. ಬದಲಿಗೆ ತಮ್ಮ ಹಿತ್ತಲುಗಳಲ್ಲೇ ಸ್ವಾಭಿಮಾನದ ಕೊಳಗಳನ್ನು ಕಟ್ಟಿಕೊಂಡು ಅದರ ತಟದಲ್ಲೇ ಭೋದಿವೃಕ್ಷವ ನೆಟ್ಟುಕೊಂಡಿರುವ ಸ್ವಾಭಿಮಾನಿಗಳು! ಅಟ್ಟಿಗಳಲ್ಲೇ ಚೆನ್ನಯ್ಯ ಹೊನ್ನಯ್ಯರ ಗದ್ದುಗೆಗಳನ್ನು, ಊರೂರುಗಳಲ್ಲೂ ಬುದ್ಧವಿಹಾರ, ಭೀಮ ಭವನಗಳನ್ನೂ, ನಡುಮನೆಗಳಲ್ಲಿ ನಾಗಚಿತ್ತಗಳನ್ನು ಸಾಲದಕ್ಕೆ ಮಾರಿಗುಡಿಗಳಲ್ಲಿ ಕೋರೆಗಾಂವ್ ವೀರರು ಕೊಟ್ಟಿರುವ ಮದ್ದು ಗುಂಡು, ಕತ್ತಿ ಕೋವಿಗಳನ್ನು ಸಂಗ್ರಹಿಸಿಟ್ಟುಕೊಂಡು ಆತ್ಮರಕ್ಷಣೆಗೆ ಸಜ್ಜಾಗಿರುವ ವೀರಾಗ್ರಣಿಗಳೇ ಹೊರತು ಅಂಜುಬುರುಕರಲ್ಲ! ಅವರಿವರ ಮನೆಯ ಜೀತದ ಆಳುಗಳಾಗಿ ತಮ್ಮ ತನ್ನನ್ನೇ ಮರೆತವರನ್ನೂ, ಅಧಿಕಾರದ ಗದ್ದುಗೆಗಳಲ್ಲಿ ಕುಳಿತು ತಮ್ಮವರ ಒಳಿತನ್ನು ಮರೆತವರನ್ನು ಅನ್ಯಾಯಕಾರರೂ ಮೋಸಗಾರರೆಂದು ಕರೆಯಲಾಗಿದೆ. ಅಂಬೇಡ್ಕರ್ ಹಸನು ಮಾಡಿ ಉತ್ತು-ಬಿತ್ತು ಹೋದ ಹೊಲಕ್ಕೆ ಭರವಸೆಯ ಮಳೆ ಬಂದರೆ ಸಾಕು ಒಳ್ಳೆಯ ಪಸಲು ತೆಗೆಯಬಲ್ಲೆವೆಂಬ ಆಶಾವಾದೀ ಧೋರಣೆಯಿಂದ ಕವಿತೆ ಮುಗಿಯುತ್ತದೆ.

ಈ ಕವಿಯ ಕಾವ್ಯ ಸಾಮಗ್ರಿ ಹಲವು ಮೂಲದಿಂದ ಸಂಪನ್ನವಾದುದು; ಅದು ಕೇವಲ ತನ್ನ ವೈಯಕ್ತಿಕ ನೋವು-ನಲಿವುಗಳ ಅಥವಾ ತನ್ನ ಜನರ ಅವಮಾನ, ಶೋಷಣೆಗಳ ಮುಖವಾಣಿ.ಆಗಿ ನಿಂತು ಬಿಡುವಂಥಾದ್ದಲ್ಲ— ಇವುಗಳ ಜೊತೆಗೆ ವಚನ ಪರಂಪರೆ, ಪುರಾಣ, ಇತಿಹಾಸ, ಜನಪದ, ಮಂಟೆಸ್ವಾಮಿ ಮೌಖಿಕ ಕಾವ್ಯ ಪರಂಪರೆ, ಬುಡಕಟ್ಟು ಹಾಗೂ ಚರಿತ್ರೆಯಲ್ಲಿ ಇನ್ನೂ ದಾಖಲಾಗದ ಅದೆಷ್ಟೋ ಜನಸಂಸ್ಕೃತಿಗಳ ಸ್ಮೃತಿಕೋಶವನ್ನು ತನ್ನ ಕಾವ್ಯ ಸಾಮಾಗ್ರಿಯಾಗಿ ಸಮರ್ಥವಾಗಿ ದುಡಿಸಿಕೊಳ್ಳುವುದರ ಮೂಲಕ ಶಂಕನಪುರ, ಕಂಬಾರ, ಶಿವಪ್ರಕಾಶ್, ಕೆ.ಬಿ. ಸಿದ್ಧಯ್ಯ, ಸಿದ್ಧಲಿಂಗಯ್ಯರನ್ನು ನೆನಪಿಸುತ್ತಾರೆ, ಅದಲ್ಲದೆ ತಮ್ಮ ಕವಿತೆಯ ತೆಕ್ಕೆಗೆ ಬುದ್ಧ ಬಸವ, ವಚನಕಾರರ ಬದುಕು-ಬರಹ, ಸ್ಮೃತಿಗಳನ್ನು-ತತ್ವಗಳನ್ನು ಯಥೇಚ್ಛವಾಗಿ ಆದರೆ ಅಷ್ಟೇ ಸಹಜವಾಗಿ ಬಳಸಿಕೊಳ್ಳುತ್ತಾರೆ, ಉರಿಚಮ್ಮಾವುಗೆ ಜಾಡ ಹಿಡಿದು ಬರಿಗದ್ದಿಗೆ ಮೇಲೆ ಬೋಳು ಜಂಗಮನ ತಂಬೂರಿ ಪದ, ಉರಿಲಿಂಗನು ಉರಿಕಾತಿ ತಿರುಮಂತ್ರವು, ಉರಿನೆಲದ ನಾಲಿಗೆ ಶಕುನ, ಇಂತಹ ಕವಿತೆಗಳ ಮೂಲಕ ಕವಿ ವಚನ ಪರಿಭಾಷೆ ಹಾಗೂ ತಾತ್ವಿಕತೆಗಳನ್ನು - ತನ್ನ ಕಾಲದ-ತಲ್ಲಣಗಳೊಂದಿಗೆ ಅನುಸಂಧಾನ ಗೈಯ್ಯುವ ಪ್ರಯತ್ನವನ್ನು ಮಾಡಿದ್ದಾರೆ. ಈ ಕವಿತೆಗಳ ಲಯ ಮತ್ತು ಕಾವ್ಯ ಸೌಂದರ್ಯವೂ ಉನ್ನತ ಮಟ್ಟದ್ದಾಗಿರುವುದನ್ನು ಗಮನಿಸಬಹುದಾಗಿದೆ. ಈ ಕವಿತೆಗಳ ಅಂತ್ಯದಲ್ಲಿ ಕವಿ ಬಳಸುವ ಆಂಗ್ಲಭಾಷೆಯ ಸಾಲುಗಳು ಕವಿತೆಯ ತಾತ್ವಿಕತೆಗಾಗಲಿ, ಅದರೊಳಗಿನ ಯಾವ ಸಂವಾದಕ್ಕಾಗಲಿ ತಾಳೆಯಾಗದೆ, ಅದೊಂದು ಗೀಳಿನಂತೆ ಕಾಣುತ್ತದೆ ಎಂಬುದನ್ನು ಹೊರತುಪಡಿಸಿದರೆ ಶಂಕನಪುರ ತನ್ನ ಅತ್ಯುತ್ತಮವಾದ ಕಾವ್ಯದ ನಡಿಗೆಯನ್ನು ಕಂಡುಕೊಂಡಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಹಾಳಾದ ಆದಿ ಕಲ್ಯಾಣ ನಾಳೆ ಹಾಲು
ಸಾಗರವಾಗಲವ್ವ
ಕಲ್ಲು ಬಸವ ಗುಟುರು ಹಾಕಿ

ಕಲ್ಲು ಸಕ್ಕರೆ ಮಾತಾಡಲೆಂದು ಹಾರೈಸುವ ಕವಿಯ ಆಶಯ ಉನ್ನತವಾಗಿ ಕಾಣುತ್ತದೆ.

ಕಳಿಂಗದ ಖಡ್ಗ ಮತ್ತು ಜೇತವನದ ಸೂಲು, ಬಿಸಿಲವ್ವನ ಗುಡಿಯೊಳಗೆ ಬುದ್ಧ ಪಾದ, ಅರಳೀ ಮರದ ಹಾಡು, ಇಂತಹ ಕವಿತೆಗಳಲ್ಲಿ ಬುದ್ಧ ತೋರಿಸಿದ ಕರುಣೆ ಶಾಂತಿಗಳ ಬೆಳಕಿನ ಪುನರಾಗಮನವಿದೆ,


ದಲಿತ ಬಂಡಾಯದ ಕವಿಗಳು ಬುದ್ಧ-ಬಸವನ ಬಗೆಗೆ ತೋರುವ ನಿರ್ಲಕ್ಷ್ಯ, ಕೋಪ, ಸಿಟ್ಟು ಶಂಕನಪುರ ಅವರಲ್ಲೂ ಮುಂದುವರಿದಿದೆ.

ನಿಮ್ಮ ಸಂಗಡ ಸಿಟ್ಟು ಬೇಸರ ನನಗೆ
ಅದಕ್ಕೆ ನಾನು ನಿಮ್ಮನ್ನು
ತಾತಾ ಅನ್ನಲಾರೆ.
ನಿಮ್ಮ ಹುಟ್ಟು ಹಬ್ಬದ ಮಿಠಾಯಿ ತಿನ್ನಲಾರೆ
ಇತಿಹಾಸದೊಳು ಎಂದೆಂದಿಗೂ
ನಿಮ್ಮ ಕ್ಷಮಿಸಲಾರೆ
ಗೊತ್ತಿಲ್ಲ ನನಗೆ, ಗೊತ್ತಿದೆ ನಿಮಗೆ
ನನ್ನ ಮಟ್ಟಿಗೆ ನೀವು ನಡೆದುಕೊಂಡಿದ್ದು ಸರಿ ಇಲ್ಲ
ದೇಶದೊಳು ಎಲ್ಲಾದರೂ ಸರಿ
ಗಟ್ಟಿಯಾಗಿ ಕೂಗಿ
ನಿಮಗೆ ಧಿಕ್ಕಾರ ಹೇಳುತ್ತೇನೆ


ಗಾಂಧೀ ಮತ್ತು ಅಂಬೇಡ್ಕರ್ ನಡುವೆ ದಲಿತರ ಪರವಾಗಿ ಇದ್ದ; ಅಥವಾ ಅವರಿಬ್ಬರಿಗೂ ಈ ವಿಷಯದಲ್ಲಿದ್ದ ತಾತ್ವಿಕ ಸಂಘರ್ಷಗಳು ಏನೇ ಇರಬಹುದು ಅದರಾಚೆಗೆ ಕವಿಯಾಗಿ ಶಂಕನಪುರ ಅವರ ಇತರ ಸಫಲ ಕವಿತೆಗಳ ಮಧ್ಯೆ ಈ ಕವಿತೆಯನ್ನು ಶಂಕನಪುರ ನಿರ್ವಹಿಸಿದ ರೀತಿ ಗಾಂಧೀಜಿಯೊಡನೆ ನಡೆಸಿದ ಆತ್ಮವಿಮರ್ಶೆಯೆಂಬಂತಿದ್ದು ಕವಿತೆಯ ಕಲಾತ್ಮಕ ಗುಣ ಮಸಕಾಗಿರುವುದಂತೂ ಸತ್ಯ!

ಉಳಿದಂತೆ ಕಾಲಚಕ್ರದಡಿ ಮುರಿದು ಮುಕ್ಕಾದ ಗುಡಿ ಚರ್ಚು, ಮಸೀದಿ, ಮಂದಿರಗಳ ಬಗೆಗೆ ಸಹಾನುಭೂತಿ, (ನಾಳೆ ಹುಟ್ಟುವ ನೀಲಿ ಸೂರ್ಯ) 'ಜೈಲುಗೋರಿಯೊಳಗೆ ಹಕ್ಕಿ ಕೂಗುತ್ತಿದೆ, ನಮ್ಮೂರ ಜನಪದ ಗೋರಿಗಳು, ಕೆಂಪಾಗಲಿ ಕನಸುಗಳು, ಸಂಕ್ರಾಂತಿ ಹಾಡು, ಕವಿತೆಗಳೂ ತಮ್ಮ ಸಾಮಾಜಿಕ ಕಳಕಳಿಯ ತುಡಿತದಿಂದಾಗಿ ಈ ಕವಿಯ ಜೀವಪರತೆ, ಮಾನವೀಯ ಅನುಕಂಪಗಳು, ಅನನ್ಯವಾಗಿ ಅಭಿವ್ಯಕ್ತಗೊಂಡಿರುವುದರ ದ್ಯೋತಕದಂತಿದೆ.

ಶಂಕನಪುರ ಅವರ ನೀಳ್ಗವಿತೆಗಳನ್ನು ಗಮನಿಸಿದರೆ ಖಂಡಕಾವ್ಯದದ ನಿರಂತರ ಓಘ, ಅಂತರ್ಲಯ, ನುಡಿಗಟ್ಟು ಎಲ್ಲವನ್ನೂ ಶಕ್ತಿಯುತವಾಗಿ ಕಟ್ಟಿಕೊಡಬಲ್ಲ ಕಸುವು ಅವರ ಲೇಖನಿಗಿರುವುದನ್ನು ಈ ಕವಿತೆಗಳು ತೋರಿಸಿಕೊಟ್ಟಿವೆ. ಕಂಬಾರ ಹಾಗೂ ಶಿವಪ್ರಕಾಶರು ಹೇಳಿರುವಂತೆ ''ಹಿಂದನ್ನು-ಮುಂದನ್ನೂ ಒಟ್ಟಿಗೆ ಇಂದಿನ ವಾಸ್ತವದೊಂದಿಗೆ ಇಟ್ಟು ನೋಡುವ, ಪರಂಪರೆಗಳೊಂದಿಗೆ ನಿರಂತರವಾಗಿ ಅನುಸಂಧಾನಗೈಯ್ಯುವ ಶಕ್ತಿ ಶಂಕನಪುರ ಅವರ ಕಾವ್ಯಕ್ಕಿದೆ.'' ಅದಕ್ಕೆ ಬೇಕಾದ ಸಮರ್ಥವಾದ ಕಸುಬುಗಾರಿಕೆ ಅವರಿಗಿದ್ದು- ಇನ್ನೂ ಉತ್ತಮವಾದ ಹೊಸ ದಾರಿಗಳ ಹುಡುಕಾಟದೆಡೆಗೆ ಅವರ ಕಾವ್ಯ ಸಾಗುತ್ತಿರುವ ಎಲ್ಲ ಸುಳಿವುಗಳನ್ನು ಈ ಸಂಕಲನ ನಿಚ್ಚಳವಾಗಿ ಸಾಬೀತುಪಡಿಸುವಂತಿದೆ ಎಂದು ಸಂತಸದಿಂದ ಅವರ ಮುಂದಿನ ನಡೆಯನ್ನು ನಿರೀಕ್ಷಿಸುವಂತೆ ಈ ಕೃತಿ ಮಾಡಿದೆ!



ಟಿ. ಯಲ್ಲಪ್ಪ
ನಂ. ೩೮, ಕಾವ್ಯ, ಎ. ನಾರಾಯಣಪುರ ಬಡಾವಣೆ
ದೂರವಾಣಿ ನಗರ ಅಂಚೆ, ಬೆಂಗಳೂರು - ೫೬೦ ೦೧೬
ಮೊಬೈಲ್ : ೯೦೦೨೬೫೮೧೯



ಪ್ರತಿಕ್ರಿಯೆ

ಜನವರಿ-ಫೆಬ್ರವರಿಯ ಪತ್ರಿಕೆಯಲ್ಲಿ ಶ್ರೀ ಭೀಮಸೇನ ಜೋಶಿಯವರ ಕುರಿತು, ಅವರ ಮಗ ಶ್ರೀರಾಘವೇಂದ್ರ ಬರೆದ ಲೇಖನ ಓದಿದೆ. 'ಸರಳ ಮತ್ತು ಸಾದಾ ಸ್ವಭಾವದವರಿಗೆ ಟೋಪ್ಪಿಗೆ ಹಾಕಿ ನಾಗಪೂರಕ್ಕೆ ಹಾರಿಹೋದ ಭೀಮಣ್ಣ ಹಾಗೂ ಮೊದಲಿನ ಕುಟುಂಬವನ್ನು ಸಾಧ್ಯವಾದಷ್ಟು ನಿರ್ಲಕ್ಷಿಸಿರಿ' ಎಂಬ ವಾಕ್ಯಗಳನ್ನು ಓದಿ ನಾನು ಭೀಮಸೇನ ಜೋಶಿಯವರ ಮೇಲೆ ತಿಂಗಳ ಹಿಂದೆ ಬರೆದ ಲೇಖನದ ನೆನಪಾಯಿತು. ಆ ಲೇಖನವನ್ನು ಕೆಲವು ದಿನ ಪತ್ರಿಕೆಗಳಿಗೆ ಕಳಿಸಿದ್ದೆ.

ಕತ್ತಲಲ್ಲಿ ನಿಂತವರು

ಶ್ರೀ ಭೀಮಸೇನ ಜೋಶಿ ಗತಿಸಿ ಒಂದೂವರೆ ತಿಂಗಳಾಗಿವೆ. ಆದರೆ ಈ ಗಾನಗಂಧರ್ವರ ಕುರಿತು, ಪತ್ರಿಕೆಯಲ್ಲಿ ಲೇಖನಗಳ ಮಹಾಪೂರ ನಿಲ್ಲುವ ಲಕ್ಷಣ ಕಾಣುತ್ತಿಲ್ಲ. ಅವರ ಗಾಯನ ಮಾಡಿದ ಮೋಡಿಯೇ ಅಂತಹದ್ದು. ಅತ್ಯಂತ ಜನಪ್ರಿಯ ಶಾಸ್ತ್ರೀಯ ಸಂಗೀತಗಾರರಾದ ಜೋಶಿಯವರು ದಂತಕಥೆ ಆಗುವಷ್ಟೂ ಪ್ರಸಿದ್ಧರಾದರು. ಅವರ ನಿಕಟವರ್ತಿಗಳು, ಆಪ್ತರೆಂದು ಗುರುತಿಸಿಕೊಂಡವರು, ಅವರ ಶಿಷ್ಯಂದಿರು ತಮ್ಮ ಲೇಖನದ ಮಾಧ್ಯಮದಿಂದ, ಪಂಡನತರ ಗಾಯನದ ಹಾಗೂ ವೈಯಕ್ತಿಕ ಜೀವನದ ಬಗ್ಗೆ ಬರೆದು ಶ್ರದ್ಧಾಂಜಲಿ ಅರ್ಪಿಸಿದರು. ಆದರೆ, ಈ ಎಲ್ಲ ಲೇಖನಗಳಲ್ಲಿ ಶ್ರೀ ಜೋಶಿಯವರ ಜೀವನದ ಭಾಗವಾಗಿದ್ದ ಓರ್ವ ವ್ಯಕ್ತಿಯ ಉಲ್ಲೇಖವಾಗದಿರುವದು ದೌರ್ಭಾಗ್ಯ ಹಾಗೂ ಖೇದಕರ. ಇದು ಅಪರೋಕ್ಷವಾಗಿ ಓರ್ವ ನಿಷ್ಕಪಟಿ ಹಾಗೂ ಸಾತ್ವಿಕ ವ್ಯಕ್ತಿಗೆ ಆದ ಅಪಚಾರ. ಆ ವ್ಯಕ್ತಿಯೇ ಶ್ರೀ ಜೋಶಿಯವರ ಮೊದಲನೆಯ ಪತ್ನಿ ಶ್ರೀಮತಿ ಸುನಂದಾ ಜೋಶಿ. ಈ ಹೆಣ್ಣುಮಗಳ ಬಗ್ಗೆ ಹೆಚ್ಚಾಗಿ ಯಾರೂ ಪ್ರಸ್ತಾಪಿಸಲಿಲ್ಲ ಹಾಗೂ ಆ ವಿಷಯಕ್ಕೆ ಪ್ರಾಮುಖ್ಯತೆಯನ್ನು ಏಕೆ ಕೊಡಲಿಲ್ಲ ಎಂಬುವದು ಸೋಜಿಗದ ವಿಷಯವೇನಲ್ಲ. ಯಾಕೆಂದರೆ, ಆಕೆಯ ಅಸ್ತಿತ್ವದ ಅರಿವನ್ನು ಜನರಿಂದ ಮರೆಮಾಡುವ

ವ್ಯವಸ್ಥಿತ ಸಂಚು ಮೊದಲಿನಿಂದಲೂ ನಡೆದಿತ್ತು. ಇದು ಒಬ್ಬ ನತದೃಷ್ಟ ಬಾಯಿ ಸತ್ತ ಹೆಣ್ಣುಮಗಳಿಗೆ ಮಾಡಿದ ಘೋರ ಅನ್ಯಾಯ ಎಂಬುದು ಅಷ್ಟೇ ನಿಜ. ಲೋಕ ಪ್ರಸಿದ್ಧರಾದ ಜನರ ವೈಯಕ್ತಿಕ ಜೀವನದ ಬಗ್ಗೆ ಸಾರ್ವಜನಿಕರಿಗೆ ಕುತೂಹಲ ಇರುವುದು ಸಾಮಾನ್ಯ. ಅದು ತಪ್ಪೂ ಅಲ್ಲ. ಆತನ ಜೀವನ ತೆರೆದ ಪುಸ್ತಕದ ಹಾಗೆ ಇರಬೇಕಾಗುತ್ತದೆ. ಪ್ರಶಂಸೆಗಳ ಜೊತೆಗೆ ಪ್ರಹಾರಗಳನ್ನೂ ಕಲಾಕಾರನು ಸಮಚಿತ್ತದಿಂದ ಸ್ವೀಕರಿಸಬೇಕಾಗುತ್ತದೆ. ಆತನಿಗೆ ಲೋಕದ ಕಣ್ಣು ತನ್ನ ಚಟುವಟಿಕೆಗಳ ಮೇಲೆ ಇರುತ್ತದೆ ಎಂಬುದನ್ನು ಅರಿತು ಎಚ್ಚರದಿಂದ ನಡೆಯಬೇಕಾಗುತ್ತದೆ. ಆದರೆ, ಆತ ತನ್ನಲ್ಲಿರುವ ನ್ಯೂನತೆ ಹಾಗೂ ದೋಷಗಳನ್ನು ಮುಚ್ಚಿಡುವ ಪ್ರಯತ್ನ ಮಾಡಿದರೆ ಅದು ಸತ್ಯಕ್ಕೆ ಹಾಗೂ ಆತ್ಮಸಾಕ್ಷಿಗೆ ಅಪಚಾರ ಎಸಗಿದಂತಾಗುತ್ತದೆ.

ಅಖಂಡ ೪೫ ವರ್ಷ ಭೀಮಸೇನರ ಕೂಡ ಸಂಸಾರ ಮಾಡಿ ನಾಲ್ಕು ಮಕ್ಕಳನ್ನು ಕೊಟ್ಟು ಇಪ್ಪತ್ತು ವರ್ಷಗಳ ಹಿಂದೆ ಸ್ವರ್ಗವಾಸಿಯಾದ ಸುನಂದಾ, ಭೀಮಸೇನರ ಮೊದಲನೆಯ ಪತ್ನಿ. ಬಹಳ ಜನರಿಗ ಆಕೆ ಅಪರಿಚಿತಳೆ. ಸ್ಥೂಲವಾಗಿ ಆ ಹೆಣ್ಣುಮಗಳ ಪರಿಚಯ ಮಾಡಬೇಕಾಗಿದ್ದು ಅವಶ್ಯ ಎಂದು ನನಗೆ ಅನಿಸುತ್ತದೆ. ಸುನಂದಾಳ ತಂದೆ ಅನಂತಾಚಾರ್ಯ ಕಟ್ಟಿ. ಬಾಗಿಲುಕೋಟೆ ಜಿಲ್ಲೆಯ ಬದಾಮಿಯವರು ಭೀಮಸೇನರ ಸೋದರಮಾವ. ಭೀಮಸೇನರ ಪ್ರಾರಂಭದ ಕಷ್ಟದ ದಿನಗಳಲ್ಲಿ ಸಂಗೀತದ ಕಾರ್ಯಕ್ರಮವಿಟ್ಟು ಸಹಾಯಮಾಡಿದವರು. ಭೀಮಸೇನರ ತಂದೆ ಗುರುರಾಜಾಚಾರ್ಯರು ತಾರುಣ್ಯಕ್ಕೆ ಬಂದ ಮಗ ಎಲ್ಲಿ ಹಾದಿ ಬಿಡುವನೋ ಎಂದು ಜೋರು ಜುಲುಮೆ ಹಾಗೂ ಭಾವನಾತ್ಮಕ ಒತ್ತಡಗಳನ್ನು ಭೀಮಸೇನರ ಮೇಲೆ ಹೇರಿ ಸುನಂದಾಳ ಕೂಡ ಲಗ್ನ ಮಾಡಿದರು. ಆದರೆ, ಭೀಮಸೇನರು ಈಗಾಗಲೇ ವತ್ಸಲಾರ ಪ್ರೇಮಪಾಶದ ಬಂಧನದಲ್ಲಿದ್ದರು. ಗುರುರಾಜಾಚಾರ್ಯರದು ವೈದಿಕ ಮನೆತನ. ಮನೆಯಲ್ಲಿ ಮಡಿ ಜಾಸ್ತಿ. ಆದರೆ ವತ್ಸಲಾ ಮುಧೋಳಕರ ಮನೆಯಲ್ಲಿ ಮಹಾರಾಷ್ಟ್ರದ ವಾತಾವರಣ. ಆ ಕಾಲದಲ್ಲಿ ಸ್ವಲ್ಪ ಮುಂದುವರೆದವರೇ. ಅವರ ಮನೆಯಲ್ಲಿ ಮಡಿ ಹಾಗೂ ಪೂಜೆಗಳ ಬಗ್ಗೆ ಅನಾಸಕ್ತಿ. ಕರ್ಮಠರಾದ ಗುರುರಾಜಾಚಾರ್ಯರು ಆ ಮನೆತನದ ಬಗ್ಗೆ ಪೂರ್ವಗ್ರಹಪೀಡಿತರಾಗಿದ್ದರು. ಹೀಗಾಗಿ ಗಡಿಬಿಡಿಯಿಂದ ಪರದೇಶಿ ಮಗಳು ಸುನಂದಾಳನ್ನು ಮಗನಿಗೆ ಗಂಟು ಹಾಕಿದರೇನೋ ನಿಜ. ಆದರೆ, ತುಂಬ ಅವಸರ ಮಾಡಿ ಭೀಮಸೇನರ ಲಗ್ನ ಮಾಡಿದರು ಎಂಬ ಆಪಾದನೆ ಅವರ ಮೇಲೆ ಬಂತು. ವ್ಯಂಗ್ಯವೇನೆಂದರೆ – ಭೀಮಸೇನರ ತಾಯಿ ಏಳು ಮಕ್ಕಳನ್ನು ಹಡೆದು ನಿಧನರಾದ ಮೇಲೆ ಗುರುರಾಜಾಚಾರ್ಯರು ಮತ್ತೆ ಎರಡನೇ ಮದುವೆ ಮಾಡಿಕೊಂಡರು. ಇದರಿಂದ ಬೇಸರಗೊಂಡ ಭೀಮಸೇನರ ಹಠಕ್ಕೆ ಬಿದ್ದವರ ಹಾಗೆ, ತಾವು ಪ್ರೀತಿಸುತ್ತಿದ್ದ ವತ್ಸಲಾಳನ್ನು ಬಡೋದಾ ಪ್ರಾಂತದಲ್ಲಿ ಹೋಗಿ ಲಗ್ನವಾದರು. ಆವಾಗ ದ್ವಿಭಾರ್ಯಕಾಯದೆ ಇರಲಿಲ್ಲ. ಹೀಗಾಗಿ ಮದುವೆಗೆ ಯಾವುದೇ ಅಡೆತಡೆಗಳು ಉಂಟಾಗಲಿಲ್ಲ. ನೈತಿಕವಾಗಿ ಕುಸಿದಿದ್ದ ಗುರುರಾಜಾಚಾರ್ಯರು ಏನನ್ನೂ ಹೇಳುವ ಧೈರ್ಯ ಮಾಡಲಿಲ್ಲ. ಭೀಮಸೇನರ ಪುಣೆಯಲ್ಲಿ ಮನೆ ಮಾಡಿದರು. ಆದರೆ ಸುನಂದಾ ಹಾಗೂ ಆಕೆಯ ಮಕ್ಕಳು ಬಹಳ ವರ್ಷ ಬದಾಮಿಯಲ್ಲಿ ಇದ್ದರು. ಈ ಕಾಲಾವಧಿಯಲ್ಲಿ ವತ್ಸಲಾರ ವರ್ಚಸ್ಸು ಬೆಳೆಯಲಾರಂಭಿಸಿತು. ಸಾವಕಾಶವಾಗಿ ಭೀಮಸೇನರ ಮೇಲೆ ತಮ್ಮ ನಿಯಂತ್ರಣ ಸಾಧಿಸಿದರು. ಹಣಕಾಸಿನ ವ್ಯವಹಾರವನ್ನು ತಮ್ಮ ಕಡೆಗೆ ತೆಗೆದುಕೊಂಡರು. ಕಾರ್ಯಕ್ರಮಗಳ ದಿನಾಂಕ ನಿಶ್ಚಯ ಮಾಡುವವರೂ ಇವರೇ ನಗರದಲ್ಲಿ ಬೆಳೆದ ವತ್ಸಲಾರಿಗೆ ಪ್ರಸಾರ ಮಾಧ್ಯಮದ ಶಕ್ತಿಯ ಕಲ್ಪನೆ ಇತ್ತು. ಅದರ ಸಹಾಯದಿಂದ ಜನತೆಯ ಮುಂದೆ ತಮ್ಮ ಪ್ರತಿಮೆ ನಿರ್ಮಾಣ ಮಾಡಿದರು. ಭೀಮಸೇನರ ಮೊದಲಿನ ಹೆಂಡತಿಯನ್ನು ಜನ ಮರೆಯುವ ಹಾಗೆ ಮಾಡುವಲ್ಲಿ ಅವರು ಯಶಸ್ಸು ಸಾಧಿಸಿದರು. ಭೀಮಸೇನರ ಸುತ್ತ ಭದ್ರವಾದ ಕೋಟೆ ನಿರ್ಮಾಣ ಮಾಡಿದರು. ಜನರಿಗೆ ಅದನ್ನು ಭೇದಿಸಿ ಭೀಮಸೇನರನ್ನು ಭೆಟ್ಟಿಯಾಗುವದು ಸಾಧ್ಯವಾಗದ ಹಾಗೆ ನೋಡಿಕೊಂಡರು. ಭೀಮಸೇನರನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡರು.

ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಇದ್ದವರು ಶ್ರೀಮತಿ ಸುನಂದಾ ಜೋಶಿಯವರು. ಭೋಳೆ ಹಾಗೂ

ಮುಗ್ಧ ಸ್ವಭಾವದವರು. ನೋಡಲು ಟಿಪಿಕಲ ಉತ್ತರ ಕರ್ನಾಟಕದ ವೈದಿಕ ಬ್ರಾಹ್ಮಣ ಮುತ್ತೈದೆಯಂತೆ. ದೊಡ್ಡ ಕುಂಕುಮ, ಕೈತುಂಬಾ ಗಾಜಿನ ಬಳೆಗಳು, ಎರಡೂ ಗಲ್ಲಕ್ಕೆ ಅರಿಶಿಣ, ಅವರ ವೇಳೆಯೆಲ್ಲ ಮಡಿ, ದೇವರಪೂಜೆಯಲ್ಲೇ ಕಳೆಯುತ್ತಿತ್ತು. ಪಟ್ಟಣದ ಥಳಕು-ಬಳಕುಗಳನ್ನು ಅರಿಯದ ಅವರು ತಮ್ಮ ಇರುವಿಕೆ ಗೊತ್ತಾಗದಿರಲಿ ಎಂದು ಕತ್ತಲಲ್ಲಿ ಮರೆಯಾಗಿ ನಿಂತು ಪ್ರಚಾರ ಮಾಧ್ಯಮದಿಂದ ದೂರ ಉಳಿದವರು. ಜೀವನದ ಎಲ್ಲ ನೋವು ಹಾಗೂ ಕಹಿಗಳನ್ನು ನುಂಗಿ, ಅದಕ್ಕಾಗಿ ಯಾರಿಗೂ ದೋಷ ಕೊಡದೆ, ಇದು ತಮ್ಮ ಪ್ರಾರಬ್ಧ ಕರ್ಮ... ಇದನ್ನು ತಾನು ಅನುಭವಿಸಲೇಬೇಕು ಎಂದು, 'ನಾಹೀ ಕರ್ತಾ ಹರೀ ಕರ್ತಾ' ಎಂದು ದೇವರ ಮೇಲೆ ಹಾಕಿ, 'ನನ್ನ ಹಣೆಬರಹದಲ್ಲಿ ಬರೆದದ್ದು ಇಷ್ಟೇ' ಎಂದು ಸಮಾಧಾನದಿಂದ ಇದ್ದು, ಅನವದ್ಯವಾದ ಜೀವನ ನಡೆಸಿದರು. ಆದರೆ ಇಂತಹ ದೇವರಿಗೆ ಅಂಜಿ ನಡೆಯುವ ಸಂಭಾವಿತ ಹೆಣ್ಣುಮಗಳನ್ನು ಹಿಂದಕ್ಕೆ ತಳ್ಳಿ ಜನಸಾಮಾನ್ಯರ ಕಣ್ಣಿಗೆ ಬೀಳದಂತೆ ದೂರ ಇಡುವ ವ್ಯವಸ್ಥಿತ ಯೋಜನೆ ನಡೆಯಿತು ಎಂಬುದು ಸತ್ಯ ಕೂಡ. ಆದರೆ ಅದನ್ನು ರೂಪಿಸಿದ ರೂವಾರಿ ಯಾರು? ಇದರ ಹಿಂದೆ ಕಾಣದ ಕೈಗಳು ಯಾರವು? ಇದನ್ನು ಕಂಡುಹಿಡಿದು ಜಗತ್ತಿಗೆ ಸತ್ಯದ ಪರಿಚಯ ಮಾಡಿಕೊಡುವದು ಅವಶ್ಯವಾಗಿದೆ.

ಶ್ರೀ ಭೀಮಸೇನರು ನಿಧನರಾದ ಮರುದಿನ, ಅವರ ಮಗ ಶ್ರೀನಿವಾಸರು ಪ್ರಸಾರ ಮಾಧ್ಯಮಗಳಲ್ಲಿ ವಿಶೇಷವಾಗಿ ಮರಾಠಿ ಚಾನೆಲ್ಲುಗಳಲ್ಲಿ, ತಾವು ಜೋಷಿಯವರ ಕೊನೆಯ ಮಗ ಎಂದು ಎರಡೆರಡು ಸಾರೆ ಒತ್ತಿ ಹೇಳುವುದರ ಹಿಂದೆ ಕಾರಣವಾದರು ಏನು? ಅಂದರೆ, ಭೀಮಸೇನರ ವೈವಾಹಿಕ ಜೀವನ ಕೇವಲ ಎರಡನೇ ಹೆಂಡತಿಯ ಕೂಡ ಮಾತ್ರ ಸೀಮಿತವಿತ್ತು ಎಂದು ಜನರಿಗೆ ಬಿಂಬಿಸುವ ಪ್ರಯತ್ನವಿತ್ತೆ? ಆ ಭದ್ರಕೋಟೆಯಲ್ಲಿ ಏನು ನಡೆಯುತ್ತಿದೆ? ಅಲ್ಲಿ ನಡೆಯುತ್ತಿರುವ ರಾಜಕಾರಣವನ್ನು ಬಲ್ಲವರು, ಭೀಮಸೇನರ ಆಪ್ತ ಬಳಗದಲ್ಲಿರುವವರು. ಈ ವರೆಗೆ ಯಾವದೋ ಭಿಡೆ ಹಾಗೂ ಮುಲಾಜುಗಳಿಗೆ ಬಿದ್ದು ಬಾಯಿಗೆ ಬೀಗ ಹಾಕಿಕೊಂಡವರು, ತಮ್ಮ ಮೌನವ್ರತವನ್ನು ತ್ಯಜಿಸಿ ಸತ್ಯ ಸಂಗತಿಯನ್ನು ಜನರ ಮುಂದೆ ಇಡುವ ಧೈರ್ಯ ಮಾಡಬೇಕು. ಅಂಧಕಾರದಲ್ಲಿ ನಿಂತು ತನ್ನ ಅಸ್ಮಿತೆಯನ್ನು ಕಳೆದುಕೊಂಡ ಶ್ರೀಮತಿ ಸುನಂದಾ ಜೋಶಿಯವರ ಜೀವನದ ಮೇಲೆ ಪ್ರಕಾಶ ಚೆಲ್ಲುವ ಸಾಹಸ ಮಾಡಬೇಕು.

★

ದುರ್ದೈವವೆಂದರೆ ಆ ಲೇಖನವನ್ನು ಮುದ್ರಿಸುವ ಧೈರ್ಯ ಯಾವ ಪತ್ರಿಕೆಯೂ ಮಾಡಲಿಲ್ಲ, ಇದಕ್ಕೂ ಮುಂದೆ ಹೋಗಿ ಉತ್ತರ ಕರ್ನಾಟಕದ ದಿನಪತ್ರಿಕೆಯ ಸಹಸಂಪಾದಕರೊಬ್ಬರು ನನಗೆ ಫೋನು ಮಾಡಿ, ಮತ್ತೊಬ್ಬರ ವೈಯಕ್ತಿಕ ಜೀವನದಲ್ಲಿ ತಲೆ ಹಾಕುವದು ಸರಿ ಕಾಣುವದಿಲ್ಲ ಎಂಬ ಉಪದೇಶ ಕೂಡ ಮಾಡಿದರು. ಈ ರಾಘವೇಂದ್ರರ ಲೇಖನ ಅಪ್ರತ್ಯಕ್ಷವಾಗಿ, ನನ್ನ ಲೇಖನಕ್ಕೆ ಬಲ ತಂದುಕೊಟ್ಟಿದೆ. ಈಗಾದರೂ ಈ ಲೇಖನವನ್ನು ಅನುವಾದ ಮಾಡಿದವರೂ ಹಾಗೂ ಅವರ ಅಂತರಂಗದ, ಹತ್ತಿರ ಸಂಬಂಧಿಗಳು ಆದ ಶ್ರೀರಮಾಕಾಂತ ಜೋಶಿಯವರು ಎಲ್ಲ ವಿವರಗಳನ್ನು ಜನರ ಮುಂದೆ ಇಡುವದು ಸೂಕ್ತ ಎಂದು ನನ್ನ ಭಾವನೆ.


ಧನ್ಯವಾದಗಳು.

ಪ್ರಕಾಶ ಪರ್ವತೀಕರ

ನಂ. ೦೪೨, ೨ನೇ ದಕ್ಷಿಣ ಬೀದಿ, ಪೇಠಿಚೆಟ್ಟಿಪುರಮ್,

ರಾಯಪುರಮ್, ತಿರುಪುರ, ತಮಿಳುನಾಡು-೬೪೧೬೦೦೧

ದೂರವಾಣಿ : ೦೯೪೯೪೦೫೭೫೫೭, ೦೪೨೧-೪೩೨೬೪೧೪





ಆಫ್ರಿಕಾದ ಕಲಾಕೃತಿಗಳು



ಸಂಚಯ ಗ್ಯಾಲರಿ

SANCHAYA (Bi-Monthly), MAG(2) PRB-DECL : 309/94-95

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಿಗಂಜಿದೊಡೆಂತಯ್ಯ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯ?
ಚನ್ನಮಲ್ಲಿಕಾರ್ಜುನ ದೇವ ಕೇಳಯ್ಯ

ಅಕ್ಕ ಮಹಾದೇವಿ

Edited, Printed & Published by
D.V. PRAHLAD,
No. 100, 2nd Main, 6th Block
3rd Stage, 3rd Phase, Banashankari,
Bangalore - 560 085, Ph : 080-2679 1925